Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–16 | ಸಂಚಿಕೆ–53 | ಡಿಸೆಂಬರ್ 26, 2022–ಜನವರಿ 1, 2023 | ಪುಟ 16 | ರೂ. 10/–
Volume: 16 | Issue:53 | December 26, 2022-January 1, 2023 | Pages:16 | Price: 10/-



ಕುಡುತಿನಿ: ಉದ್ಯಮಿಗಳ ಬೇಲಿಯೊಳಗೆ ಬಂಧಿಯಾದ ಭೂಮಿ

ಕರೋನಾ: ಭಯ ಉತ್ಪಾದನೆ ಸಲ್ಲದು

ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಅಪಾಯ


ಭಾರತದ ರೈತಾಪಿ ಕೃಷಿ ಉಳಿಸಲು ಆಂದೋಲನ

ವಸಾಹತುಶಾಹಿ ದೊರೆಗಳ ಬಾಲಬಡುಕರಾಗಿ.. .. ..

'ವೀರ' ಸಾವರ್ಕರ್– ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಭಾಗ–9



ಡಾ.ಶಮ್ಸುಲ್ ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮಿಥ್ಯೆ 1 –'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎನ್ನುವ ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ ಗೂಡಿನಂತಿರುವ ಸಣ್ಣ ಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರ ಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿದ ಅವರು ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿ ಈಗ ಉಳಿಯಲಿಲ್ಲ.. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯಿಂದ ಆತಂಕಿತರಾಗಿದ್ದ ಬ್ರಿಟಿಷ್ ದೊರೆಗಳಿಗೆ ಕ್ಷಮಾಯಾಚನೆಯ ಅರ್ಜಿಯೊಂದಿಗೆ ತಮ್ಮ ರಾಜಕೀಯ ಬದುಕಿನ ಎರಡನೇ ಘಟ್ಟ ಆರಂಭಿಸಿದ ಸಾವರ್ಕರ್ ರಂತವರ ಸಹಾಯ ಬೇಕಿತ್ತು, ಅದಕ್ಕಾಗಿ ಅವರನ್ನು ಬಿಡುಗಡೆ ಮಾಡಿದರು ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು. ಸಾವರ್ಕರ್ ಅವರ ಆವಶ್ಯಕತೆಯನ್ನು ಈಡೇರಿಸಿದರು. ಸುಭಾಶ್‌ಚಂದ್ರ ಬೋಸ್‌ರಂತಹ ನಾಯಕರುಗಳು ಸಶಸ್ತ್ರ ಹೋರಾಟಗಳ ಮೂಲಕ ಭಾರತದಿಂದ ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯಬೇಕೆಂಬ ತಂತ್ರಗಳನ್ನು ಹೂಡುತ್ತಿದ್ದಾಗ ಬ್ರಿಟಿಷರ ಯುದ್ಧಕಾರ್ಯಾಚರಣೆಗೆ ಸಾವರ್ಕರ್‌ಅವರ ಸಂಪೂರ್ಣ ಬೆಂಬಲವು ಸುವ್ಯವಸ್ಥಿತ ಹಿಂದುತ್ವ ಸಂಚಿನ ಫಲವಾಗಿತ್ತು.

ಬ್ರಿಟಿಷ್ ಮಿಲಿಟರಿ ಸಂಚುಗಳಿಗೆ ಬೆಂಬಲ ನೀಡುವಲ್ಲಿ ಸಾವರ್ಕರ್ ಅವರಲ್ಲಿ ಖಂಡಿತವಾಗಿಯೂ ಸಂದಿಗ್ಧವಿರಲಿಲ್ಲ. ವಸಾಹತುಶಾಹಿ ದೊರೆಗಳಿಗೆ ನೀಡುವ ನಿರ್ಲಜ್ಜ ಬೆಂಬಲವನ್ನು ಸಮರ್ಥಿಸುವ ಸಲುವಾಗಿ ಅವರು ವಿಚಿತ್ರ ಕುಂಟುನೆಪ ಒಂದನ್ನು ಮುಂದಿಟ್ಟರು. ಅವರ ತರ್ಕದ ಪ್ರಕಾರ:

ಒಟ್ಟಿನಲ್ಲಿ ನಮ್ಮ ಪರವಾಗಿರುವ ಹಾಗೂ ವಿರುದ್ಧವಾಗಿರುವ ಎಲ್ಲಾ ಸಾಧಕ ಬಾಧಕಗಳನ್ನು ಪರಿಶೀಲಿಸಿದರೆ, ಈ ಯುದ್ಧವು ನಮಗೆ ಒದಗಿಸಿದ ಅವಕಾಶಗಳನ್ನು ಬಳಸಿಕೊಳ್ಳುವುದು ಅತ್ಯುತ್ತಮ ಮಾರ್ಗವೆಂದು ಹೇಳಲು ನನಗೆ ಯಾವುದೇ ಹಿಂಜರಿಕೆಯಿಲ್ಲ, ನಮ್ಮ ಜನರಿಗೆ ಮಿಲಿಟರೀಕರಣ ಮತ್ತು ಕೈಗಾರಿಕೀಕರಣವನ್ನು ತರುವಲ್ಲಿ ಅವರು ಮಾಡುತ್ತಿರುವ ಸಹಾಯದ ಹಿನ್ನೆಲೆಯಲ್ಲಿ (ಬ್ರಿಟಿಷ್) ಸರ್ಕಾರವು ಪರಿಸ್ಥಿತಿಯ ಒತ್ತಡದಿಂದಾಗಿ ಸಿಲುಕಿ ನಡೆಸುತ್ತಿರುವ ಎಲ್ಲಾ ಯುದ್ಧ ಕಾರ್ಯಾಚರಣೆಗಳಲ್ಲಿ ಭಾಗವಹಿಸದೆ ಗತ್ಯಂತರವಿಲ್ಲ.

ಎರಡನೇ ವಿಶ್ವ ಮಹಾಯುದ್ಧದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ತಮ್ಮ ಭೂಸೇನೆಗೆ ಹೊಸ ಸೈನಿಕರನ್ನು ನೇಮಕ ಮಾಡಿಕೊಳ್ಳಬೇಕೆಂದು ನಿರ್ಧರಿಸಿದಾಗ, ಸಾವರ್ಕರ್ ಅವರ ನೇರ ಅಧಿಪತ್ಯದಲ್ಲಿನ ಹಿಂದೂ ಮಹಾಸಭಾವು ಈ ಸಾಹಸದಲ್ಲಿ ದೊಡ್ಡ ಸಂಖ್ಯೆಯ ಹಿಂದೂಗಳನ್ನು ಸೇರಿಸಲು ತೀರ್ಮಾನಿಸಿತು. ಇದನ್ನು ಮದುರಾದಲ್ಲಿ ನಡೆದ ಹಿಂದೂ ಮಹಾಸಭಾದ ಅಧಿವೇಶನದಲ್ಲಿ ಪ್ರತಿನಿಧಿಗಳಿಗೆ ಸಾವರ್ಕರ್ ಅವರು ವರದಿ ಮಾಡಿದ್ದರು:

ಸಹಜವಾಗಿಯೇ, ಪ್ರಾಯೋಗಿಕ ರಾಜಕೀಯದ ನಿಜವಾದ ಪರಿಜ್ಞಾನದೊಂದಿಗೆ ಹಿಂದೂ ಮಹಾಸಭಾವು, ಭಾರತದ ರಕ್ಷಣೆಯ ಪ್ರಶ್ನೆ ಮತ್ತು ಭಾರತದಲ್ಲಿ ಹೊಸ ಮಿಲಿಟರಿ ಸೇನೆಯನ್ನು ಜಮಾಯಿಸುವ ವಿಚಾರಕ್ಕೆ ಸಂಬಂಧಪಟ್ಟಂತೆ, ಬ್ರಿಟಿಷ್ ಸರ್ಕಾರದ ಎಲ್ಲಾ ಯುದ್ಧ ಕಾರ್ಯಾಚರಣೆಗಳಲ್ಲಿ ಭಾಗವಹಿಸಲು ನಿರ್ಧರಿಸಿದೆ.

ಆ ಪ್ರಸ್ತಾಪದ ವಿರುದ್ಧ ಸಾಮಾನ್ಯ ಭಾರತೀಯರ ಎಲ್ಲಾ ವರ್ಗಗಳಲ್ಲಿ ಪ್ರಬಲ ಅಸಮಾಧಾನ ಬಲಗೊಳ್ಳುತ್ತಿರುವ ಸಂಗತಿ ಸಾವರ್ಕರ್ ಅವರ ಅರಿವಿಗೆ ಬಂದಿರಲಿಲ್ಲವಂತೇನಲ್ಲ. ಬ್ರಿಟಿಷರೊಂದಿಗೆ ಅವರ ಯುದ್ಧ ಕಾರ್ಯಾಚರಣೆಗೆ ಸಹಕಾರ ನೀಡುವ ಹಿಂದೂ ಮಹಾಸಭಾದ ತೀರ್ಮಾನದ ಯಾವುದೇ ಟೀಕೆಯನ್ನು ಸಾವರ್ಕರ್ ಹೀಗೆ ತಳ್ಳಿಹಾಕುತ್ತಿದ್ದರು:

ಸಾಮಾನ್ಯವಾಗಿ ಬ್ರಿಟಿಷರ ಹಿತಾಸಕ್ತಿಗಳು ಭಾರತೀಯರ ಹಿತಾಸಕ್ತಿಗಳಿಗೆ ವಿರುದ್ಧವಾದುದು, ಬ್ರಿಟಿಷ್ ಸರ್ಕಾರದೊಂದಿಗೆ ಕೈ ಜೋಡಿಸುವ ಯಾವುದೇ ಹೆಜ್ಜೆಯು ಅತ್ಯವಶ್ಯವಾಗಿ ಶರಣಾಗತಿಯ, ದೇಶ ವಿರೋಧಿ ಕ್ರಮವಾಗುತ್ತದೆ, ಬ್ರಿಟಿಷರಿಗೆ ಅನುಕೂಲವಾಗುತ್ತದೆ ಮತ್ತು ಆದ್ದರಿಂದ ಬ್ರಿಟಿಷರೊಂದಿಗಿನ ಸಹಕಾರ ಯಾವುದೇ ಕಾರಣದಲ್ಲೂ ಮತ್ತು ಎಲ್ಲಾ ಸಂದರ್ಭಗಳಲ್ಲಿಯೂ ದೇಶವಿರೋಧಿಯಾಗುತ್ತದೆ ಮತ್ತು ಖಂಡನಾರ್ಹವಾದುದು ಎಂದು ಭಾರತದ ಸಾರ್ವಜನಿಕರು ಭಾವಿಸುವುದು ವಾಡಿಕೆಯಾಗಿದೆ. ಆದರೆ ಅವೆಲ್ಲವೂ ರಾಜಕೀಯ ಮೂರ್ಖತನವೆಂದು ಸಾವರ್ಕರ್ ತಳ್ಳಿಹಾಕುತ್ತಾರೆ.

ಒಂದು ಕಡೆಯಲ್ಲಿ, ನೇತಾಜಿ ಬೋಸ್ ಅಂಥವರು ಭಾರತದ ವಿಮೋಚನೆಗಾಗಿ ಜರ್ಮನರು ಮತ್ತು ಜಪಾನಿಗಳ ಸಹಾಯ ಪಡೆಯುವ ಮಿಲಿಟರಿ ತಂತ್ರಗಳಲ್ಲಿ ನಿರತರಾಗಿದ್ದರೆ, ಅತ್ತ ಸಾವರ್ಕರ್ ಬ್ರಿಟಿಷ್ ವಸಾಹತುಶಾಹಿ ದೊರೆಗಳಿಗೆ ನೇರವಾಗಿ ನೆರವು ನೀಡುವುದರಲ್ಲಿ ನಿರತರಾಗಿದ್ದರು. ಇದು ನೇತಾಜಿಯವರು ಎತ್ತಿಹಿಡಿಯುತ್ತಿದ್ದ ಧ್ಯೇಯಗಳಿಗೆ ಸಂಪೂರ್ಣವಾಗಿ ದ್ರೋಹ ಬಗೆಯುವುದಾಗಿತ್ತು. ಸಾವರ್ಕರ್ ಮತ್ತು ಹಿಂದೂ ಮಹಾಸಭಾ ಬ್ರಿಟಿಷ್ ಸರ್ಕಾರದೊಂದಿಗೆ ಬಹಿರಂಗವಾಗಿ ನಿಂತಿದ್ದರು, ಮತ್ತು ನೇತಾಜಿಯವರ ಆಝಾದ್ ಹಿಂದ್ ಫೌಜ್ (ಐಎನ್‌ಎ)ನ ಸಾವಿರಾರು ಧೀರೋದಾತ್ತ ಸೈನಿಕರನ್ನು ಬ್ರಿಟಿಷ್ ಸರ್ಕಾರ ಕೊಂದು ಹಾಕಿತು ಮತ್ತು ಶಕ್ತಿಗುಂದಿಸಿತು. ಸಾವರ್ಕರ್ ಮದುರಾದಲ್ಲಿ ತನ್ನ ಅನುಯಾಯಿಗಳಿಗೆ 'ಯೂರೋಪಿಯನ್ನರ ಪ್ರಭಾವದಿಂದ ಏಶಿಯಾವನ್ನು ವಿಮೋಚನೆಗೊಳಿಸುವ ಘೋಷಿತ ಉದ್ದೇಶದಿಂದ ಜಪಾನಿನ ಸೇನೆಯು ಮುನ್ನುಗ್ಗುತ್ತಿರುವಾಗ, ಬ್ರಿಟಿಷ್ ಸರ್ಕಾರಕ್ಕೆ ಅದರ ಸೇನಾ ಬಲಕ್ಕೆ ದೊಡ್ಡ ಸಂಖ್ಯೆಯಲ್ಲಿ ಭಾರತೀಯರ ಅಗತ್ಯವಿರುವುದರಿಂದ ನಾವು ಅವರಿಗೆ ಸಹಾಯ ಮಾಡಬೇಕು.' ಎಂದು ಹೇಳುತ್ತಾ, ಬ್ರಿಟಿಷರ ಯುದ್ಧತಂತ್ರವನ್ನು ಹೀಗೆ ಹೊಗಳಿದರು:

ಜಪಾನಿನೊಂದಿಗೆ ಯುದ್ಧ ಶುರುವಾಗಿದ್ದೇ ಆದರೆ, ಎಲ್ಲಾ ಯುದ್ಧ ಸನ್ನಾಹಕ್ಕೂ ಭಾರತವೇ ಕೇಂದ್ರ ಬಿಂದುವಾಗಬೇಕಾಗುತ್ತದೆ. ಹತ್ತಾರು ಲಕ್ಷ ಬಲಹೊಂದಿರುವ ಸೈನ್ಯವನ್ನು ಸಿದ್ಧಪಡಿಸಬೇಕಾದ ಸಾಧ್ಯತೆಗಳಿವೆ, ನಮ್ಮ ಗಡಿಗಳಲ್ಲಿ ಜಪಾನಿಯರು ಮುಂದುವರಿಯುವಲ್ಲಿ ಎಷ್ಟು ಬೇಗ ಯಶಸ್ವಿಯಾಗುತ್ತಾರೋ ಅಷ್ಟು ಬೇಗ ಭಾರತೀಯ ಅಧಿಕಾರಿಗಳ ಅಡಿಯಲ್ಲಿ ಭಾರತೀಯರನ್ನೇ ನೇಮಿಸಿಕೊಳ್ಳಬೇಕಾಗುತ್ತದೆ, ಎಂದು ಎಂದಿನಂತೆ ಬ್ರಿಟಿಷರು ತಮ್ಮ ದೂರದೃಷ್ಟಿಯ ವ್ಯವಹಾರ ಕೌಶಲ್ಯದಿಂದ ಅರ್ಥಮಾಡಿಕೊಂಡರು.

ಮುಂದಿನ ಕೆಲವು ವರ್ಷಗಳನ್ನು ಬ್ರಿಟಿಷ್ ಶಸ್ತ್ರಸಜ್ಜಿತ ಸೇನೆಗೆ ನೇಮಕಾತಿ ಕ್ಯಾಂಪುಗಳನ್ನು ಸಂಘಟಿಸುವುದರಲ್ಲೇ ಸಾವರ್ಕರ್ ಕಾಲ ಕಳೆದರು; ನಂತರದಲ್ಲಿ ಅದೇ ಸೇನೆ ಈಶಾನ್ಯ ಗಡಿಗಳ ವಿವಿಧ ಭಾಗಗಳಲ್ಲಿ ಐಎನ್‌ಎ ಕಾರ್ಯಕರ್ತರನ್ನು ಕೊಂದು ಹಾಕುತ್ತದೆ ಮತ್ತು ಶಕ್ತಿಗುಂದಿಸುತ್ತದೆ. ಹಿಂದೂ ಮಹಾಸಭಾವು ಮದುರಾ ಸಮ್ಮೇಳನದಲ್ಲಿ 'ತುರ್ತುಕಾರ್ಯಕ್ರಮ'ವೊಂದನ್ನು ಅಂಗೀಕರಿಸಿ, ಎಷ್ಟು ಸಾಧ್ಯವೋ ಅಷ್ಟು ಬೇಗ ಹಿಂದೂಗಳು ಸೇನೆಗೆ, ನೌಕಾಸೇನೆಗೆ ಮತ್ತು ವಾಯುಸೇನೆಗೆ ಪ್ರವೇಶ ಪಡೆಯಬೇಕು ಎಂಬ ಮಹತ್ವದ ನಿರ್ಧಾರ ಮಾಡಿತು. ಹಿಂದೂಮಹಾಸಭಾದ ಪ್ರಯತ್ನ ಮಾತ್ರದಿಂದಲೇ ಒಂದು ವರ್ಷದಲ್ಲಿ ಬ್ರಿಟಿಷ್ ಸಶಸ್ತ್ರ ಸೇನೆಗೆ ಒಂದು ಲಕ್ಷ ಹಿಂದೂಗಳು ನೇಮಕವಾಗಿದ್ದಾರೆ ಎಂದು ಕೂಡ ಅವರು ಅಲ್ಲಿ ಮಾಹಿತಿ ನೀಡಿದರು.

ಆಶ್ಚರ್ಯಕರ ಸಂಗತಿಯೇನೆಂದರೆ, ಸಾವರ್ಕರ್ ಅವರ ಈ ಎಲ್ಲಾ ಘೋರ ದೇಶವಿರೋಧಿ ಆಲೋಚನೆಗಳು ಮತ್ತು ಕುಟಿಲತಂತ್ರಗಳ ಹೊರತಾಗಿಯೂ ಅವರೊಬ್ಬ ಮಹಾನ್ ದೇಶಭಕ್ತ ಎಂದು ಹೊಗಳುತ್ತಲೇ ಇರುವ ಜನರು ಇದ್ದಾರೆ. ಸಾವರ್ಕರ್ ಮತ್ತು ಹಿಂದೂ ಮಹಾಸಭಾ ಎಷ್ಟು ಪ್ರಬಲವಾಗಿ ಬ್ರಿಟಿಷರ ಬಾಲಬಡುಕರಾಗಿದ್ದರು ಎನ್ನುವುದನ್ನು ಹಿಂದೂ ಮಹಾಸಭಾವು ಸ್ವಾತಂತ್ರ್ಯ ಪೂರ್ವದಲ್ಲಿ ಹೊರತಂದ ಪುಸ್ತಕವನ್ನು ಇಣುಕಿ ನೋಡಿದರೆ ತಿಳಿಯುತ್ತದೆ. 1941 ರಲ್ಲಿ ಪ್ರಕಟವಾದ ಈ ಪುಸ್ತಕದ ಹೆಸರು ಸ್ವಲ್ಪ ಉದ್ದವಾಗಿಯೇ ಇದೆ: ವಿನಾಯಕ ದಾಮೋದರ ಸಾವರ್ಕರ್ ಅವರ ಕ್ಷಿಪ್ರ ಪ್ರವಾಸದ ಪ್ರಚಾರ: ಡಿಸೆಂಬರ್ 1937 ರಿಂದ ಅಕ್ಟೋಬರ್ 1941 ರವರೆಗೆ ಅವರ ಪ್ರಚಾರ ರೂಪದ ಪ್ರವಾಸಗಳು ಸಂದರ್ಶನಗಳು – ಅಧ್ಯಕ್ಷರ ದಿನಚರಿಯಿಂದ ತುಣುಕುಗಳು– ಅದು ಸಾವರ್ಕರ್ ಅವರ ಆತ್ಮಗೆಳೆಯ ಎ ಎಸ್ ಭಿಡೆಯವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಆ ಪುಸ್ತಕದ ಮುನ್ನುಡಿಯಲ್ಲಿ ಹೇಳಿದಂತೆ:

ಈ ಪುಸ್ತಕವು ಪ್ರಥಮತಃ, ವಿಶೇಷವಾಗಿ ಹಿಂದೂ ಮಹಾಸಭಾ ಚಳವಳಿಯ ಪ್ರಚಾರಕರು, ಕಾರ್ಯಕರ್ತರು ಮತ್ತು ಮುಖಂಡರುಗಳಿಗೆ ಹಾಗೂ ಬಹುವಾಗಿ ಹಿಂದೂ ಸಾರ್ವಜನಿಕರಿಗೆ, ಹಿಂದೂಗಳು ಇಂದು ಎದುರಿಸುತ್ತಿರುವ ಹಲವಾರು ಸವಿಸ್ತಾರವಾದ ಪ್ರಶ್ನೆಗಳು ಮತ್ತು ಸಮಸ್ಯೆಗಳಿಗೆ ಹಿಂದೂ ಸಂಘಟನಾ ಚಳವಳಿಯ ಮೂಲಭೂತ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಅಳವಡಿಸುವ ನಿಲುವುಗಳ ಮೇಲೆ ಬೆಳಕು ಚೆಲ್ಲುವ ಒಂದು ಅಧಿಕಾರಯುತವಾದ ಪಠ್ಯ ಹಾಗೂ ವಿಶ್ವಾಸಾರ್ಹವಾದ ಮಾರ್ಗದರ್ಶಿಯಾಗಬೇಕು ಎಂಬುದಕ್ಕಾಗಿಯೇ ಇದನ್ನು ಪ್ರಕಟಿಸಲಾಯಿತು.

ಆ ಪುಸ್ತಕವು ಹಿಂದೂ ಮಹಾಸಭಾದ ಪ್ರತಿಯೊಂದು ಘಟಕಕ್ಕೂ ಕಡ್ಡಾಯವಾದುದಾಗಿತ್ತು, ಅದು ಕಾರ್ಯಕರ್ತರಿಗೆ ರಾಜಕೀಯ ಶಿಕ್ಷಣ ನೀಡಲು ಮಾತ್ರವಾಗಿರದೇ ವಿವಿಧ ವಿಚಾರಗಳಲ್ಲಿ ನಿಲುವುಗಳನ್ನು ಸ್ಪಷ್ಟಪಡಿಸಲು ಕೂಡ ಒಂದು ಮಾರ್ಗದರ್ಶಿ ಪುಸ್ತಕವಾಗಿತ್ತು. ಈ 'ಹಿಂದುತ್ವ ಮಾರ್ಗದರ್ಶಿ ಸೂತ್ರ' ವನ್ನು ಒಳಗೊಂಡಿರುವ ವಿಷಯಗಳನ್ನು ಸಾವರ್ಕರ್ ಅವರು ಮಾತ್ರವೇ ಬರೆದಿದ್ದು ಮತ್ತು ಮಾತನಾಡಿದ್ದು ಎಂಬ ಬಹು ಮುಖ್ಯವಾದ ಅಂಶವನ್ನು ಇಲ್ಲಿ ಅಲಕ್ಷಿಸಬಾರದು. ಆ ಪುಸ್ತಕದಿಂದ ಉದ್ಧರಿಸಿದ ಭಾಗಗಳು ಹಿಂದುತ್ವದ ನೈಜ ಮುಖವನ್ನು ತೋರಿಸುತ್ತವೆ, ಸಾವರ್ಕರ್ ಅವರ ನೇತೃತ್ವದಲ್ಲಿ ಅದು ಬ್ರಿಟಿಷರ ಕೈಗೊಂಬೆಯಾಗಿತ್ತು ಎನ್ನುವುದನ್ನು ಬಯಲು ಮಾಡುತ್ತದೆ. ಸಾವರ್ಕರ್ ಅವರು ಮಹಾನ್ ವಿಚಾರವಂತರು ಮತ್ತು ರಾಷ್ಟ್ರೀಯವಾದಿಯಾಗಿದ್ದರು ಎನ್ನುವುದು ಹಿಂದುತ್ವ ಪಡೆಯ ಅಭಿಪ್ರಾಯ, ಆದರೆ ಸ್ವಾತಂತ್ರ್ಯಾನಂತರ 'ಖೋಟಾ ಜಾತ್ಯತೀತವಾದಿಗಳು' (ಸ್ಯೂಡೋ ಸೆಕ್ಯುಲರಿಸ್ಟ್ಸ್) ಪಿತೂರಿ ಮಾಡಿ ಸಾವರ್ಕರ್ ಅವರನ್ನು ಮೂಲೆಗುಂಪು ಮಾಡಿದ್ದಾರೆ ಎಂದು ಸಾವರ್ಕರ್‌ವಾದಿಗಳು ದೂರುತ್ತಾರೆ. ಸಾವರ್ಕರ್ ಅವರು ಅಂತಹ ಉದಾತ್ತಗುಣದವರಾಗಿದ್ದರು ಎನ್ನುವುದು ಅವರ ಪ್ರಕಾರ ನಿಜವೇ ಆಗಿದ್ದರೆ, ಅವರ ಉದಾತ್ತಗುಣ ಈಗಿನ ತಲೆಮಾರಿನವರಿಗೂ ಗೊತ್ತಾಗುವಂತೆ ಆ ಪುಸ್ತಕವನ್ನು ಅವರು ಮರುಮುದ್ರಣ ಮಾಡಲಿ! ಆ ಪುಸ್ತಕದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಬ್ರಿಟಿಷರ ಯುದ್ಧ ಸನ್ನಾಹಕ್ಕೆ ಸೇರಿಕೊಳ್ಳುವ ಅಗತ್ಯವಿದೆ ಎನ್ನುವುದಕ್ಕೆ ಸಾವರ್ಕರ್ ಅವರು ಒತ್ತುಕೊಡುವಾಗಲೇ, ಹಿಂದೂ ಮಹಾಸಭಾದ ಕಾರ್ಯಕರ್ತರಿಗೆ ಅವರು ಈ ಕೆಳಗಿನ ನಿರ್ದೇಶನವನ್ನು ನೀಡಿದರು:

ಬ್ರಿಟಿಷರೊಂದಿಗಿನ ಅನಿವಾರ್ಯವಾದ ಸಹಕಾರವನ್ನು ನಿಮ್ಮದೇ ದೇಶಕ್ಕೆ ಲಾಭವಾಗುವಂತೆ ಮಾರ್ಪಾಟು ಮಾಡಿ. ಏಕೆಂದರೆ ಇವತ್ತಿನ ಪರಿಸ್ಥಿತಿಯಲ್ಲಿ ಹಾಗೆ ಮಾಡುವುದು ಸಾಧ್ಯವಿದೆ. ಹೋರಾಡುತ್ತಿರುವ ಶಕ್ತಿಗಳೊಂದಿಗೆ ತಾವು ಸೇರುವುದಿಲ್ಲ ಎಂಬ ಒಂದೇ ಕಾರಣಕ್ಕೆ ಶಸ್ತ್ರಸಜ್ಜಿತ ಆಕ್ರಮಣದ ಎದುರಲ್ಲಿಯೂ ಅಪ್ಪಟ ಅಹಿಂಸೆ ಹಾಗೂ ಪ್ರತಿರೋಧ ಮಾಡದಿರುವ ನೀತಿಗೆಟ್ಟ ಹಾಗೂ ಬೂಟಾಟಿಕೆಯ ಗೀಳಿನ ಕಾರಣದಿಂದಲೋ

ಪುಟ 4 ಕ್ಕೆ

ಸಂಪಾದಕೀಯ

ಕೊರೋನಾ ಸೋಂಕಿನ ಬಗ್ಗೆ ಭಯ ಹುಟ್ಟಿಸುವುದು ಸಲ್ಲದು

ಕೊರೋನಾ ಸಾಂಕ್ರಾಮಿಕ ಸೋಂಕಿನ ಪರಿವರ್ತಿತ ವೈರಾಣು ತಳಿ ಕ್ಷಿಪ್ರ ಗತಿಯಿಂದ ಅಲೆಯೋಪಾಧಿಯಲ್ಲಿ ಹರಡುತ್ತಿರುವ ಬಗ್ಗೆ ಜಗತ್ತಿನ ವಿವಿಧ ದೇಶಗಳಿಂದ ವರದಿಗಳು ಬರುತ್ತಿವೆ. ಇದನ್ನು ಅನುಸರಿಸಿ ಭಾರತ ದೇಶದಲ್ಲಿಯೂ ಬಿಗಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆಯೂ ಪೂರ್ವಾಭ್ಯಾಸಗಳು ಆರಂಭಗೊಂಡಿವೆ. ಅಮೇರಿಕಾ, ಚೀನಾ ಮತ್ತಿತರೆ ದೇಶಗಳಲ್ಲಿ ಇದರ ಹಬ್ಬುವಿಕೆ ಮತ್ತು ಪರಿಣಾಮಗಳು ಅತೀ ವ್ಯಾಪಕವೆಂದು ವರದಿ ಮಾಡಲಾಗುತ್ತಿದೆ. ವಿಶೇಷವಾಗಿ, ಚೀನಾದಲ್ಲಿ ಸಾವುಗಳ ಸ್ಫೋಟವೇ ನಡೆದಿದೆ ಎಂದೂ, ಅಲ್ಲಾದ ತಪ್ಪುಗಳ ಬಗ್ಗೆ ಕೆಲವು ಮಾಧ್ಯಮಗಳು ಉಸಿರುಗಟ್ಟಿ ಸುದ್ದಿ ಹಂಚುತ್ತಿವೆ. ಇನ್ನೂ ಕೆಲವರು ಮುಂದುವರಿದು ಭಾರತದಲ್ಲಿ ಈಗ ಕೊರೋನಾದ ಹಾವಳಿ ಇಲ್ಲದೇ ಸ್ಥಿರವಾಗಿರುವಲ್ಲಿ ಮೋದಿಯವರ ಚಾಣಾಕ್ಷತೆ, ಕೈಗೊಂಡ ಕ್ರಮಗಳ ಹಿರಿಮೆ ಕಾರಣವೆಂದೂ ಹಾಡಿ ಹೊಗಳಲಾಗುತ್ತಿದೆ. ಮತ್ತು ಈ ವಿಷಯದಲ್ಲು ತುಲನೆ ಮಾಡುತ್ತಾ ನೆರೆಯ ಚೀನಾವನ್ನು ಅನಾರೋಗ್ಯಕರವಾಗಿ ಅಪಹಾಸ್ಯ ಮಾಡಿ ಸಂತೋಷಿಸಲಾಗುತ್ತಿತ್ತು. ಕೊರೋನಾ ವೈರಸ್ಸಿನ ಸಹಜ ಹುಟ್ಟು ಮತ್ತು ಬೆಳವಣಿಗೆಗಳ ಬಗ್ಗೆ ಪರಿವಿರದ ಅಥವಾ ಅದನ್ನು ಅರಿಯುವ ಮನಸ್ಸಿಲ್ಲದವರು ಚೀನಾವೇ ಹುಟ್ಟಿಸಿದ ವೈರಸ್ ಇದೀಗ ಸುನಾಮಿಯಂತೆ ಚೀನಾವನ್ನೇ ಬಲಿ ಪಡೆಯುತ್ತಿದೆ ಎಂಬಂತಹ ಅಜ್ಞಾನದ ಹೇಳಿಕೆಗಳನ್ನು ನೀಡಿದ್ದಕ್ಕೂ ಬರವಿರಲಿಲ್ಲ.

ಈ ಸೋಂಕು ಸ್ಫೋಟಕ್ಕೆ ಕಾರಣ ಚೀನಾದ ಕೆಳ ಮಟ್ಟದ ಲಸಿಕೆಗಳು, ಅದರ ತಂತ್ರಜ್ಞಾನ ಕಾರಣವೆಂದೂ, ಭಾರತ ಅದರಲ್ಲೂ ಮೇಲ್ಮಟ್ಟದಲ್ಲಿದೆ ಎಂಬ ವ್ಯಾಖ್ಯಾನಗಳೂ ಹೊರ ಬಂದಿವೆ. ಭಾರತ ಮತ್ತು ಚೀನಾದ ನಡುವೆ ಗಡಿ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಇದ್ದರೂ ಅದನ್ನು ಇಂತಹ ಗಂಭೀರ ಸನ್ನಿವೇಶದಲ್ಲಿ ದುರ್ಬಳಕೆ ಮಾಡುವುದು ಸರಿಯಲ್ಲ, ಸೌಜನ್ಯವಲ್ಲ ಎನ್ನುವ ಕನಿಷ್ಠ ಮಾನವೀಯ ತಿಳುವಳಿಕೆಯನ್ನು ಕೆಲವರು ಮರೆತಿದ್ದಾರೆ.

ಇರಲಿ, ಆದರೆ ಹೀಗೆ ಬೀಗುತ್ತಿದ್ದ ಬೆನ್ನಲ್ಲೇ ಭಾರತದಲ್ಲಿಯೂ ಅಂತಹ ಸ್ಫೋಟ ಸಂಭವಿಸಬಹುದು, ಮುಂಜಾಗರೂಕತಾ ಸಿದ್ಧತೆ ಮಾಡಿಕೊಳ್ಳ ಬೇಕು ಎಂಬ ತರಾತುರಿಗಳು ಏಕಾಏಕಿ ಹೊರ ಬಿದ್ದಿರುವುದು ಸುರಕ್ಷತೆಯ ಹೇಳಿಕೆಗಳ ಸೋಗನ್ನು ಬಯಲು ಮಾಡಿದೆ. ಒಂದು ಮೊದಲ ಹೇಳಿಕೆಗಳು ಸುಳ್ಳಾಗಿರಬೇಕು, ಇಲ್ಲವೇ ಸರಕಾರ ಈ ಸನ್ನಿವೇಶವನ್ನು ವಿಜೃಂಭಿಸಿ ತನ್ನದೇ ಆದ ಅಜೆಂಡಾದ ಜಾರಿಗೆ ಯತ್ನಿಸುತ್ತಿರಬೇಕು ಎನ್ನುವ ಅನುಮಾನಗಳಿಗೆ ಕಾರಣವಾಗಿದೆ. ಈಗಾಗಲೇ ಕೊರೋನಾ ಸೋಂಕು ಹಬ್ಬುಬಹುದಾಗಿದ್ದು ಭಾರತ್ ಜೋಡೋ ಪಾದಯಾತ್ರೆ ನಿಲ್ಲಿಸಬೇಕೆಂದು ಕೆಂದ್ರ ಆರೋಗ್ಯ ಸಚಿವರು ಪತ್ರದ ಮೂಲಕ ಸೂಚಿಸಿದ್ದನ್ನು ದುರುದ್ದೇಶದ್ದು ಎಂದು ಪ್ರಶ್ನಿಸಲಾಗುತ್ತಿದೆ. ಅನೇಕ ಜನರ ಜೀವಗಳನ್ನು ಮತ್ತು ಆರ್ಥಿಕ ಕುಸಿತವನ್ನು ಉಂಟು ಮಾಡಿ ಅಪಾರ ಪ್ರಮಾಣದ ಹಾನಿಯನ್ನುಂಟು ಮಾಡುವ, ಮಾಡಿದ ಕೊರೋನ ಸೋಂಕು ರೋಗದ ಬಗೆಗೆ ಅವಿಶ್ವಾಸ ಹುಟ್ಟುವಂತಹ ನಡೆಗಳನ್ನು ಕೇಂದ್ರ ಸರ್ಕಾರವೇ ಮಾಡುವುದು ಅಕ್ಷಮ್ಯವಾಗುತ್ತದೆ. ಈ ವಿಷಯದಲ್ಲಿ ಸರಕಾರದ ಗಂಭೀರವಾದ ನುಡಿ ಮತ್ತು ನಡೆ ಅಗತ್ಯವಾಗಿದೆ.

ಕೊರೋನಾ ಸೋಂಕಿನಿಂದ ಈ ಹಿಂದೆ ಭಾರತದಲ್ಲಿಯೂ ಅಪಾರ ಸಾವು ನೋವುಗಳು ಮತ್ತು ಆರ್ಥಿಕ ಹಾನಿ ಆ ಮೂಲಕ ಜನ ಜೀವನದ ದುಸ್ತರವನ್ನು ಕಂಡಾಗಿದೆ. ಸೀಲ್ಡೌನ್, ಲಾಕ್ ಡೌನ್ ಗಳಂತಹ ನಿಯಮ ಹೇರಿಕೆಯ ದುಷ್ಪರಿಣಾಮಗಳನ್ನು ಕಂಡಾಗಿದೆ. ಇದರಲ್ಲಿ ತೀವ್ರ ನಷ್ಟ ಅನುಭವಿಸಿದವರು ದುಡಿಯುವ ಜನ, ಬಡ ಜನ. ಅಂತಹ ಅಪಾರ ಹಾನಿ,ಸಾವು, ನೋವು– ದುಃಖಗಳಿಂದ ದೇಶ ಹೊರ ಬರುತ್ತಿರುವ ಹೊತ್ತಿನಲ್ಲಿ ಅಂತಹದೊಂದು ಭೀಕರ ಸನ್ನಿವೇಶ ಸೃಷ್ಟಿಯಾಗಬಹುದು ಎನ್ನುವುದೇ ಅಘಾತಕಾರಿಯಾಗಿರುತ್ತದೆ. ಆದ್ದರಿಂದ ಸರ್ಕಾರ ವಸ್ತುನಿಷ್ಠವಾದ ಮಾಹಿತಿಗಳೊಂದಿಗೆ ಜನತೆಯಲ್ಲಿ ಜಾಗೃತಿಯನ್ನು ಉಂಟುಮಾಡುವುದು ಅಗತ್ಯವೇ ಹೊರತು ಭಯವನ್ನು ಉತ್ಪಾದಿಸುವುದು ಅಲ್ಲ. ಕೊರೋನಾ ವೈರಸ್ ರೂಪಾಂತರಗೊಳ್ಳುವ ಒಂದು ತಳಿ ಎನ್ನುವುದು ವೈಜ್ಞಾನಿಕವಾದ ಅಂಶವಾಗಿರುವುದನ್ನು ವಸ್ತುನಿಷ್ಠವಾಗಿ ಜನತೆಗೆ ಮನವರಿಕೆ ಮಾಡಬೇಕಾಗಿದೆ. ಮೊದಲಿನ ಎರಡು ಅಲೆಗಳಿಗಿಂತ ಮೂರನೇ ಅಲೆಯಲ್ಲಿ ಆಗಲೇ ಪರಿಣಾಮ ಬೀರುವುದರಲ್ಲಿ ದುರ್ಬಲವಾಗಿದ್ದು ನಂತರದ ವಿವಿಧ ಕಡೆಗಳಲ್ಲಿ ಬಂದ ಅಲೆಗಳು ಕೋರೋನಾದ ಹಾನಿ ಸಾಮರ್ಥ್ಯ ಅಥವಾ ಅದನ್ನು ಎದುರಿಸಲು ಈಗಾಗಲೇ ಜನರಲ್ಲಿ ಬೆಳೆದಿರುವ ಹಾರ್ಡ್ ಇಮ್ಯೂನಿಟಿ ಮುಂತಾದವುಗಳನ್ನು ಪೂರ್ವಸಿದ್ಧತೆಯಲ್ಲಿ ಗಣನೆಗೆ ತೆಗೆದುಕೊಳ್ಳಬೇಕು. ರೂಪಾಂತರಿ ತಳಿ ಬಿ.ಎಫ್.7 ಎಷ್ಟು ಹಾನಿ ಉಂಟು ಮಾಡಬಲ್ಲದು ಎಂಬುದೂ ಕೂಡ ನಿಕಟ ಅಧ್ಯಯನದಿಂದ ತಿಳಿಯಬಲ್ಲುದು. ಈಗಾಗಲೇ ಈ ತಳಿ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಕೇರಳ, ಗುಜರಾತ್ ಕಡೆಗಳಲ್ಲಿ ಹಿಂದಿನ ಜೂನ್–ಜೂಲೈ ತಿಂಗಳುಗಳಲ್ಲಿ ಕಾಣಿಸಿಕೊಂಡದ್ದು ಖಚಿತವಾಗಿದೆ. ವೈದ್ಯರ ಪ್ರಕಾರ ಈ ತಳಿ ಸಾವು ತರುವಂತ ಅಪಾಯವನ್ನು ಉಂಟು ಮಾಡಿಲ್ಲ ಎನ್ನುವುದು ಒಂದು ಸಮಾಧಾನಕರ ಅಂಶವೂ ಆಗಿದೆ. ಸರಕಾರ ಈ ಸೋಂಕಿನ ವಿಸ್ತರಣೆಯನ್ನು ತಡೆಯಲು ಮತ್ತು ಸೋಂಕು ತಗಲಿದಾಗ ಸೂಕ್ತ ಚಿಕಿತ್ಸೆ ನೀಡಲು ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಲೇ ಈ ಬಗೆಗಿನ ಕಪೋಲಕಲ್ಪಿತ ವರದಿಗಳನ್ನು ತುಂಡರಿಸಿ ವಾಸ್ತವವನ್ನು ಜನತೆಗೆ ಮನವರಿಕೆ ಮಾಡಿಕೊಡಬೇಕು. ಲಸಿಕೆ ಡೋಸ್ ಗಳಿಂದಲೇ ಈ ಸೋಂಕನ್ನು, ಸಾವನ್ನು ತಡೆಗಟ್ಟುತ್ತೇವೆ ಎಂದು ಹೇಳಲು ಯಾವುದೇ ಖಚಿತವಾದ ದತ್ತಾಂಶಗಳು ಇಲ್ಲಿಯವರೆಗೂ ಲಭ್ಯವಿಲ್ಲ ಎನ್ನುವುದನ್ನು ಗಮನಿಸಬೇಕು. ಮೇಲಾಗಿ ಈ ಲಸಿಕೆಗಳ ನೀಡಿಕೆಯ ನಂತರದಲ್ಲಿ ಆದ ಪರಿಣಾಮಗಳ ಬಗ್ಗೆ ಈ ಸೋಂಕಿನ ವೈರಸ್ಸು ಬೀರುತ್ತಿರುವ ಪರಿಣಾಮಗಳ ಬಗ್ಗೆ ವಿವರವಾದ ಅಧ್ಯಯನಗಳು ನಡೆಯುತ್ತಿವೆಯೇ ಎನ್ನುವುದು ಎಲ್ಲೂ ಗೊತ್ತಾಗಿಲ್ಲ. ಇತ್ತೀಚೆಗೆ ಯುವಜನರಲ್ಲಿಯೂ ಹೆಚ್ಚುತ್ತಿರುವ ಹೃದಯಘಾತದಂತಹ ಪ್ರಶ್ನೆಗಳಿಗೆ ಕೊರೋನ ಸೋಂಕಿನ ಸಂಬಂಧವಿದೆಯೇ ಎನ್ನುವ ಅನುಮಾನಗಳಿಗೂ ಪರಿಹಾರ ಸಿಕ್ಕಿಲ್ಲ. ಈಗಷ್ಟೇ ಅಧ್ಯಯನಗಳು ನಡೆಯಬೇಕಿದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಮೂಗಿನ ನೇರಕ್ಕೆ ಅಜೆಂಡಗಳನ್ನು ಜಾರಿಗೊಳಿಸಲು ಕೊರೋನಾ ಸೋಂಕನ್ನು ಬಳಸುತ್ತದೆ ಎನ್ನುವಂತಹ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲದಂತೆ ಇಡೀ ದೇಶವನ್ನು ಸಜ್ಜುಗೊಳಿಸಬೇಕಾಗಿದೆ.

ಆದ್ದರಿಂದ ಈಗಿನ ತುರ್ತು ಅಗತ್ಯ ವಿಶ್ವಾಸಾರ್ಹವಾದ ನುಡಿ ಮತ್ತು ನಡೆಗಳು. ಹಾಗೂ ಸೋಂಕಿನ ಅನಾಹುತವನ್ನು ತಡೆಯಲು ಬೇಕಾದ ಕಟ್ಟೋನಿಟ್ಟಿನ ಕ್ರಮಗಳು, ವೈದ್ಯಕೀಯ ಚಿಕಿತ್ಸಾ ಸಿದ್ಧತೆಗಳು ಹೊರತು ವಾಗ್ವಾದಗಳಲ್ಲ, ಭಯ ಸೃಷ್ಟಿಯೂ ಅಲ್ಲ. ಜನತೆಯ ಸರ್ವ ಸಹಕಾರದಿಂದಲೇ ಇಂತಹ ಸಾಂಕ್ರಾಮಿಕತೆಯನ್ನು ಸರ್ಕಾರದ ಸಮರ್ಥ ವೈದ್ಯಕೀಯ ವ್ಯವಸ್ಥೆಗಳ ಜೊತೆಯಲ್ಲಿ ಎದುರಿಸಬಹುದು.

ಬಿಜೆಪಿ: ಬಣ ಬಡಿದಾಟಗಳಿಗೆ ಬಣ್ಣ

ಈ ವಾರ

ಎಸ್.ವೈ. ಗುರುಶಾಂತ್

ಕರ್ನಾಟಕದ ವಿಧಾನಸಭೆಯ ಚಳಿಗಾಲದ ಅಧಿವೇಶನ ಸದ್ದು, ಗದ್ದಲ, ಗುದ್ದಾಟಗಳ ವೇದಿಕೆಯಾಗಿಯೂ ಸುದ್ದಿ ಮಾಡುತ್ತಿದೆ. ಜನರ ಜ್ವಲಂತ ಪ್ರಶ್ನೆಗಳು ಆದ್ಯತೆ ಪಡೆಯದೇ ಕೇವಲ ದೊಡ್ಡ ಗಂಟಲಿನ ಗಾಳಿ ಮಾತುಗಳು ಸದನದ ಕಲಾಪವನ್ನು ಆವರಿಸುತ್ತಿವೆ. ಪ್ರಶ್ನೆ ಕೇಳಿದ ಶಾಸಕರಿಗೆ ಹಿರಿಯ ಸಚಿವ ಗೋವಿಂದ ಕಾರಜೋಳ ಬೆದರಿಕೆ ಹಾಕಿದ ಪ್ರಸಂಗವೂ ಸದನದಲ್ಲಿ ಕೋಲಾಹಲ, ಬಿರುಸಿನ ವಾಗ್ವಾದವನ್ನು ಸೃಷ್ಟಿಸಿತು. ತಮ್ಮ ಕೇಳಿಕೆಗೆ ಸ್ಪಂದಿಸದ, ಒಪ್ಪದ ಹಠಮಾರಿ ನಿಲುವನ್ನು ವಿರೋಧಿಸಿ ವಿರೋಧ ಪಕ್ಷಗಳು ಕಲಾಪ ಬಹಿಷ್ಕರಿಸುವುದು ವಾಡಿಕೆ. ಅಂತಹ ಪ್ರಸಂಗಗಳಲ್ಲಿ ಸಭಾಧ್ಯಕ್ಷರ ಸಂಧಾನಗಳು ಸದನದ ಕಲಾಪಗಳ ಪುನರಾರಂಭಕ್ಕೆ, ಸಕ್ರಿಯ ಪಾಲ್ಗೊಳ್ಳುವಿಕೆಗೆ ಹಾದಿ ಮಾಡಿಕೊಡುತ್ತವೆ.

ಸದನದಲ್ಲಿ ವಿರೋಧ ಪಕ್ಷಗಳು ಕಲಾಪಗಳಿಗೆ ಬಹಿಷ್ಕಾರ ಹಾಕುವ ಪರಿಪಾಠ ಇರುವುದೇನೋ ನಿಜ. ಆದರೆ ಈ ಬಾರಿ ಬೆಳಗಾವಿಯ ಅಧಿವೇಶನಕ್ಕೆ ಬಹಿಷ್ಕಾರ ಹಾಕಿದವರು ಆಡಳಿತ ಪಕ್ಷದ ಶಾಸಕರೇ. ಬಹಿಷ್ಕಾರ ಹಾಕಲು ಕಾರಣ ಜನರ ಬಗೆಹರಿಯದ ಸಮಸ್ಯೆಗಳಲ್ಲ. ಬದಲಾಗಿ ಕಳಂಕ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ತಾವು ಕ್ಲೀನ್ ಚಿಟ್ ಪಡೆದಿರುವುದರಿಂದ ತಮ್ಮನ್ನು ಮತ್ತೇ ಮಂತ್ರಿಗಳನ್ನಾಗಿ ಮಾಡಬೇಕು ಎನ್ನುವುದು! ಹೀಗಾಗಿ ತಮ್ಮ ಅಹವಾಲು ಮುಖ್ಯಮಂತ್ರಿಗಳಿಗೆ, ಬಿಜೆಪಿ ಹೈಕಮಾಂಡ್ ಮುಟ್ಟಿಸಲು ಹಾಗೂ ಭರವಸೆ, ಶೀಘ್ರ ಪ್ರಕಟನೆ ನಿರೀಕ್ಷಿಸಿ ಸೌಮ್ಯ ಪ್ರತಿಭಟನೆ! ಅತ್ಯಂತ ಶಿಸ್ತಿನ ಮತ್ತು ದೇಶಕ್ಕೆ ಸಮರ್ಪಿಸಿಕೊಂಡ ದೇಶಭಕ್ತ ಸ್ವಯಂ ಸೇವಕರೇ ತುಂಬಿರುವ ಬಿಜೆಪಿ ಹೈಕಮಾಂಡ್, ಆರ್.ಎಸ್.ಎಸ್. ಮಾರ್ಗದರ್ಶನ ಮೀರಿ ಇದನ್ನು ಯಾವುದೇ ಮುಚ್ಚು ಮರೆಯಿಲ್ಲದೇ ಬಹಿರಂಗ ಪ್ರಕಟಿಸುವ ತಾಕತ್ತು ಇರೋರು ಯಾರು? ಕೆ.ಎಸ್.ಈಶ್ವರಪ್ಪ, ರಮೇಶ್ ಜಾರಕಿಹೊಳಿ ಸಂಘಪರಿವಾರದ ಶಿಸ್ತನ್ನೂ ಮೀರಿ ಇಂತಹ ಬಂಡಾಯ ಪ್ರಕಟಿಸಿದ್ದಾರೆಂದರೆ ಇನ್ನು ಕಳೆದುಕೊಳ್ಳುವುದು ಏನೂ ಇಲ್ಲ ಎಂಬ ಹತಾಶೆಯ ಸ್ಥಿತಿಯ ನಿದರ್ಶನವೇ? ಇವರ ಅಹವಾಲು ಹೈಕಮಾಂಡಿಗೆ ಮುಟ್ಟಿಸಿದ್ದು ನ್ಯಾಯ ದೊರಕಿಸುವ ಮುಖ್ಯಮಂತ್ರಿಗಳ ಮಾತಿನ ಮೇಲೆ ಭರವಸೆ ಇಟ್ಟು ಜಾತಕ ಪಕ್ಷಿಗಳಾಗಿ ಕಾಯುತ್ತಿದ್ದಾರಂತೆ!

ವಿಧಾನಸಭಾ ಚುನಾವಣೆಗೆ ಸನ್ನದ್ಧವಾಗುತ್ತಿರುವ ಬಿಜೆಪಿಗೆ ಎದುರಾಗಿರುವ ಸವಾಲು, ಆಂತರಿಕ ಬಂಡಾಯಗಳ ಬೇಗುದಿಗಳೂ ಹೆಚ್ಚುತ್ತಿವೆ. ಚುನಾವಣೆ ಗೆಲ್ಲುವುದು ಸಾಮೂಹಿಕ ನಾಯಕತ್ವ, ಅದರಲ್ಲೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಮಾರ್ಗದರ್ಶನ, ಮುಂದಾಳತ್ವದಲ್ಲಿ ಎನ್ನುವ ಮಾತುಗಳು ಮೇಲಿಂದ ಮೇಲೆ ಕೇಳುತ್ತಿರುವುದು ನಿಜ. ಆದರೆ ಇದು ಖಂಡಿತ ನಿಜವೇ ಎಂದರೆ ಅಲ್ಲ. ಬಿಜೆಪಿಯಲ್ಲಿ ಯಡಿಯೂರಪ್ಪನವರನ್ನು ಮೂಲೆಗೆ ತಳ್ಳಲು ಸತತ ಪ್ರಯತ್ನ ನಡೆಯುತ್ತಿರುವುದು ಸುಳ್ಳೇನಲ್ಲ. ಇಂತಹ ಪ್ರಯತ್ನದ ವಿರುದ್ಧ ಬಿ.ಎಸ್.ವೈ. ಬಂಡಾಯದ ಸಂದೇಶವನ್ನು ರವಾನಿಸಿದ್ದಾರೆ.

ಇತ್ತೀಚೆಗೆ ಕೊಪ್ಪಳದಲ್ಲಿ ನಡೆದ ರಾಜ್ಯ'ಸಂಕಲ್ಪ ಯಾತ್ರೆ' ಯಲ್ಲಿ ಅವರನ್ನು ಆಹ್ವಾನಿಸದೇ ಅವಮಾನಿಸಿದ ಪ್ರಸಂಗ ನಡೆಯಿತು. ಇದನ್ನು ಅರಿತೇ ಅವರು ಸಕ್ರಿಯ ರಾಜಕಾರಣದಿಂದ ನಿವೃತ್ತಿ ಆಗುವುದಾಗಿಯೂ ತಮ್ಮ ಕ್ಷೇತ್ರ ಶಿಕಾರಿಪುರದಿಂದ ತಮ್ಮ ಮಗ ಬಿ.ಎಸ್.ವಿಜೆಯೇಂದ್ರ ಸ್ಪರ್ದಿಸುತ್ತಾರೆ ಎಂದು ಪ್ರಕಟಿಸಿದರು. ಈ ಬಹಿರಂಗ ನಿರ್ಧಾರ ಬಿಜೆಪಿಯೊಳಗೆ ಸ್ವಲ್ಪ ತಲ್ಲಣ ಸೃಷ್ಟಿಸಿತು. ಬಿ.ಎಸ್.ವೈ. ಇಲ್ಲದೇ ಗೆಲ್ಲುವುದು ಅಸಾಧ್ಯ ಎನ್ನುವುದೂ ನಾಯಕತ್ವಕ್ಕೆ ಗೊತ್ತು. ಆದರೂ ಅವರು ಹಂತ, ಹಂತವಾಗಿ ಬಿ.ಎಸ್.ವೈ. ಪ್ರಭಾವ ಮತ್ತು ಪಕ್ಷದ ಮೇಲಿನ ಹಿಡಿತ ಸಡಿಲಗೊಳಿಸುತ್ತಾ ದುರ್ಬಲಗೊಳಿಸಲು ಬಯಸಿರುವುದೂ ಗೊತ್ತಿಲ್ಲದ ವಿಷಯವೇನಲ್ಲ. ಆದ್ದರಿಂದಲೇ ಮುಖ್ಯಮಂತ್ರಿ ಸ್ಥಾನದಿಂದ ಅವರನ್ನು ಪದಚ್ಯುತಗೊಳಿಸಿದ ನಂತರ ಅವರ ನಿಷ್ಠ ಅನುಯಾಯಿ ಎಂದು ಬಿಂಬಿಸಲ್ಪಟ್ಟ ಬಸವರಾಜ ಬೊಮ್ಮಾಯಿ ಅವರಿಗೇ ಮುಖ್ಯಮಂತ್ರಿ ಸ್ಥಾನ ನೀಡಿದ ಬಳಿಕವೂ ಅವರಿಬ್ಬರ ನಡುವೆ ಅಂತರವನ್ನು ಕಾಯ್ದುಕೊಳ್ಳುವಂತೆ ಬಿಜೆಪಿ ಹೈಕಮಾಂಡ್ ಹೇಳುತ್ತಲೇ ಬಂದಿದೆ. ಮತ್ತು ಪ್ರಯತ್ನಿಸುತ್ತಲೇ ನಿಂತಿದೆ. ಒಂದು ಹಂತದಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸುವ ಪ್ರಯತ್ನಗಳು ನಡೆದು ಹೇಳಿದಂತೆ ಕೇಳಬೇಕು ಎನ್ನುವ ಬೆದರಿಕೆ ಮತ್ತು ದಬಾವಣೆಯನ್ನು ಸೃಷ್ಟಿಸಲಾಗಿತ್ತು. ಬಣಗಳ ಬಲದ ಬಡಿದಾಟದಲ್ಲಿ ಬಾಧಿತವಾಗಿರುವ ಬಿಜೆಪಿಯೂ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎನ್ನುವಲ್ಲಿ ಒಂದೊಂದು ಬಣದ ಶಾಸಕರ ಸಂಖ್ಯೆ ಮತ್ತು ಮತ ಸೆಳೆಯುವ ಶಕ್ತಿಯೂ ಮುಖ್ಯವಾಗುತ್ತದೆ. ಆ ಕಾರಣದಿಂದಲೂ ಬಿ.ಎಸ್.ವೈ ಬಲವನ್ನು ಬಳಸಿ ಇಡಬೇಕಾದ ಸ್ಥಾನದಲ್ಲಿ ಇಡಬೇಕು ಎನ್ನುವುದು ಬಿಜೆಪಿ ಪಕ್ಷದ ಒಟ್ಟಾರೆ ನಿಲುವು ಎಂದು ಕಾಣುತ್ತದೆ. ಆ ಕಾರಣದಿಂದಲೇ ಸಂಕಲ್ಪ ಯಾತ್ರೆ ನಡೆದ ಎಲ್ಲಾ ಕಡೆಗಳಲ್ಲಿ ಬಿ.ಎಸ್.ವೈ. ಯನ್ನು ಕರೆದೊಯ್ದದಲ್ಲಿ ಅವರ ಪ್ರಾಮುಖ್ಯತೆಯನ್ನು ಪದೇ ಪದೇ ಸಾರಿದಂತಾಗುತ್ತದೆ. ಇದು ಹೈಕಮಾಂಡಿಗೆ ಬೇಕಿಲ್ಲ. ಹೀಗಾಗಿಯೇ ಕೆಲವಕ್ಕೆ ಕರೆಯದೇ ಕೈಬಿಟ್ಟರೆ ಅದು ಕೂಡ ಅಪ್ರಾಮುಖ್ಯತೆಯ ಸಂದೇಶ ರವಾನಿಸಿದಂತೆ ಎಂದು ಯೋಚಿಸಿದ ಬಿಜೆಪಿ ಕೊಪ್ಪಳದ ಸಂಕಲ್ಪ ಯಾತ್ರೆಗೆ ಆಹ್ವಾನಿಸಿಲ್ಲ. ಈ ಸಂಗತಿ ಮತ್ತು ಇದಕ್ಕೆ ಯಡಿಯೂರಪ್ಪ ಪ್ರತಿಕ್ರಿಯಿಸಿದ ರೀತಿಯಿಂದ ಬೊಮ್ಮಾಯಿ ಯವರು ಯಡಿಯೂರಪ್ಪನವರಿಂದ ದೂರ ಸರಿಯುತ್ತಿದ್ದಾರೆ ಎಂದು ಸಾರ್ವಜನಿಕವಾಗಿ ಬಿಂಬಿಸಲಾಯಿತು. ಮಾತ್ರವಲ್ಲ, ಇದೇ ಹೊತ್ತಿನಲ್ಲಿ ಮೊಕದ್ದಮೆಗಳಿಂದ 'ಮುಕ್ತ' ನಾಗಿರುವ ಜನಾರ್ಧನ ರೆಡ್ಡಿ ಪ್ರತ್ಯೇಕವಾಗಿ ಪಕ್ಷ ಒಂದನ್ನು ಸ್ಥಾಪಿಸುವ ಸುದ್ದಿಯನ್ನೂ ಹರಿ ಬಿಡಲಾಗಿತ್ತು. ಈ ಮೂಲಕ ಜನಾರ್ಧನ ರೆಡ್ಡಿ ಸಹ ತಮ್ಮದೇ ಆದ ಬಣಬಲಗೊಳ್ಳುವಂತೆ ಟಿಕೆಟ್ ಪಡೆಯಲು ಮತ್ತು ಪ್ರಮುಖ ಸ್ಥಾನದ ಭರವಸೆಗಳು ಪಡೆಯಲು ತಂತ್ರ ಹಾಕಿ ಗಂಗಾವತಿಯಲ್ಲಿ ಕುಳಿತಿದ್ದು, ಬಿ.ಎಸ್. ವೈ. ಮತ್ತು ಜನಾರ್ಧನ ರೆಡ್ಡಿಗಳ ನಡುವೆ ಒಂದು ಹೊಸ ಸಂಯೋಜನೆ ಏರ್ಪಡಬಹುದು ಎನ್ನುವ ಸುದ್ದಿಗಳು ಹರಿದಾಡಿದವು. ಅಷ್ಟು ಮಾತ್ರವಲ್ಲ, ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ನಡುವೆ ಬಿರುಕು ಕಾಣಿಸಿಕೊಂಡಿದೆ ಎನ್ನುವಂತಹ ಸುದ್ದಿಗಳನ್ನು ತೇಲಿ ಬಿಡಲಾಯಿತು. ಹಾಗೆ ನೋಡಿದರೆ ಅವರಿಬ್ಬರನ್ನು ಪ್ರತ್ಯೇಕಿಸಿ ನೋಡುವುದು ಸದ್ಯದಲ್ಲಿ ಅಸಾಧ್ಯವಾದ ಸಂಗತಿ. ಮತ್ತು ಅವರಿಬ್ಬರೂ ಅವರದೇ ಆದಂತ ಏಕ ಉದ್ದೇಶದ ತಂತ್ರಗಳನ್ನು ನಡೆಸುತ್ತಾರೆ ಎನ್ನುವುದು ಗೊತ್ತಿರುವುದೇ. ಜನಾರ್ದನ ರೆಡ್ಡಿ ಸಹೋದರರಲ್ಲ ಬಿಟ್ಟು ಶ್ರೀರಾಮುಲು ಇರುವುದಿಲ್ಲ ಶ್ರೀರಾಮಲುವನ್ನು ದೂರವಿಟ್ಟು ರೆಡ್ಡಿಗಳು ಇರುವುದಿಲ್ಲ. ಬಿ.ಎಸ್.ವೈ. ಗರಂ ಪ್ರತಿಕ್ರಿಯೆಯಿಂದ ಎಚ್ಚೆತ್ತವರಂತೆ ಪ್ರತಿಕ್ರಿಸಿದ ಮುಖ್ಯಮಂತ್ರಿ ಮತ್ತು ಪಕ್ಷದ ನಾಯಕರು ಮಾತಿನಲ್ಲಿ ಬಿ ಎಸ್ ವೈ ಗೆ ಪ್ರಾಮುಖ್ಯತೆ ಇದ್ದೇ ಇದೆ. ಅವರನ್ನು ಹೊರತುಪಡಿಸಿ ಬಿಜೆಪಿ ಮುಂದುವರೆಯುವುದಿಲ್ಲ. ಪಕ್ಷವನ್ನು ಕಟ್ಟಿದ ಮಹಾ ಶಕ್ತಿ ಇತ್ಯಾದಿ ಬಣ್ಣನೆಗಳೊಂದಿಗೆ ಬಂಡಾಯಕ್ಕೆ ಬಣ್ಣ ತುಂಬಲು ನೋಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿ.ಎಸ್.ವೈ. 'ತನ್ನನ್ನು ಯಾರೂ ನಿರ್ಲಕ್ಷಿಸುತ್ತಿಲ್ಲ, ಮುಂದಿನ ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅತ್ಯಧಿಕ ಬಹುಮತದಿಂದ ಗೆಲ್ಲಿಸಿ ತರುವುದೇ ತಮ್ಮ ಪರಮ ಗುರಿ' ಎಂಬ ಹೇಳಿಕೆಯನ್ನು ನೀಡಿ ಮತ್ತೊಂದು ರಾಜಕೀಯ ಗಾಳ ಹಾಕಿ ಕೂತಿದ್ದಾರೆ. ಒಟ್ಟಾರೆ ಚುನಾವಣೆಯ ಮುನ್ನೆಲೆಯಲ್ಲಿ ಬಿಜೆಪಿಯೊಳಗೆ ಹಲವು ಬಣಗಳ ಬಡಿದಾಟ ಮತ್ತು ಅಧಿಕಾರದ ಸಲುವಾಗಿ ಹಲವು ತಂತ್ರ ಕುತಂತ್ರಗಳು ಚಾಲನೆಯಲ್ಲಿರುವುದು ಮತ್ತು ಪ್ರತಿ ಪ್ರಸಂಗಗಳಿಗೂ ಬಣ್ಣ ತುಂಬುತ್ತಿರುವುದು ವಾಸ್ತವ.

ಕುಂದಾಪುರದಲ್ಲಿ ಕಟ್ಟಡ ಕಾರ್ಮಿಕರ ಮಹಾಸಭೆ ಕಲ್ಯಾಣ ಮಂಡಳಿ ನಿಧಿಯ ದುಂದುವೆಚ್ಚ ತಡೆಗೆ ಒತ್ತಾಯ

ವರದಿ: ವಾ. ಉಚ್ಚಿಲ್

ಕಾರ್ಮಿಕರ ಕುಟುಂಬಗಳ ಕಲ್ಯಾಣಕ್ಕಾಗಿ ಇರುವ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ನಿಧಿಯನ್ನು ಕಿಟ್‌ಗಳ ಖರೀದಿಗೆ ವಿಪರೀತವಾಗಿ ಬಳಸುತ್ತಿರುವುದನ್ನು ಕಾರ್ಮಿಕ ಸಚಿವರು ನಿಲ್ಲಿಸಬೇಕು ಎಂದು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್‌ನ ರಾಜ್ಯ ಉಪಾಧ್ಯಕ್ಷ ಶೇಖರ ಬಂಗೇರ ಹೇಳಿದರು.

ಹೆಂಚು ಕಾರ್ಮಿಕರ ಭವನದಲ್ಲಿನ ಕಾಮ್ರೇಡ್ ದಾಸ್ ಭಂಡಾರಿ ವೇದಿಕೆಯಲ್ಲಿ ಡಿಸೆಂಬರ್ 19 ರಂದು ನಡೆದ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ದ 16ನೇ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎಚ್.ನರಸಿಂಹ, ಮುಖಂಡರಾದ ಮಹಾಬಲ ವಡೇರಹೋಬಳಿ, ಚಂದ್ರಶೇಖರ ವಿ, ಮಾತನಾಡಿದರು.

ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ವಾರ್ಷಿಕ ವರದಿ ಮಂಡಿಸಿದರು.

ಮಹಾಸಭೆ 23 ಮಂದಿಯ ನೂತನ ಸಮಿತಿ ಆಯ್ಕೆ ಮಾಡಿತು. ಗೌರವಧ್ಯಕ್ಷರಾಗಿ ಚಿಕ್ಕ ಮೊಗವೀರ, ಅಧ್ಯಕ್ಷರಾಗಿ ಸುರೇಶ್ ಕಲ್ಲಾಗರ, ಉಪಾಧ್ಯಕ್ಷರಾಗಿ ಸುರೇಶ್ ಪೂಜಾರಿ, ಅಲೆಕ್ಸಾಂಡರ್, ಚಂದ್ರಶೇಖರ ವಿ, ರಘುರಾಮ ನಾಯ್ಕ್, ಶ್ರೀನಿವಾಸ ಪೂಜಾರಿ, ಶಶಿಕಾಂತ್, ಕೃಷ್ಣ ಪೂಜಾರಿ, ಕೋಶಾಧಿಕಾರಿಯಾಗಿ ಜಗದೀಶ್ ಆಚಾರ್ ಆಯ್ಕೆಗೊಂಡರು. ಚಿಕ್ಕಮೊಗವೀರ ಅವರು ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಟ್ಟಡ ಕಾರ್ಮಿಕರ ಸ್ಥಾಪಕ ಅಧ್ಯಕ್ಷರಾಗಿದ್ದ ದಾಸ್‌ಭಂಡಾರಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ವಿದ್ಯಾರ್ಥಿ ವೇತನ ರದ್ದುಗೊಳಿಸಿದ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಮಂಗಳೂರಿನಲ್ಲಿ ಎಸ್‌ಎಫ್‌ಐ ಪ್ರತಿಭಟನೆ:

ನಾಷನಲ್ ಸ್ಕಾಲರ್‌ಶಿಪ್ ಪೋರ್ಟಲ್ ಮೂಲಕ 1 ರಿಂದ 8ನೇ ತರಗತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ ವಿದ್ಯಾರ್ಥಿ ವೇತನವನ್ನು ರದ್ದುಗೊಳಿಸಿದ ಕೇಂದ್ರ ಸರಕಾರದ ಕ್ರಮವನ್ನು ಖಂಡಿಸಿ ದ.ಕ.ಜಿಲ್ಲಾ ಎಸ್‌ಎಫ್‌ಐ ವತಿಯಿಂದ ಮಂಗಳೂರಿನ ಕ್ಲಾಕ್‌ಟವರ್ ಬಳಿ ಡಿಸೆಂಬರ್ 19 ರಂದು ಪ್ರತಿಭಟನೆ ನಡೆಯಿತು. ನ್ಯಾಷನಲ್ ಸ್ಕಾಲರ್‌ಶಿಪ್ ಪೋರ್ಟಲ್ ಮೂಲಕ ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದನ್ನು ಮುಂದುವರಿಸಬೇಕು ಎಂದು ಪ್ರತಿಭಟನಾಕಾರರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸರಕಾರಿ ಕಾಲೇಜುಗಳ ಶುಲ್ಕ ಹೆಚ್ಚಳ ಮಾಡಿರುವುದನ್ನು ಖಂಡಿಸಿದ ಪ್ರತಿಭಟನಾಕಾರರು, ಪರೀಕ್ಷೆ ಫಲಿತಾಂಶ ವಿಳಂಬದಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸದೆ ಆಡಳಿತ ವರ್ಗ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡ ಬಿ.ಎಂ.ಭಟ್, ದ.ಕ. ಜಿಲ್ಲಾಧ್ಯಕ್ಷ ವಿನಿತ್ ದೇವಾಡಿಗ, ಮಾಜಿ ವಿದ್ಯಾರ್ಥಿ ಮುಖಂಡ ಮನೋಜ್ ವಾಮಂಜೂರು, ಎಸ್‌ಎಫ್‌ಐ ಕಾರ್ಯದರ್ಶಿ ರೇವಂತ್ ಕದ್ರಿ ಉಪಸ್ಥಿತರಿದ್ದರು.

ಸಿಪಿಐ(ಎಂ) ಮುಖಂಡ ಪರಮೇಶ್ವರನ್ ನಾಯರ್ ನಿಧನ:

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿಯ ಮಾಜಿ ಸದಸ್ಯ ಕರ್ನಾಟಕ ಪ್ರಾಂತ ರೈತ ಸಂಘದ ಮಾಜಿ ಅಧ್ಯಕ್ಷ ಪರಮೇಶ್ವರನ್ ನಾಯರ್ (84) ಡಿಸೆಂಬರ್ 19 ರಂದು ನಿಧನರಾದರು.

ಮೂಲತ: ಕೇರಳದವರಾಗಿರುವ ಪರಮೇಶ್ವರನ್ ಕಳೆದ 30 ವರ್ಷಗಳಿಂದ ಕಳೆಂಜ ಗ್ರಾಮದ ಕೋಡಿಕುಲತ್ ಎಂಬಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಿಕೊಂಡಿದ್ದರೂ, ಕೇರಳದ ಹಿರಿಯ ಕಮ್ಯೂನಿಸ್ಟ್ ನಾಯಕರೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಅರಳಿ ಸೌಜನ್ಯ ನಗರದ ಭೂ ಹೋರಾಟ ಸೇರಿದಂತೆ ಹಲವಾರು ರೈತರ ಹೋರಾಟದ ನೇತೃತ್ವವನ್ನು ವಹಿಸಿದ್ದರು.

ಪರಮೇಶ್ವರನ್‌ರ ಇಚ್ಛೆಯಂತೆ ಅಂತಿಮ ದರ್ಶನದ ಬಳಿಕ ಮೃತದೇಹವನ್ನು ಮಂಗಳೂರಿನ ಫಾದರ್ ಮುಲ್ಲರ್ ಮೆಡಿಲ್ ಕಾಲೇಜು ಆಸ್ಪತ್ರೆಗೆ ದಾನ ಮಾಡಲಾಯಿತು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಅಗಲಿದ್ದಾರೆ.

ಉದ್ಯಮಗಳಲ್ಲಿ ಸ್ಥಳೀಯರಿಗೆ ಉದ್ಯೋಗಕ್ಕೆ ಮೀಸಲು ಕಲ್ಪಿಸುವ ಕಾನೂನು ಜಾರಿಗೆ ತನ್ನಿ

ಒಕ್ಕೂಟ ಸರಕಾರಗಳಡಿ ಖಾಲಿಯಿರುವ 60 ಲಕ್ಷ ಹಾಗೂ ರಾಜ್ಯ ಸರಕಾರದಡಿ ಖಾಲಿ ಇರುವ 2.5ಲಕ್ಷ ಹುದ್ದೆಗಳನ್ನು ಕೂಡಲೇ ಭರ್ತಿಗೊಳಿಸಲು ಸರಕಾರಗಳು ಮುಂದಾಗಬೇಕು ಎಂದು ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಒತ್ತಾಯಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ವರ್ಷಕ್ಕೆರಡು ಕೋಟಿ ಉದ್ಯೋಗ ಸೃಷ್ಟಿಯ ಭರವಸೆ ನೀಡಿ ಅಧಿಕಾರದ ಚುಕ್ಕಾಣಿ ಹಿಡಿದ ಮೋದಿ ಅವರು ಕಳೆದ ಎಂಟು ವರ್ಷಗಳಲ್ಲಿ ಉದ್ಯೋಗ ಸೃಷ್ಟಿ ಮಾಡುವ ಬದಲಾಗಿ, ಇರುವ ಉದ್ಯೋಗಗಳನ್ನು ನಾಶಗೊಳಿಸಿ ದೇಶದ ಜನತೆಗೆ ಮಹಾ ದ್ರೋಹಬಗೆದಿದ್ದಾರೆ ಎಂದು ಆರೋಪಿಸಿದ್ದಾರೆ.

ಉದ್ಯೋಗ ಸೃಷ್ಟಿಸದ ಉದ್ಯಮಗಳು ನಮಗೆ ಬೇಡ. ಜಾಗತಿಕ ಹೂಡಿಕೆಯಾಗಲಿ, ಸ್ಥಳೀಯ ಹೂಡಿಕೆಗಳಾಗಲಿ ಕಡ್ಡಾಯವಾಗಿ ಸ್ಥಳೀಯರಿಗೆ ಉದ್ಯೋಗಕ್ಕೆ ಮೀಸಲು ಕಲ್ಪಿಸುವ ಕಾನೂನು ಜಾರಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಉದ್ಯೋಗದ ಹಕ್ಕನ್ನು ಕಳೆದ ಎರಡು ದಶಕಗಳಿಂದ ಕಸಿಯುತ್ತಲೇ ಇದ್ದು, ಕೇಂದ್ರದಲ್ಲಿ ಬಿಜೆಪಿ ಸರಕಾರದ ಈ ಅಧಿಕಾರಾವಧಿಯಲ್ಲಿ ಉದ್ಯೋಗ ನಾಶದ ವೇಗ ಮಿತಿ ಮೀರಿದೆ.

ಕೇವಲ ಬಂಡವಾಳಿಗರ ಹಾಗೂ ಉದ್ದಿಮೆದಾರರ ಅನುಕೂಲಕ್ಕೆ ತಕ್ಕಷ್ಟು ಮಾತ್ರ ಉದ್ಯೋಗ ಸೃಷ್ಟಿ ಸುವುದಲ್ಲ. ಸರಕಾರ ಹೂಡಿಕೆದಾರರಿಗೆ ಆದ್ಯತೆ ನೀಡುತ್ತಲೇ ಇದೆ. ಆದರೆ ಕೆಲಸಕ್ಕಾಗಿ ಪರಿತಪಿಸುತ್ತಿರುವ ಯುವಶಕ್ತಿಯನ್ನು ಕಡೆಗಣಿಸುತ್ತಲೇ ಬರುತ್ತಿರುವುದರಿಂದಾಗಿ ಯುವಜನತೆ ಹತಾಸೆಗೊಂಡಿದ್ದಾರೆ.

ಶಿಕ್ಷಣ, ಉದ್ಯೋಗ, ಆರೋಗ್ಯದ ಪ್ರಶ್ನೆಗಳು ಮುಖ್ಯವಾಗಿರಬೇಕಾಗಿದ್ದ ಈ ಸಂಕಷ್ಟದ ಸಂದರ್ಭದಲ್ಲಿ ಯುವಜನರನ್ನು ಧರ್ಮದ ಆಧಾರದಲ್ಲಿ ವಿಭಜಿಸಲು ಸರಕಾರಗಳೇ ಕೆಲಸ ಮಾಡುತ್ತಿವೆ. ವಿರೋಧ ಪಕ್ಷಗಳು ಕೂಡ ಇದನ್ನು ಗಂಭೀರವಾಗಿ ಪರಿಗಣಿಸದಿರುವುದು ಶೋಚನೀಯ ಎಂದರು.

ಯುವ ಮಾನವ ಸಂಪನ್ಮೂಲ ಬಳಸಿಕೊಂಡು ದೇಶ ಅಭಿವೃದ್ಧಿಪಡಿಸಲು ಪರಿಣಾಮಕಾರಿ ಉದ್ಯೋಗ ನೀತಿಯ ಅವಶ್ಯಕತೆ ಇದೆ. ಸಾರ್ವಜನಿಕ ರಂಗ ಹಾಗೂ ಖಾಸಗಿ ರಂಗದಲ್ಲಿ ರಾಜ್ಯದ ಯುವ ಜನತೆಗೆ ಸಿಂಹಪಾಲು ದೊರೆಯಬೇಕಿದೆ. ಅದಕ್ಕಾಗಿ ರಾಜ್ಯದಲ್ಲಿ ಸರೋಜಿನಿ ಮಹಿಷಿ ವರದಿಯನ್ನು ಈಗ ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ತೀರ್ಮಾನಿಸಿ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ರಾಜ್ಯ ಉಪಾಧ್ಯಕ್ಷ ಸಂತೋಷ ಬಜಾಲ್, ಜಿಲ್ಲಾ ಸಂಚಾಲಕ ನಾರಾಯಣ ಕಾಳೆ, ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ, ಅರುಣ ಕಡಕೋಳ, ಗುಡ್ಡಪ್ಪ ಮಡಿವಾಳರ ಉಪಸ್ಥಿತರಿದ್ದರು.

ವಸಾಹತುಶಾಹಿ ದೊರೆಗಳ ಬಾಲಬಡುಕರಾಗಿ.. .. ..

ಪುಟ 2 ರಿಂದ

ಅಥವಾ ನೀತಿಯ ಕಾರಣದಿಂದಲೋ ಸರ್ಕಾರದೊಂದಿಗೆ ಸಹಕರಿಸುತ್ತಿಲ್ಲ ಮತ್ತು ಯುದ್ಧ ಸನ್ನಾಹಕ್ಕೆ ಸಹಾಯ ಮಾಡುತ್ತಿಲ್ಲ ಎಂದು ಸಮರ್ಥಿಸುವ ಭ್ರಾಂತಿಯಲ್ಲಿರುವವರು, ಆತ್ಮವಂಚನೆ ಮತ್ತು ಆತ್ಮತೃಪ್ತಿಯಲ್ಲಿ ತೊಡಗಿಕೊಂಡಿರುತ್ತಾರೆ ಎಂಬುದನ್ನು ಮರೆಯಬಾರದು.

ಹಿಂದೂಗಳಿಗೆ ಅವರು ನೀಡಿದ ಕರೆಯಲ್ಲಿ ಯಾವ ದ್ವಂದ್ವವೂ ಇರಲಿಲ್ಲ:

ಆದ್ದರಿಂದ ಹಿಂದೂಗಳು ಈಗಲೇ ಮುಂದೆ ಬರಬೇಕು ಮತ್ತು ಭೂಸೇನೆ, ನೌಕಾದಳ ಹಾಗೂ ವಾಯುಸೇನೆಗಳಲ್ಲಿ, ಮದ್ದುಗುಂಡು ಫಿರಂಗಿ ಮತ್ತು ಇತರ ಯುದ್ಧ–ಸಾಮಗ್ರಿಗಳ ಕಾರ್ಖಾನೆಗಳಲ್ಲಿ ಸಾವಿರ ಲಕ್ಷಾಂತರ ಸಂಖ್ಯೆಯಲ್ಲಿ ಪ್ರವೇಶಿಸಬೇಕು.

ಬ್ರಿಟಿಷ್ ಶಸ್ತ್ರಸಜ್ಜಿತ ಸೇನೆ ಸೇರಲು ಬಯಸುವ ಹಿಂದೂಗಳಿಗೆ ಸಹಾಯ ಮಾಡುವ ಸಲುವಾಗಿ ದೇಶದ ವಿವಿಧ ಪ್ರದೇಶಗಳಲ್ಲಿ ಸಾವರ್ಕರ್ ಮುಂದಾಳತ್ವದಲ್ಲಿ ಹಿಂದೂ ಮಹಾಸಭಾವು ಉನ್ನತ–ಮಟ್ಟದ ಮಿಲಿಟರಿ ಸಮಿತಿಗಳನ್ನು ಸಂಘಟಿಸಿತ್ತು. ಈ ಮಂಡಳಿಗಳು ಬ್ರಿಟಿಷ್ ಸರ್ಕಾರದೊಂದಿಗೆ ನೇರ ಸಂಪರ್ಕ ಹೊಂದಿದ್ದವು ಎಂಬುದನ್ನು ಸಾವರ್ಕರ್ ಅವರ ಈ ಕೆಳಗಿನ ಮಾತುಗಳ ಮೂಲಕ ನಾವು ತಿಳಿಯಬಹುದು.

ಸೇನೆಗೆ ಸೇರುವ ಹಿಂದೂ ಸಿಪಾಯಿಗಳು ಕಾಲ ಕಾಲಕ್ಕೆ ಎದುರಿಸುವ ಕಷ್ಟಗಳು ಹಾಗೂ ಕುಂದು ಕೊರತೆಗಳನ್ನು ಪರಿಹರಿಸುವ ಸಲುವಾಗಿ ದೆಹಲಿಯಲ್ಲಿ ಸೆಂಟ್ರಲ್ ನಾರ್ದರನ್ ಹಿಂದೂ ಮಿಲಿಟರೈಸೇಷನ್ ಬೋರ್ಡ್ ಒಂದನ್ನು ಶ್ರೀ ಗಣಪತ್‌ರಾಯ್, ಬಿಎ, ಎಲ್‌ಎಲ್‌ಬಿ, ಅಡ್ವೊಕೇಟ್, 51, ಪಂಚ್‌ಕುಂವಾ ರೋಡ್, ನವದೆಹಲಿ ಅವರ ಸಂಚಾಲಕತ್ವದಲ್ಲಿ ಹಿಂದೂ ಮಹಾಸಭಾದಿಂದ ರಚಿಸಲಾಗಿತ್ತು. ಅದೇ ರೀತಿಯಲ್ಲಿ ಸೆಂಟ್ರಲ್ ಸದರನ್ ಹಿಂದೂ ಮಿಲಿಟರೈಸೇಷನ್ ಬೋರ್ಡ್ ಒಂದನ್ನು ಕೂಡ ಶ್ರೀ ಎಲ್.ಬಿ. ಭೋಪಟ್‌ಕರ್, ಎಂ.ಎ. ಎಲ್. ಎಲ್.ಬಿ. ಅಧ್ಯಕ್ಷರು, ಮಹಾರಾಷ್ಟ್ರ ಪ್ರಾವಿನ್ಶಿಯಲ್ ಹಿಂದೂಸಭಾ, ಸದಾಶಿವ್ ಪೇಟ್, ಪೂನಾ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಸೇನೆಗೆ ಪ್ರವೇಶ ಪಡೆಯಲು ಬಯಸುವ ಅಥವಾ ಈಗಾಗಲೇ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುವ ಹಿಂದೂಗಳು ತಮ್ಮ ಎಲ್ಲಾ ದೂರುಗಳನ್ನು ಅಥವಾ ಮಾಹಿತಿ ಪಡೆಯಲು ಅರ್ಜಿ ಸಲ್ಲಿಸುವವರು ಈ ಮೇಲಿನ ವಿಳಾಸಗಳಿಗೆ ಬರೆಯಬೇಕು. ಈ ಮಿಲಿಟರೈಸೇಷನ್ ಬೋರ್ಡ್‌ಗಳು ಕಳಿಸಿಕೊಡುವ ಅರ್ಜಿಗಳನ್ನು ಸರ್‌ಜ್ವಾಲಾ ಪ್ರಸಾದ್ ಶ್ರೀವಾಸ್ತವ್, ಬ್ಯಾರಿಸ್ಟರ್ ಜಮ್ನಾದಾಸ್‌ಜಿ ಮೆಹ್ತಾ, ಬಾಂಬೇ, ಶ್ರೀ ವಿ ವಿ ಕಾಲಿಕರ್, ಎಂ.ಎಲ್.ಸಿ, ನಾಗ್‌ಪುರ್ ಮತ್ತಿತರ ನ್ಯಾಷನಲ್ ಡಿಫೆನ್ಸ್‌ಕೌನ್ಸಿಲ್ ಅಥವಾ ಅಡ್ವೈಸರಿ ವಾರ್ ಕಮಿಟಿಯ ಸದಸ್ಯರುಗಳು ಖಂಡಿತವಾಗಿಯೂ ತಮ್ಮ ಕೈಲಾದಷ್ಟು ಕಷ್ಟಗಳನ್ನು ಪರಿಹರಿಸುತ್ತಾರೆ.

ಬ್ರಿಟಿಷ್ ಸರ್ಕಾರವು ತಮ್ಮ ಅಧಿಕೃತ ಯುದ್ಧ ಸಮಿತಿಗಳಲ್ಲಿ ಹಿಂದೂ ಮಹಾಸಭಾದ ಮುಖಂಡರುಗಳನ್ನು ಸೇರಿಸಿಕೊಂಡಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸಾವರ್ಕರ್ ಒಬ್ಬ ಮಹಾನ್ ದೇಶಪ್ರೇಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಎಂದು ಹಾಡಿ ಹೊಗಳುವವರು ಬ್ರಿಟಿಷ್ ಸೇನೆಗೆ ಸೇರ ಬಯಸುವ ಹಿಂದೂಗಳಿಗೆ ಸಾವರ್ಕರ್ ಅವರು ನೀಡಿದ ಈ ಕೆಳಗಿನ ನಿರ್ದೇಶನಗಳನ್ನು ಓದಿದರೆ ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ:

ಆದರೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಅಂಶವನ್ನು ಎಷ್ಟು ಸಾಧ್ಯವೋ ಅಷ್ಟು ಒತ್ತುಕೊಟ್ಟು ನಮ್ಮ ಹಿತಕ್ಕಾಗಿಯೇ ಗಮನಿಸಬೇಕು; ಭಾರತೀಯ (ಬ್ರಿಟಿಷ್ ಎಂದು ಓದಿಕೊಳ್ಳಿ) ಸೇನೆ ಸೇರುವ ಹಿಂದೂಗಳು ಅಲ್ಲಿರೂಢಿಯಲ್ಲಿರುವ ಮಿಲಿಟರಿ ಶಿಸ್ತಿಗೆ ಮತ್ತು ಆದೇಶಕ್ಕೆ, ಅವುಗಳು ಯಾವಾಗಲೂ ಉದ್ದೇಶಪೂರ್ವಕವಾಗಿ ಹಿಂದೂ ಗೌರವಕ್ಕೆ ಧಕ್ಕೆತರುವ ಉದ್ದೇಶ ಹೊಂದಿಲ್ಲದಿದ್ದರೆ, ಸಂಪೂರ್ಣವಾಗಿ ಒಳಪಡಬೇಕು ಹಾಗೂ ವಿಧೇಯರಾಗಿರಬೇಕು.

ಅಚ್ಚರಿಯ ಸಂಗತಿಯೆಂದರೆ, ವಸಾಹತುಶಾಹಿ ದೊರೆಗಳ ಸಶಸ್ತ್ರ ಸೇನೆಗೆ ಸೇರುವುದೇ ಆತ್ಮಗೌರವ ಹೊಂದಿರುವ ಹಾಗೂ ದೇಶಪ್ರೇಮಿ ಭಾರತೀಯರಿಗೆ ಅತಿದೊಡ್ಡ ಅಪಮಾನ ಎಂದು ಸಾವರ್ಕರ್ ಅವರಿಗೆ ಎಂದೂ ಅನಿಸಲೇ ಇಲ್ಲ. ಭಿಡೆಯವರ ಪುಸ್ತಕ ಕೂಡ ಹೇಳುತ್ತದೆ – 'ಮಹಾಸಭಾ ಮತ್ತು ಮಹಾನ್ ಯುದ್ಧ' ಎಂಬ ತಲೆಬರಹದ ನಿರ್ಣಯದ ಕರಡು ಪ್ರತಿಯನ್ನು ಸಿದ್ಧಪಡಿಸಿದ್ದೇ ಸಾವರ್ಕರ್ ಎಂದು. ಅದು ಹೀಗಿದೆ:

ಯಾವುದೇ ಮಿಲಿಟರಿ ದಾಳಿಯಿಂದ ಭಾರತವನ್ನು ರಕ್ಷಿಸುವ ಹೊಣೆಗಾರಿಕೆ ಬ್ರಿಟಿಷ್ ಸರ್ಕಾರ ಹಾಗೂ ನಮ್ಮದೂ ಕೂಡ ಆಗಿರುವುದರಿಂದ ಮತ್ತು ಶೋಚನೀಯವೆಂದರೆ ನೆರವು ಇಲ್ಲದೇ ಅಂತಹ ಜವಾಬ್ದಾರಿಯನ್ನು ಹೊರುವ ಸ್ಥಿತಿಯಲ್ಲಿ ನಾವು ಇವತ್ತು ಇಲ್ಲದೇ ಇರುವುದರಿಂದ, ಭಾರತ ಮತ್ತು ಇಂಗ್ಲೆಂಡ್ ನಡುವೆ ತುಂಬು ಹೃದಯದ ಸಹಕಾರಕ್ಕೆ ವಿಪುಲವಾದ ಅವಕಾಶವಿದೆ.

ಬಿಜೆಪಿ ಚುನಾವಣಾ ಪೂರ್ವದಲ್ಲಿ ಪಕ್ಷಾಂತರದ ರಾಜಕಾರಣವನ್ನು ಆರಂಭಿಸಿದೆ. ಬೇರೆ ಪಕ್ಷಗಳ ಕಾರ್ಯಕರ್ತರನ್ನು ಮಾತ್ರವಲ್ಲದೆ ರೌಡಿಗಿರಿ ಮತ್ತು ಅಕ್ರಮ ದಂಧೆಗಳ ಮೂಲಕ ಹಣ ಸಂಪಾದಿಸಿ 'ಸಮಾಜ ಸೇವಕ'ರ ಮುಖವಾಡ ತೊಟ್ಟಿರುವ ಸಮಾಜಘಾತಕರನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಚುನಾವಣೆ ಗೆಲ್ಲುವ ಸಣ್ಣತನದ ರಾಜಕಾರಣದಲ್ಲಿ ಬಿಜೆಪಿ ನಿರತವಾಗಿದೆ.



ಮಂಡ್ಯ ಜಿಲ್ಲೆ: ಬಿಜೆಪಿ ಯಶಸ್ವಿಯಾಗದಿದ್ದರೂ ಅಪಾಯ ಇದ್ದೇ ಇದೆ...

ಟಿ.ಎಲ್.ಕೃಷ್ಣೇಗೌಡ

ಬಿಜೆಪಿ ಮಂಡ್ಯ ಜಿಲ್ಲೆಯಲ್ಲಿ ನಾಲ್ಕು ವಿಧಾನಸಭಾ ಸ್ಥಾನಗಳನ್ನು ಗೆಲ್ಲಲು ಸರ್ವ ರೀತಿಯ ಪ್ರಯತ್ನಗಳನ್ನು, ಸಂಚುಗಳನ್ನು ನಡೆಸುತ್ತಿದೆ. ಮಂಡ್ಯ, ಕೆ.ಆರ್. ಪೇಟೆ, ಶ್ರೀರಂಗಪಟ್ಟಣ ಮತ್ತು ಮದ್ದೂರು ಕ್ಷೇತ್ರಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಈ ಸ್ಥಾನಗಳನ್ನು ಗೆಲ್ಲಲು ಸಂಘ ಪರಿವಾರದ ಇಡೀ ನಾಯಕತ್ವವನ್ನು ನಿಯೋಜಿಸಿದೆ.

ಈ ಪ್ರಯತ್ನದ ಭಾಗವಾಗಿ ಶ್ರೀರಂಗಪಟ್ಟಣದಲ್ಲಿ ಮೂಡಲಬಾಗಿಲ ಆಂಜನೇಯ ಸ್ವಾಮಿ ದೇವಸ್ಥಾನದ ಕುರಿತು ವಿವಾದವನ್ನು ಎಬ್ಬಿಸಲು ಸಂಘ ಪರಿವಾರ ಸರ್ವ ಪ್ರಯತ್ನ ನಡೆಸಿತು. ಕಳೆದ ಅನೇಕ ವರ್ಷಗಳಿಂದ ಮೂಡಲಬಾಗಿಲ ಆಂಜನೇಯಸ್ವಾಮಿ ದೇವಸ್ಥಾನವನ್ನು ಕೆಡವಿ ಟಿಪ್ಪು ಜಾಮಿಯಾ ಮಸೀದಿ ನಿರ್ಮಿಸಿದ್ದಾರೆ ಎಂಬ ಭಾವನಾತ್ಮಕ ವಿಚಾರವನ್ನು ಜಿಲ್ಲೆಯ ಮತ್ತು ರಾಜ್ಯದ ಜನರ ಮನದಲ್ಲಿ ಬಿತ್ತಿ ರಾಜಕೀಯ ಬೆಳೆ ಬೆಳೆಯಲು ಸಂಘ ಪರಿವಾರ ನಿರತವಾಗಿದೆ. ದೇವಸ್ಥಾನ ಇದ್ದ ಜಾಗದಲ್ಲಿ ಮಸೀದಿ ಕಟ್ಟಲು ಇದ್ದ ಆಡಳಿತಾತ್ಮಕ ಮತ್ತು ರಕ್ಷಣಾ ವಿಚಾರಗಳನ್ನು ಮರೆಮಾಚಿ ಅಲ್ಲಿ ಧಾರ್ಮಿಕ ಕಾರಣಗಳಿಗಾಗಿ ಟಿಪ್ಪು ದೇವಸ್ಥಾನವನ್ನು ಕೆಡವಿ ಮಸೀದಿ ಕಟ್ಟಿದ್ದಾರೆ ಎಂದು ಗುಲ್ಲೆಬ್ಬಿಸಲಾಗುತ್ತಿದೆ. ಇದರಲ್ಲಿ ಬಿಜೆಪಿ ಮತ್ತು ಸಂಘ ಪರಿವಾರ ಒಂದಷ್ಟು ಯಶಸ್ಸು ಸಾಧಿಸಿದೆಯಾದರೂ ಜಿಲ್ಲೆಯ ಪ್ರಜ್ಞಾವಂತ ಜನತೆ ಮತ್ತು ಪ್ರಗತಿಪರ ಚಳುವಳಿಗಳು ಬಿಜೆಪಿಗೆ ಪೂರ್ಣ ಪ್ರಮಾಣದ ಯಶಸ್ಸು ಸಾಧಿಸಲು ಅವಕಾಶ ಕೊಟ್ಟಿಲ್ಲ.

ಪ್ರಚೋದನಾತ್ಮಕ ಕುಕೃತ್ಯಗಳು

ಇತ್ತೀಚಿಗಿನ ವರುಷಗಳಲ್ಲಿ, ಪ್ರತಿ ವರ್ಷ ಹನುಮ ಮಾಲೆಯ ಹೆಸರಿನಲ್ಲಿ ಈಗ ಮಸೀದಿ ಇರುವ ಜಾಗದಲ್ಲೇ ದೇವಸ್ಥಾನ ಕಟ್ಟುತ್ತೇವೆ ಎಂದು ಶೋಭಾ ಯಾತ್ರೆ, ಪೂಜೆ ನಡೆಸುತ್ತಾ ಒಂದಷ್ಟು ಜನರನ್ನು ಕಲೆಹಾಕಲಾಗುತ್ತಿದೆ. ಈ ವರ್ಷ ಹೊರ ಜಿಲ್ಲೆಗಳಿಂದಲೂ ತನ್ನ ಕಾರ್ಯಕರ್ತರನ್ನು ಶ್ರೀರಂಗಪಟ್ಟಣದಲ್ಲಿ ಸೇರಿಸಿ ಅಲ್ಲೊಂದು ಗಲಭೆ ಸೃಷ್ಟಿಸಲು ಪ್ರಯತ್ನಿಸಲಾಯಿತು. ಮೆರವಣಿಗೆ ಹೋಗುವ ಹಾದಿಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮನೆಯ ಮೇಲೆ ಹಾರಾಡುತ್ತಿದ್ದ ಧಾರ್ಮಿಕ ಬಾವುಟವನ್ನು ಕಿತ್ತುಹಾಕಿ ಅಲ್ಲಿ ಕೇಸರಿ ಧ್ವಜವನ್ನು ಹಾರಿಸಲಾಯಿತು. ತಕ್ಷಣವೇ ಮಧ್ಯಪ್ರವೇಶ ಮಾಡಿದ ಪೊಲೀಸ್ ಇಲಾಖೆ ಬಾವುಟ ಹಾರಿಸಿದ ಕಿಡಿಗೇಡಿಯನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಿತು.

ಇದನ್ನು ಬಳಸಿಕೊಳ್ಳಲು ಪ್ರಯತ್ನಿಸಿದ ಸಂಘ ಪರಿವಾರ ಹಿಂದೂ ಕಾರ್ಯಕರ್ತನ ಮೇಲೆ ಪೊಲೀಸರು ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಶ್ರೀರಂಗಪಟ್ಟಣದ ಪೊಲೀಸ್ ಠಾಣೆಯ ಮುಂದೆ ಹಗಲು ರಾತ್ರಿ ಧರಣಿ ಸತ್ಯಾಗ್ರಹ ನಡೆಸಿತು. ಬಿಜೆಪಿಯ ಸಂಭವನೀಯ ಅಭ್ಯರ್ಥಿಗಳೆಲ್ಲರೂ ಈ ಹೋರಾಟದಲ್ಲಿ ಭಾಗವಹಿಸಿದ್ದರು. ಜಿಲ್ಲೆಯ ಯಾವ ಭಾಗದಿಂದಲೂ ಇದಕ್ಕೆ ಪೂರಕ ಪ್ರತಿಕ್ರಿಯೆ ವ್ಯಕ್ತವಾಗದ ಕಾರಣದಿಂದ ಧರಣಿಯನ್ನು ಅನಿರೀಕ್ಷಿತವಾಗಿ ಕೈಬಿಡಲಾಯಿತು.

ಬೆಂಬಿಡದ ಪ್ರಯತ್ನಗಳು

ಸಂಘ ಪರಿವಾರ ಇಂತಹ ಅನೇಕ ಪ್ರಯತ್ನಗಳನ್ನು ಮೇಲಿಂದ ಮೇಲೆ ಮಾಡುತ್ತಿದ್ದರೂ ಅವರು ಅಂದುಕೊಂಡಂತೆ ಮಂಡ್ಯ ಜಿಲ್ಲೆಯಲ್ಲಿ ಯಶಸ್ಸು ಸಿಕ್ಕಿಲ್ಲ. ಹನುಮ ಮಾಲೆಯ ದಿನ ವಿವಿಧ ಆಮಿಷಗಳನ್ನೊಡ್ಡಿ ಒಂದಷ್ಟು ಜನರನ್ನು ಕಲೆಹಾಕಿ ಶಕ್ತಿಪ್ರದರ್ಶನ ನಡೆಸಿದರೂ ನಂತರದಲ್ಲಿ ಅದನ್ನು ಮುಂದುವರಿಸಲು ಮತ್ತು ರಾಜಕೀಯ ಕ್ರೋಡಿಕರಣ ಮಾಡಲು ಸಾಧ್ಯವಾಗಲಿಲ್ಲ. ಹಾಗೆಂದು ಸಂಘ ಪರಿವಾರವನ್ನು ನಿರ್ಲಕ್ಷಿಸಿ ಸುಮ್ಮನೆ ಕೂರುವಂತೆಯೂ ಇಲ್ಲ. ಮಂಡ್ಯ ಜಿಲ್ಲೆಯಲ್ಲಿ ನೆಲೆ ಕಂಡುಕೊಳ್ಳಲು ಮತ್ತು ವೈದಿಕ ಹಾಗೂ ಧಾರ್ಮಿಕ ವಿಚಾರಗಳ ಸುತ್ತ ಜಿಲ್ಲೆಯ ಜನರನ್ನು ಅಣಿನೆರೆಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಸಂಘಿಗಳು ಮಾಡುತ್ತಿದ್ದಾರೆ. ಇದು ಜಿಲ್ಲೆಯ ಜನರೆಲ್ಲರೂ ಆತಂಕದಿಂದ ಮತ್ತು ಎಚ್ಚರದಿಂದ ಗಮನಿಸಿ ಮುಂದುವರಿಯಬೇಕಾದ ವಿಷಯವಾಗಿದೆ.

ಪ್ರತಿ ವರ್ಷ ಹನುಮ ಮಾಲೆಯ ಹೆಸರಿನಲ್ಲಿ ಈಗ ಮಸೀದಿ ಇರುವ ಜಾಗದಲ್ಲೇ ದೇವಸ್ಥಾನ ಕಟ್ಟುತ್ತೇವೆ ಎಂದು ಶೋಭಾ ಯಾತ್ರೆ, ಪೂಜೆ ನಡೆಸುತ್ತಾ ಒಂದಷ್ಟು ಜನರನ್ನು ಕಲೆಹಾಕಲಾಗುತ್ತಿದೆ. ಈ ವರ್ಷ ಹೊರ ಜಿಲ್ಲೆಗಳಿಂದಲೂ ತನ್ನ ಕಾರ್ಯಕರ್ತರನ್ನು ಶ್ರೀರಂಗಪಟ್ಟಣದಲ್ಲಿ ಸೇರಿಸಿ ಅಲ್ಲೊಂದು ಗಲಭೆ ಸೃಷ್ಟಿಸಲು ಪ್ರಯತ್ನಿಸಲಾಯಿತು.

ರಾಜಕೀಯ ಕು–ತಂತ್ರಗಳು

ಬಿಜೆಪಿಯು ಕರ್ನಾಟಕದಲ್ಲಿ ಅಧಿಕಾರವನ್ನು ಹಿಡಿಯಬೇಕಾದರೆ ಅಥವಾ ಕುದುರೆ ವ್ಯಾಪಾರಕ್ಕೆ ಅನುಕೂಲವಾಗುವ ಬಹುಮತದ ಸಮೀಪ ಬರಬೇಕಾದರೆ ಮಂಡ್ಯ ಜಿಲ್ಲೆಯಲ್ಲಿ ಅಥವಾ ಹಳೆ ಮೈಸೂರು ವಿಭಾಗದಲ್ಲಿ ಒಂದಷ್ಟು ಸ್ಥಾನಗಳನ್ನು ಗಳಿಸಿಕೊಳ್ಳಬೇಕಾದ ಅನಿವಾರ್ಯತೆ ಬಿಜೆಪಿಗೆ ಇದೆ. ಈಗಾಗಲೇ ಕರಾವಳಿ ಕರ್ನಾಟಕದಲ್ಲಿ ಗೆಲ್ಲಬಹುದಾದ ಗರಿಷ್ಠ ಸ್ಥಾನಗಳನ್ನು ಗೆದ್ದಿರುವ ಬಿಜೆಪಿ ಮುಂದಿನ ಚುನಾವಣೆಯಲ್ಲಿ ಅಷ್ಟು ಸ್ಥಾನಗಳನ್ನು ಉಳಿಸಿಕೊಳ್ಳುವ ಯಾವ ಲಕ್ಷಣವೂ ಕಾಣುತ್ತಿಲ್ಲ. ಹಾಗಾಗಿ ಅಲ್ಲಿ ಕೊರತೆಯಾಗುವ ಸ್ಥಾನಗಳನ್ನು ಬೇರೆ ಎಲ್ಲಿಂದಲಾದರೂ ತುಂಬಿಕೊಳ್ಳುವ ಅನಿವಾರ್ಯತೆ ಬಿಜೆಪಿಗೆ ಇದೆ. ಸದ್ಯಕ್ಕೆ ಅದರ ಮುಂದೆ ಅಂತಹ ಅವಕಾಶಗಳಿವೆ ಎಂದು ಬಿಜೆಪಿ ಭಾವಿಸಿರುವುದು ಹಳೆ ಮೈಸೂರು ಪ್ರಾಂತ್ಯದಲ್ಲಿ. ಅದರಲ್ಲೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ 'ತವರು' ಜಿಲ್ಲೆಯಾದ ಮಂಡ್ಯದಲ್ಲಿ ಎಂದು.

ಇದೇ ಅಂದಾಜಿನಲ್ಲಿರುವ ಬಿಜೆಪಿ ಚುನಾವಣಾ ಪೂರ್ವದಲ್ಲಿ ಪಕ್ಷಾಂತರದ ರಾಜಕಾರಣವನ್ನು ಆರಂಭಿಸಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿದಂತೆ ಬೇರೆ ಪಕ್ಷಗಳ ಅತೃಪ್ತರನ್ನು ತನ್ನೆಡೆ ಸೆಳೆದುಕೊಂಡು ಅವರನ್ನು ಅಭ್ಯರ್ಥಿಗಳನ್ನಾಗಿಸುವ ಪ್ರಯತ್ನದಲ್ಲಿ ಬಿಜೆಪಿ ನಿರತವಾಗಿದೆ. ಬೇರೆ ಪಕ್ಷಗಳ ಕಾರ್ಯಕರ್ತರನ್ನು ಮಾತ್ರವಲ್ಲದೆ ರೌಡಿಗಿರಿ ಮತ್ತು ಅಕ್ರಮ ದಂಧೆಗಳ ಮೂಲಕ ಹಣ ಸಂಪಾದಿಸಿ 'ಸಮಾಜ ಸೇವಕ'ರ ಮುಖವಾಡ ತೊಟ್ಟಿರುವ ಸಮಾಜಘಾತಕರನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಚುನಾವಣೆ ಗೆಲ್ಲುವ ಸಣ್ಣತನದ ರಾಜಕಾರಣದಲ್ಲಿ ಬಿಜೆಪಿ ನಿರತವಾಗಿದೆ.

ಈ ಹಿಂದೆ ಅಶೋಕ್ ಖೇಣಿ ಬೆಂಬಲಿಗನಾಗಿದ್ದ ಮತ್ತು ರಿಯಲ್ ಎಸ್ಟೇಟ್ ನಡೆಸುವ ಕಾಂಗ್ರೆಸ್ ಕಾರ್ಯಕರ್ತನಾಗಿದ್ದ ಸಚ್ಚಿದಾನಂದ ಎಂಬ ವ್ಯಕ್ತಿಯನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡಿರುವ ಬಿಜೆಪಿ ಶ್ರೀರಂಗಪಟ್ಟಣದಿಂದ ಆತನನ್ನು ಕಣಕ್ಕಿಳಿಸಲು ತಯಾರಿ ನಡೆಸಿದೆ. ಶಾಸಕನಾಗುವ ಕನಸನ್ನು ಹೊತ್ತು ಬಿಜೆಪಿ ಸೇರಿಕೊಂಡಿದ್ದ ನಂಜುಂಡೇಗೌಡರನ್ನು ಅನಾಥವಾಗಿಸಿರುವ ಬಿಜೆಪಿ ಈಗ ಸಚ್ಚಿದಾನಂದ ಎಂಬ ಹಣವಂತನನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಅದೇ ರೀತಿ ಮಂಡ್ಯದಲ್ಲಿ ಮಾಜಿ ಸಚಿವ ಎಸ್.ಡಿ. ಜಯರಾಮ್‌ರವರ ಮಗ ಅಶೋಕನನ್ನು ಕಣಕ್ಕಿಳಿಸಲು ತಯಾರಿ ನಡೆಸಿದೆ. ಮದ್ದೂರಿನಿಂದ ಜೆಡಿಎಸ್ ನಿಂದ ಗೆದ್ದು ಮನ್ಮುಲ್ ನಿರ್ದೇಶಕನಾಗಿದ್ದ ಎಸ್.ಪಿ.ಸ್ವಾಮಿ ಎಂಬಾತನನ್ನು ಪಕ್ಷಾಂತರ ಮಾಡಿ ವಿಧಾನಸಭಾ ಚುನಾವಣೆಗೆ ಇಳಿಸಲು ತಯಾರಿ ನಡೆಸಿದೆ. ನಕಲಿ ರಸಗೊಬ್ಬರ ತಯಾರಿಸಿ ರೈತರಿಗೆ ಮಾರಾಟ ಮಾಡಿ ಕೋಟ್ಯಾಂತರ ರೂಪಾಯಿ ಸಂಪಾದಿಸಿರುವ ಸ್ವಾಮಿ ಎಂಬಾತ 'ದೇಶಭಕ್ತ' ಬಿಜೆಪಿ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ. ಕೆ. ಆರ್.ಪೇಟೆಯಿಂದ ಹಾಲಿ ಮಂತ್ರಿ ನಾರಾಯಣಗೌಡ ಸಂಭವನೀಯ ಅಭ್ಯರ್ಥಿಯಾಗಲಿದ್ದು, ನಾಗಮಂಗಲದಿಂದ ಅಭ್ಯರ್ಥಿ ಮಾಡಲು ರೌಡಿ ಒಬ್ಬನನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಹೇಗಾದರೂ ಮಾಡಿ ಚುನಾವಣೆ ಗೆಲ್ಲುವ ಜೂಜಾಟಕ್ಕೆ ಬಿಜೆಪಿ ಇಳಿದಿದೆ.

ಧರ್ಮಸ್ಥಳದ ಸ್ವಸಹಾಯ ಗುಂಪುಗಳು–ಹಿಂದುತ್ವ ಪ್ರಚಾರದ ಸಾಧನಗಳಾಗುತ್ತಿವೆಯೆ?

ಧರ್ಮಸ್ಥಳದ ಸ್ವಸಹಾಯ ಗುಂಪುಗಳು ಹಿಂದುತ್ವ ಪ್ರಚಾರದ ಸಾಧನಗಳಾಗುತ್ತಿವೆಯೇ ಎಂಬುದನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಧರ್ಮಸ್ಥಳ ಸಂಘಗಳ ಜಾಲ ಮತ್ತು ಪ್ರಭಾವ ಜಿಲ್ಲೆಯಲ್ಲಿ ವ್ಯಾಪಕವಾಗಿಯೇ ಇದೆ. ಸಾವಿರಾರು ಸಂಘಗಳ ಮೂಲಕ ಹತ್ತಾರು ಸಾವಿರ ಮಹಿಳೆಯರನ್ನು ಸಂಘಟಿಸಿರುವ ಧರ್ಮಸ್ಥಳ ಸ್ವಸಹಾಯ ಗುಂಪುಗಳು ಅವರಲ್ಲಿ ಮೃದು ಹಿಂದುತ್ವದ ಪ್ರಜ್ಞೆ ಬಿತ್ತಲು ಕೆಲಸ ಮಾಡುತ್ತಿವೆಯೆ? ಎಂಬ ಅನುಮಾನ ಶುರುವಾಗಿದೆ. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಈ ಹಿಂದಿಗಿಂತ ಈಗ ಬಿಜೆಪಿಗೆ ಮತ್ತು ಸಂಘ ಪರಿವಾರಕ್ಕೆ ಹತ್ತಿರವಾಗಿದ್ದಾರೆ. ಆ ಕಾರಣಕ್ಕಾಗಿ ರಾಜ್ಯಸಭೆಯ ಸ್ಥಾನವನ್ನು ಬಳುವಳಿಯಾಗಿ ಪಡೆದಿರುವ ಹೆಗ್ಗಡೆಯವರು ಅದಕ್ಕೆ ಕೃತಜ್ಞರಾಗಿ ತಮ್ಮ ಸಂಸ್ಥೆ ರಚಿಸಿರುವ ಸ್ವಸಹಾಯ ಸಂಘಗಳನ್ನು ಸಂಘ ಪರಿವಾರದ ರಾಜಕಾರಣಕ್ಕೆ ಬಳಸುತ್ತಾರೆಯೆ ಎಂಬುದನ್ನು ಪರಿಶೀಲಿಸಬೇಕು. ಸ್ವಸಹಾಯ ಸಂಘಗಳಲ್ಲಿ ಪ್ರೇರಕರಾಗಿ, ಹಣ ಸಂಗ್ರಹಕರಾಗಿ ಕೆಲಸ ಮಾಡುವ ಬಹುತೇಕ ಮಂದಿ ದಕ್ಷಿಣ ಕನ್ನಡ ಅದರಲ್ಲೂ ಬೆಳ್ತಂಗಡಿ ಪ್ರದೇಶದವರೇ ಆಗಿದ್ದು ಹೆಚ್ಚಿನವರು ಸಂಘ ಪರಿವಾರದ ಸಂಪರ್ಕದಲ್ಲಿರುವ ಅಥವಾ ಕಾರ್ಯಕರ್ತರಾಗಿರುವ ಸಾಧ್ಯತೆಗಳಿವೆ. ಹಾಗಾಗಿ ಇವುಗಳ ಕಾರ್ಯವೈಖರಿ ಮತ್ತು ಆ ಸಂಘಗಳಲ್ಲಿ ನಡೆಯುವ ಚರ್ಚೆಗಳನ್ನು ಗಮನಿಸಬೇಕಾದ ಅಗತ್ಯವಿದೆ.

ನಿಲ್ಲದ ಯತ್ನಗಳು

ಒಟ್ಟಾರೆಯಾಗಿ ಮಂಡ್ಯ ಜಿಲ್ಲೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಹಳೇ ಮೈಸೂರು ಪ್ರಾಂತ್ಯದಲ್ಲಿ ಭದ್ರ ನೆಲೆ ಕಂಡುಕೊಳ್ಳುವ ಬಿಜೆಪಿಯ ಪ್ರಯತ್ನ ಕೈಗೂಡಿಲ್ಲವಾದರೂ, ಬಿಜೆಪಿ ಮತ್ತು ಸಂಘ ಪರಿವಾರ ಪ್ರಯತ್ನವನ್ನು ಕೈಬಿಟ್ಟಿಲ್ಲ. ಹೊಸ, ಹೊಸ ವರಸೆಗಳಲ್ಲಿ, ವಿಚಾರಗಳಲ್ಲಿ ಮಧ್ಯಪ್ರವೇಶ ಮಾಡುತ್ತಾ ನಿರಂತರವಾಗಿ ಪ್ರಯತ್ನಶೀಲವಾಗಿದೆ. ತನ್ನ ಕೋಮುವಾದಿ ವಿಚಾರದ ಜೊತೆಗೆ ಅಪಾರ ಸಂಪನ್ಮೂಲಗಳನ್ನೂ ಹೊಂದಿರುವ ಬಿಜೆಪಿ/ಸಂಘ ಪರಿವಾರದ ಅಪಾಯಗಳನ್ನು ನಿವಾರಿಸಿಕೊಳ್ಳಲು ವಿಶೇಷ ಪ್ರಯತ್ನ ಮಾಡಬೇಕಾಗಿದೆ.

ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಸೇವೆಗೆ ಅವಕಾಶ ಕೊಡಲು ಸರ್ಕಾರದ ನಿರ್ಧಾರ:

ಆಟೋ ಮತ್ತು ಟ್ಯಾಕ್ಸಿ ಚಾಲಕರ ವಿರೋಧ:

ಆಟೋ ಚಾಲಕರ ಸಂಘಟನೆಗಳ ಒಕ್ಕೂಟದಿಂದ ಡಿಸೆಂಬರ್ 29 ರಂದು ಸಾಮೂಹಿಕ ಧರಣಿಗೆ ನಿರ್ಧಾರ:

ಸಿ.ಸಿದ್ದಯ್ಯ

ಜಗತ್ತಿನಲ್ಲಿ ಹೊಸ ಹೊಸ ತಂತ್ರಜ್ಞಾನ ಅಭಿವೃದ್ಧಿ ಹೊಂದುತ್ತಿದ್ದಂತೆ ಇದರ ಪ್ರಯೋಜನವನ್ನು ರಸ್ತೆ ಸಾರಿಗೆ ಸೇವೆಯಲ್ಲೂ ಬಳಸಲಾಗುತ್ತಿದೆ. ಇದರ ಲಾಭವನ್ನು ಜಗತ್ತಿನ ಹಣಕಾಸು ಬಂಡವಾಳಗಾರರು ಪಡೆಯುತ್ತಿದ್ದಾರೆ. ಸಾರಿಗೆ ವಲಯದಲ್ಲಿ ಲಕ್ಷಾಂತರ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಿದ್ದಾರೆ ಮತ್ತು ಮತ್ತಷ್ಟು ಹೂಡಿಕೆ ಮಾಡುತ್ತಿದ್ದಾರೆ. ರಸ್ತೆ ಮಾರ್ಗ, ರೈಲು ಮಾರ್ಗ, ವಾಯು ಮಾರ್ಗ ಎಲ್ಲದರಲ್ಲೂ ಏಕಸ್ವಾಮ್ಯ ಸಾಧಿಸಲು ದೊಡ್ಡ ಬಂಡವಾಳಗಾರರು ಪೈಪೋಟಿ ನಡೆಸುತ್ತಿದ್ದಾರೆ. ಆಪ್ ಆಧಾರಿತ ಸೇವೆಯ ತಂತ್ರಜ್ಞಾನ ಬಂದ ನಂತರ ಇದರ ಸಂಪೂರ್ಣ ಲಾಭವನ್ನು ಈ ಕಂಪನಿಗಳೇ ಪಡೆಯತೊಡಗಿವೆ. ಓಲಾ, ಉಬರ್, ರ್ಯಾಪಿಡೋ ದಂತಹ ಕೆಲವೇ ಬೆರಳೆಣಿಕೆಯ ಕಂಪನಿಗಳು ಆಟೋ ಮತ್ತು ಟ್ಯಾಕ್ಸಿ ಸೇವೆಯನ್ನೂ ಈಗಾಗಲೇ ಬಹುತೇಕ ಏಕಸ್ವಾಮ್ಯ ಮಾಡಿಕೊಂಡಿವೆ.

ಬೈಕ್ ಟ್ಯಾಕ್ಸಿ:

ಕಡಿಮೆ ವೆಚ್ಚಗಳು ಮತ್ತು ತ್ವರಿತ ಪ್ರಯಾಣದ ಸಮಯದ ಕಾರಣದಿಂದಾಗಿ ಮತ್ತು ಸಣ್ಣ ಬೀದಿಗಳಲ್ಲಿ ಸಂಚರಿಸಲು ಬೈಕ್ ಟ್ಯಾಕ್ಸಿಗಳ ಅಗತ್ಯವಿದೆ ಎಂದು ಹೇಳಲಾಗುತ್ತಿದೆ. ಜಗತ್ತಿನ ಹಲವು ದೇಶಗಳಲ್ಲಿ ಬೈಕ್ ಗಳನ್ನು ಟ್ಯಾಕ್ಸಿಗಳಾಗಿ ಬಳಸಲು ಅನುಮತಿ ನೀಡಿವೆ. ಮೆಕ್ಸಿಕೋ, ಕೊಲಂಬಿಯಾ, ಮತ್ತು ಬ್ರೆಜಿಲ್‌ನಂತಹ ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಬೈಕ್–ಟ್ಯಾಕ್ಸಿಗಳು ವಿಶೇಷವಾಗಿ ಜನಪ್ರಿಯವಾಗಿವೆ. ವಾಸ್ತವವಾಗಿ, ಹೆಚ್ಚಿನ ಬ್ರೆಜಿಲಿಯನ್ ನಗರಗಳು ಬೈಕ್–ಟ್ಯಾಕ್ಸಿ ಸೇವೆಗಳನ್ನು ಹೊಂದಿವೆ. ಆದರೂ ಅವು ಸಣ್ಣ ಪಟ್ಟಣಗಳಲ್ಲಿ ಅನಿಯಂತ್ರಿತವಾಗಿವೆ ಮತ್ತು ದೊಡ್ಡ ನಗರಗಳಲ್ಲಿ ಟ್ಯಾಕ್ಸಿಕ್ಯಾಬ್‌ಗಳಂತೆಯೇ ಅದೇ ರೀತಿಯ ನಿಬಂಧನೆಗಳ ಅಡಿಯಲ್ಲಿವೆ.

ಬೈಕ್–ಟ್ಯಾಕ್ಸಿಗಳು ಕಾಂಬೋಡಿಯಾ, ಥೈಲ್ಯಾಂಡ್, ಇಂಡೋನೇಷಿಯಾ, ಟಿಮೋರ್–ಲೆಸ್ಟೆ ಮತ್ತು ವಿಯೆಟ್ನಾಂ ನಂತಹ ಅನೇಕ ಆಗ್ನೇಯ ಏಷ್ಯಾದ ದೇಶಗಳಲ್ಲಿ ವ್ಯಾಪಕವಾಗಿ ಪ್ರಚಲಿತವಾಗಿದೆ. ಇಂಡೋನೇಷ್ಯಾದಲ್ಲಿ, ಬೈಕ್–ಟ್ಯಾಕ್ಸಿಗಳು (ಸ್ಥಳೀಯವಾಗಿ ಓಜೆಕ್ ಎಂದು ಕರೆಯಲ್ಪಡುತ್ತವೆ) ಜನಪ್ರಿಯವಾಗಿವೆ. ಏಕೆಂದರೆ ಅವುಗಳು ನಗರಗಳಲ್ಲಿನ ಬೃಹತ್ ಸಂಚಾರ ದಟ್ಟಣೆಯ ನಡುವೆ ಸಮಯ ಮತ್ತು ಹಣವನ್ನು ಉಳಿಸುತ್ತವೆ. ಗೊಜೆಕ್ ನಂತಹ ಅಗ್ರಿಗೇಟರ್‌ಗಳ ಪ್ರವೇಶವು ಇಂಡೋನೇಷ್ಯಾದ ಬೈಕ್–ಟ್ಯಾಕ್ಸಿ ವಲಯವನ್ನು ಔಪಚಾರಿಕಗೊಳಿಸಲು ಸಹಾಯ ಮಾಡಿದೆ. ಏತನ್ಮಧ್ಯೆ, ಥೈಲ್ಯಾಂಡ್ ಅನೇಕ ವರ್ಷಗಳಿಂದ ಕಾರ್ಯನಿರ್ವಹಿಸುವ ಬೈಕ್–ಟ್ಯಾಕ್ಸಿ ವಲಯವನ್ನು ಹೊಂದಿದೆ ಮತ್ತು 2005 ರಲ್ಲಿ ನಿಯಮಾವಳಿಗಳನ್ನು ರಚಿಸಲಾಯಿತು. ಅದೇ ರೀತಿ, ನೈಜೀರಿಯಾ, ಕ್ಯಾಮರೂನ್, ಬೆನಿನ್, ಉಗಾಂಡಾ, ಕೀನ್ಯಾ, ರುವಾಂಡಾ, ಸಿಯೆರಾ ಲಿಯೋನ್ ಮತ್ತು ತಾಂಜಾನಿಯಾದಲ್ಲಿ ಆಫ್ರಿಕಾದಾದ್ಯಂತ ವ್ಯಾಪಕವಾಗಿ ಬಳಸಲ್ಪಡುತ್ತವೆ.

ಅನಧಿಕೃತ ಬೈಕ್ ಟ್ಯಾಕ್ಸಿ:

ಭಾರತದ ಹಲವು ನಗರ ಪಟ್ಟಣಗಳಲ್ಲಿ ಓಲಾ, ಉಬರ್, ರ್ಯಾಪಿಡೋ ಜೊತೆಗೆ ಇತರೆ ಅಗ್ರಿಗೇಟರ್ ಕಂಪನಿಗಳು ಈಗಾಗಲೇ ಹಲವು ವರ್ಷಗಳಿಂದ ಅಧಿಕೃತವಾಗಿ ಹಾಗೂ ಅನಧಿಕೃತವಾಗಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ನಡೆಸುತ್ತಿವೆ. ಈ ಕಂಪನಿಗಳು ಬಹುತೇಕ ರಾಜ್ಯಗಳಲ್ಲಿ ಸಾರಿಗೆ ಇಲಾಖೆಯಿಂದ ಪರವಾನಗಿ ಪಡೆದಿಲ್ಲ. ಮಾತ್ರವಲ್ಲ, ಸ್ವಂತ ಬಳಕೆಗೆಂದು ಪಡೆದಿರುವ (ವೈಟ್ ಬೋರ್ಡ್) ಬೈಕ್ ಗಳನ್ನು ಸಾರ್ವಜನಿಕ ಸೇವೆಗೆ ಬಳಸಿಕೊಳ್ಳುತ್ತಿದ್ದಾರೆ. ಈ ಬೈಕ್ ಟ್ಯಾಕ್ಸಿಗಳಲ್ಲಿನ ಪ್ರಯಾಣಿಕರಿಗೆ ಅದರಲ್ಲೂ ಮಹಿಳಾ ಪ್ರಯಾಣಿಕರಿಗೆ ಸುರಕ್ಷತೆ ಎಂಬುದಿಲ್ಲ. ಮಹಿಳಾ ಪ್ರಯಾಣಿಕರ ಮೇಲೆ ಬೈಕ್ ಟ್ಯಾಕ್ಸಿ ಚಾಲಕರು ಲೈಂಗಿಕ ಕಿರುಕುಳ ಕೊಟ್ಟ ವರದಿಗಳು ಬರುತ್ತಲೇ ಇವೆ.

ಈ ಬೈಕ್ ಟ್ಯಾಕ್ಸಿಗಳಿಂದಾಗಿ ನಮ್ಮ ಆದಾಯಕ್ಕೆ ದಕ್ಕೆ ಉಂಟಾಗಿದೆ, ಇದನ್ನು ತಡೆಯಬೇಕು ಮತ್ತು ಇವುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನ ಚಾಲಕರು ಹಲವು ಹೋರಾಟಗಳನ್ನು ಮಾಡಿದ್ದಾರೆ. ಪ್ರಾದೇಶಿಕ ಸಾರಿಗೆ ಕಛೇರಿಗಳ ಎದುರು ಪ್ರತಿಭಟನೆ ನಡೆಸಿದ್ದಾರೆ. ಇಂತಹ ಅನಧಿಕೃತ ಬೈಕ್ ಟ್ಯಾಕ್ಸಿಗಳ ವಿರುದ್ಧ ಬೆಂಗಳೂರು ಸೇರಿದಂತೆ ಭಾರತದ ಹಲವು ನಗರಗಳಲ್ಲಿ ಆಟೋ ಚಾಲಕರು ಪ್ರತಿಭಟನೆ ನಡೆಸಿದ್ದಾರೆ. ಮಹಾರಾಷ್ಟ್ರದ ಪೂನಾದಲ್ಲಿ ಇದೇ ಡಿಸೆಂಬರ್ ನಲ್ಲಿ ಆಟೋಚಾಲಕರು ಮತ್ತೊಮ್ಮೆ ಮುಷ್ಕರ ನಡೆಸಿದರು. ನಗರದ ಎಲ್ಲಾ ಆಟೋ ಸಂಘಟನೆಗಳು ಒಟ್ಟಾಗಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆಕೊಟ್ಟು ಹೋರಾಟಕ್ಕೆ ಇಳಿದಿದ್ದರು. ಅಲ್ಲಿನ ಸರ್ಕಾರ ಆಟೋಚಾಲಕರ ಎಲ್ಲಾ ಮುಖಂಡರನ್ನು ಬಂಧಿಸುವ ಮೂಲಕ ಆಟೋ ಮುಷ್ಕರವನ್ನು ಹತ್ತಿಕ್ಕಿತು. ರ್ಯಾಪಿಡೋ ರಾಜಾರೋಷವಾಗಿ ತನ್ನ ಅನಧಿಕೃತ ಕಾರ್ಯಾಚರಣೆ ಮುಂದುವರಿಸಿದೆ. 'ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಗೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದೇವೆ, ಶೀಘ್ರದಲ್ಲೇ ಪರವಾನಗಿ ಸಿಗುವ ಭರವಸೆ ಇದೆ. ನಾವು ನಮ್ಮ ಕಾರ್ಯಾಚರಣೆ ಸ್ಥಗಿತ ಮಾಡುವುದಿಲ್ಲ' ಎಂದು ಆ ಸಂಸ್ಥೆ ಹೇಳಿಕೆ ನೀಡಿದೆ. ಇಂತಹ ಅನಧಿಕೃತ ಕಾರ್ಯಾಚರಣೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗದ ಅಸಹಾಯಕ ಸ್ಥಿತಿಗೆ ಸರ್ಕಾರಗಳು ಮತ್ತು ಸಾರಿಗೆ ಇಲಾಖೆ ತಲುಪಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಕ್ತ ಆರ್ಥಿಕ ನೀತಿಗಳು ಇವರ ಕೈಕಟ್ಟಿ ಹಾಕಿದೆ.

ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗೆ ಪರವಾನಗಿ:

ಒಂದೆಡೆ ಆಟೋ ಮತ್ತು ಟ್ಯಾಕ್ಸಿ ಚಾಲಕರು ಬೈಕ್ ಟ್ಯಾಕ್ಸಿ ಗಳಿಂದಾಗಿ ತಮ್ಮ ದಿನನಿತ್ಯದ ಆದಾಯ ಕುಸಿತವಾಗಿದೆ ಎನ್ನುತ್ತ ಅನಧಿಕೃತ ಬೈಕ್ ಟ್ಯಾಕ್ಸಿ ವಿರುದ್ಧ ಹೋರಾಟ ನಡೆಸುತ್ತಿದ್ದರೆ, ಮತ್ತೊಂದೆಡೆ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗೆ ಪರವಾನಗಿ ಕೊಡಲು ಕರ್ನಾಟಕ ಸರ್ಕಾರ ಮುಂದಾಗಿದೆ.

ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗೆ ಪರವಾನಗಿ ಕೊಡಲು 2021ರ ಜುಲೈ 14 ರಂದೇ ಕರ್ನಾಟಕ ಸರ್ಕಾರ ಅಧಿಸೂಚನೆ ಹೊರಡಿಸಿದೆ. ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೂ ಇದು ಅನ್ವಹಿಸುತ್ತದೆ, ಮತ್ತು ಎಲೆಕ್ಟ್ರಿಕ್ ಬೈಕ್ ಗಳಿಗೆ ಮಾತ್ರ ಪರವಾನಗಿ ಕೊಡಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ನಮೂಧಿಸಲಾಗಿದೆ.

ಬ್ಲೂ ಸ್ಮಾರ್ಟ್ ಮತ್ತು ಬೌನ್ಸ್ ಎಂಬ ಎರಡು ಅಗ್ರಿಗೇಟರ್ ಕಂಪನಿಗಳಿಗೆ ಎಲೆಕ್ಟ್ರಿಕ್ ಬೈಕ್ ಸೇವೆ ಒದಗಿಸಲು ಪರವಾನಗಿ ನೀಡಲು ಸಾರಿಗೆ ಇಲಾಖೆ ನಿರ್ಧರಿಸಿದೆ. ಮತ್ತೊಂದು ಕಂಪನಿಗೆ ಪರವಾನಗಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಎಂದು ಇತ್ತೀಚೆಗೆ ಸಾರಿಗೆ ಆಯುಕ್ತರು ಹೇಳಿದ್ದಾರೆ. ಅಂದರೆ, ಸಾರ್ವಜನಿಕ ಸೇವೆ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸುವ ಎಲೆಕ್ಟ್ರಿಕ್ ಬೈಕ್ ಗಳಿಗೆ ಆಪ್ ಆಧಾರಿತ 'ಬೈಕ್–ಟ್ಯಾಕ್ಸಿ' ಪರವಾನಗಿ ಕೊಡಲಾಗುತ್ತದೆ. ಇಂತಹ ಬೈಕ್ ಗಳ ನಂಬರ ಪ್ಲೇಟ್ ಹಳದಿ ಬಣ್ಣದ್ದಾಗಿರುತ್ತದೆ. ಆಟೋರಿಕ್ಷಾ ಮತ್ತು ಟ್ಯಾಕ್ಸಿಗಳ ಪರವಾನಗಿಗೆ ಇರುವ ಬಹುತೇಕ ನಿಬಂದನೆಗಳು ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಪರವಾನಗಿಯಲ್ಲೂ ಇರುತ್ತವೆ. ಚಾಲಕರು ನಿರ್ಧಿಷ್ಟ ಬಣ್ಣದ ಸಮವಸ್ತ್ರ ಧರಿಸಬೇಕು ಎಂದು ಹೇಳಲಾಗಿದೆ.

ನಿಯಮದ ಪ್ರಕಾರ, ಜಿಪಿಎಸ್ ಅಳವಡಿಸಿಕೊಂಡ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಳು ಕಾರ್ಯನಿರ್ವಹಿಸಬಹುದು. ಕನಿಷ್ಠ 5 ಕಿ.ಮೀ ಮತ್ತು ಗರಿಷ್ಠ 10 ಕಿ.ಮೀ.ಗೆ ಇಲಾಖೆಯಿಂದ ಪ್ರಯಾಣ ದರ ನಿಗದಿಪಡಿಸಲಾಗುವುದು. ಕಾಲಕಾಲಕ್ಕೆ ದರ ಪರಿಷ್ಕರಣೆಗೆ ಒಳಪಡುತ್ತದೆ. ಗರಿಷ್ಠ ದರ ಸುಮಾರು 50 ರೂ ಆಗಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುರಕ್ಷತೆಗೆ ಸಂಬಂಧಿಸಿದ ನಿಯಮಗಳು ಒಳಗೊಂಡಿರುತ್ತವೆ. ವಾಹನ ಫಿಟ್ನೆಸ್ ಪ್ರಮಾಣಪತ್ರ, ನಿಗದಿತ ವೇಗ ಮಿತಿ, ಚಾಲಕನಿಗೆ ಕನಿಷ್ಠ ಮತ್ತು ಗರಿಷ್ಠ ವಯಸ್ಸು, ಚಾಲಕ ಮತ್ತು ಪ್ರಯಾಣಿಕರಿಗೆ ವಿಮಾ ರಕ್ಷಣೆಯನ್ನು ಹೊಂದಿರಬೇಕು. ಚಾಲಕರಿಗೆ ಸೇವಾ ಪೂರೈಕೆದಾರರಿಂದ ಕಡ್ಡಾಯ ಸುರಕ್ಷತಾ ತರಬೇತಿ ನೀಡಬೇಕು. ಪ್ರಯಾಣಿಕರಿಗೆ ಪ್ರಥಮ ಚಿಕಿತ್ಸಾ ಕಿಟ್ ಮತ್ತು ಹೆಲ್ಮೆಟ್‌ಗಳನ್ನು ➚

19ನೇ ಶತಮಾನದ ಕೈಗಾರಿಕಾ ಕ್ರಾಂತಿಯ ನಂತರ ಬಂದಿರುವ/ಬರುತ್ತಿರುವ ಸುಧಾರಿತ ಯಂತ್ರಗಳು, ಉದ್ಯಮ ಸ್ವರೂಪವನ್ನೇ ಬದಲಿಸಿವೆ. ಕಂಪ್ಯೂಟರ್, ಯಂತ್ರಗಳು, ಸಂವಹನ ಮಾಧ್ಯಮಗಳು ಇವು ಹಲವರ ಕೆಲಸಗಳನ್ನೇ ಕಸಿದುಕೊಂಡಿವೆ. ಮನುಷ್ಯರ ಸಹಾಯವಿಲ್ಲದೆ ಸಂಪೂರ್ಣವಾಗಿ ಫ್ಯಾಕ್ಟರಿಯಲ್ಲಿ ತಯಾರಾಗುವ ಬಟ್ಟೆಗಳು ಇದಕ್ಕೊಂದು ಉದಾಹರಣೆ. ಇದು ಲಕ್ಷಾಂತರ ನೇಕಾರರ ಕಸುಬನ್ನೇ ಕಸಿದುಕೊಂಡಿತು. ಕೃಷಿಯಲ್ಲೂ ಇದರ ಬಳಕೆಯಿಂದಾಗಿ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರು ನಿರುದ್ಯೋಗಿಗಳಾಗಿದ್ದಾರೆ. ಹೊಸ ಹೊಸ ತಂತ್ರಜ್ಞಾನಗಳು, ಉತ್ಪನ್ನ ಮತ್ತು ಸೇವಾ ವಲಯಗಳಲ್ಲಿ ಕಂಪ್ಯೂಟರ್‌ಗಳ ಕೆಲಸ ಹೆಚ್ಚುತ್ತಿದ್ದಂತೆ, ಇದು ಕೋಟ್ಯಾಂತರ ಶ್ರಮಿಕರ ಉದ್ಯೋಗಗಳನ್ನೇ ಕಸಿಯತೊಡಗಿದೆ. ಚಾಲಕರಿಲ್ಲದೆ ವಾಹನ ಚಲಾಯಿಸಬಹುದಾದ ತಂತ್ರಜ್ಞಾನ ಬಂದಿದೆ. ಮುಂದಿನ ದಿನಗಳಲ್ಲಿ ಚಾಲಕರ ಅಗತ್ಯವೂ ಇರುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡುವವರು(ಸ್ವದೇಶಿ ಮತ್ತು ವಿದೇಶಿ ಹೂಡಿಕೆದಾರರು) ಇದರ ಲಾಭ ಪಡೆಯುತ್ತಾರೆ. ಸರ್ಕಾರವೂ ಈ ಹೂಡಿಕೆದಾರರಿಗೆ ಅನುಕೂಲವಾಗುಂತೆ ನೀತಿ ನಿಯಮಗಳನ್ನು ರೂಪಿಸುತ್ತದೆ. ಮನುಷ್ಯರ ಕೆಲಸಗಳು ಕ್ಷೀಣಿಸುತ್ತವೆ. ಅಲ್ಪ ಬಂಡವಾಳ ಹೂಡಿಕೆ ಮಾಡಿ ಸಣ್ಣ ಸಣ್ಣ ಉತ್ಪಾದನೆಗಳಲ್ಲಿ ತೊಡಗಿಕೊಂಡಿರುವ, ಸಣ್ಣ ಪುಟ್ಟ ಅಂಗಡಿ ಇಟ್ಟು ವ್ಯಾಪಾರ ಮಾಡುವ, ಆಟೋ, ಟ್ಯಾಕ್ಸಿ, ಟೆಂಪೋ, ಸರಕು ಸಾಗಣೆ ವಾಹನಗಳ ಮೂಲಕ ಸೇವೆಗಳಲ್ಲಿ ತೊಡಗಿ ಸ್ವಂತ ಉದ್ಯೋಗ ಅವಲಂಭಿಸಿ ಬದುಕುತ್ತಿರುವವರ ಉದ್ಯೋಗಗಳನ್ನೇ ಕಿತ್ತುಕೊಂಡು, ಅವರನ್ನು ನಿರುದ್ಯೋಗಿಗಳ ಸಾಲಿನಲ್ಲಿ ನಿಲ್ಲಿಸುತ್ತದೆ. ಬೈಕ್ ಟ್ಯಾಕ್ಸಿ ಸೇವೆ ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತದೆ ಎಂದು ಸರ್ಕಾರ ಹೇಳುತ್ತಿದೆ. ನಿಜ, ಒಂದಷ್ಟು ನಿರುದ್ಯೋಗಿ ಯುವಜನರಿಗೆ ಇದರಿಂದ ಉದ್ಯೋಗ ಸಿಗಬಹುದು. ಆದರೆ, ಅದು ಆ ಯುವಜನತೆಗೆ ಉದ್ಯೋಗ ಭದ್ರತೆಯನ್ನಾಗಲೀ, ನಿಯಮಿತ ಆದಾಯವನ್ನಾಗಲೀ, ಕಾರ್ಮಿಕರಿಗೆ ಸಿಗಬೇಕಾದ ಕಾರ್ಮಿಕ ಹಕ್ಕುಗಳಾಗಲೀ ಸಿಗುವುದಿಲ್ಲ. ಮತ್ತೊಂದಡೆ ಇದರಿಂದ ಆಟೋ ಮತ್ತು ಟ್ಯಾಕ್ಸಿ ಗಳ ದುಡಿಮೆಯನ್ನೇ ಆಧರಿಸಿ ಬದುಕುತ್ತಿರುವ ರಾಜ್ಯದ ಹತ್ತು ಲಕ್ಷ ಕುಟುಂಬಗಳ ಬದುಕಿನ ಮೇಲೆ ತೀವ್ರವಾದ ಕೆಟ್ಟ ಆರ್ಥಿಕ ಪರಿಣಾಮ ಬೀರುತ್ತದೆ.

ಒಂದೆಡೆ ಪೆಟ್ರೋಲ್, ಆಟೋ ಗ್ಯಾಸ್ ಬೆಲೆ ಹೆಚ್ಚಾಗಿದೆ. ನಮ್ಮ ಆದಾಯ ಕಡಿಮೆಯಾಗಿದೆ. ಜೀವನಾವಶ್ಯಕ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಲೇ ಇದೆ. ಈ ಎಲ್ಲಾ ಕಾರಣಗಳಿಂದ ಕುಟುಂಬ ನಿರ್ವಹಣೆಯೇ ಕಷ್ಟಕರವಾಗಿದೆ. ಸಾಲ ಮಾಡಿ ವಾಹನ ಖರೀದಿಸಿದ್ದೇವೆ. ಸಾಲದ ಕಂತು ಮತ್ತು ಬಡ್ಡಿ ಕಟ್ಟಲಾಗದೆ ಸಾಲದ ಬಲೆಯಲ್ಲಿ ಸಿಲುಕಿ ನರಳುವಂತಾಗಿದೆ. ಈಗ ಬೈಕ್ ಟ್ಯಾಕ್ಸಿ ಸೇವೆಗೆ ಸರ್ಕಾರ ಪರವಾನಗಿ ಕೊಡುತ್ತಿರುವುದು ನಮ್ಮನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಲಿದೆ ಎಂಬ ಆತಂಕವನ್ನು ಆಟೋ ಮತ್ತು ಟ್ಯಾಕ್ಸಿ ಚಾಲಕರು ವ್ಯಕ್ತಪಡಿಸುತ್ತಿದ್ದಾರೆ.





ನ್ಯಾಯಾಂಗದ ಸ್ವಾತಂತ್ರ್ಯಕ್ಕೇ ಅಪಾಯ

ಪ್ರಕಾಶ್ ಕಾರತ್

ಮೋದಿ ಸರಕಾರ ಸುಪ್ರೀಂ ಕೋರ್ಟ್ ಮೇಲಿನ ಆಕ್ರಮಣವನ್ನು ತೀವ್ರಗೊಳಿಸಿದೆ. ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಕಳೆದ ಕೆಲವು ವಾರಗಳಿಂದ ಸಂಸತ್ತಿನ ಒಳಗೂ ಹೊರಗೂ ಕೆಲವು ಹೇಳಿಕೆಗಳನ್ನು ನೀಡುತ್ತಿದ್ದಾರೆ. ನ್ಯಾಯಮೂರ್ತಿಗಳ ನೇಮಕಕ್ಕೆ ಅನುಸರಿಸಲಾಗುವ ಕೊಲಿಜಿಯಂ ವ್ಯವಸ್ಥೆ ಸಂವಿಧಾನಕ್ಕೆ ಪರಕೀಯವಾದುದು ಎಂದು ಅವರು ಟೀಕಿಸುತ್ತಿದ್ದಾರೆ. ನ್ಯಾಯಮೂರ್ತಿಗಳ ನೇಮಕವು ಸರಕಾರದ ಹಕ್ಕಾಗಿದೆ ಎಂಬುದು ಸಂವಿಧಾನದ 'ಸ್ಪಿರಿಟ್' ಆಗಿದೆ ಎಂದು ಅವರು ಹೇಳುತ್ತಿದ್ದಾರೆ.

ರಾಜ್ಯ ಸಭೆಯ ಅಧ್ಯಕ್ಷರಾಗಿ ಮೇಲ್ಮನೆಯ ಮೊದಲ ಅಧಿವೇಶನದ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ಭಾರತದ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಕೂಡ 2014ರ ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗ ಕಾನೂನನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್ ತೀರ್ಪಿನ ಮೇಲೆ ಹರಿಹಾಯ್ದಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪು ಸಂಸದೀಯ ಪ್ರಜಾಪ್ರಭುತ್ವದ ಸಾರ್ವಭೌಮತ್ವದ ಮೇಲಿನ ದಾಳಿ ಎಂದವರು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಮೇಲಿನ ದಾಳಿಗೆ ಮೇಲಿನಿಂದಲೇ ಸೂಚನೆ ಬಂದಿದೆಯೆಂಬುದು ಅಧಿಕೃತ ಸ್ಥಾನಮಾನ ಹೊಂದಿರುವ ಈ ಇಬ್ಬರು ವ್ಯಕ್ತಿಗಳ ಹೇಳಿಕೆಗಳಿಂದ ಗೊತ್ತಾಗುತ್ತದೆ.

ಕೊಲಿಜಿಯಂ ವ್ಯವಸ್ಥೆ ಕುರಿತು ಟೀಕೆಗಳಿಂದ ತೃಪ್ತರಾಗದ ರಿಜಿಜು ಉನ್ನತ ನ್ಯಾಯಾಂಗಕ್ಕೆ ಬೆದರಿಕೆ ಹಾಕುವ ಮಟ್ಟಕ್ಕೂ ಹೋಗಿದ್ದಾರೆ. 'ನ್ಯಾಯಮೂರ್ತಿಗಳ ನೇಮಕದ ನಿಯಮಗಳನ್ನು ಬದಲಾಯಿಸದಿದ್ದರೆ ಉನ್ನತ ನ್ಯಾಯಾಂಗದಲ್ಲಿ ಹುದ್ದೆಗಳು ಖಾಲಿಯಿರುವ ಸಮಸ್ಯೆ ಉದ್ಭವವಾಗುತ್ತಲೇ ಇರುತ್ತದೆ' ಎಂದು ಅವರು ಸಂಸತ್ತಿನಲ್ಲಿ ಘೋಷಿಸಿದ್ದಾರೆ. ಇದರ ಪರಿಣಾಮ ತುಂಬಾ ಸ್ಪಷ್ಟವಾಗಿದೆ: ಹೈ ಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ಸಲಹೆ ಮಾಡಿದ ನೇಮಕಗಳನ್ನು ತಡೆಹಿಡಿಯುವುದನ್ನು ಸರಕಾರ ಮುಂದುವರಿಸಲಿದೆ. ಯಾರನ್ನು ನ್ಯಾಯಾಧೀಶರನ್ನಾಗಿ ನೇಮಿಸಬೇಕೆಂಬುದಕ್ಕೆ ಸರಕಾರದ ಇಚ್ಛೆಗೆ ನ್ಯಾಯಾಂಗ ಹೂಂಗುಡುವವರೆಗೆ ನೇಮಕವನ್ನು ತಡೆ ಹಿಡಿಯುತ್ತದೆ ಎನ್ನುವುದು ಇದರ ಸ್ಪಷ್ಟ ಸೂಚನೆಯಾಗಿದೆ.

ಜಾಮೀನು ಅರ್ಜಿಗಳು ಮತ್ತು 'ಕ್ಷುಲ್ಲಕ' ಪಿಐಎಲ್‌ಗಳನ್ನು ಪರಿಗಣಿಸಿ ಸಮಯ ಹಾಳು ಮಾಡಿಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್‌ಗೆ ಬೋಧನೆ ಮಾಡುವ ಮಟ್ಟಕ್ಕೂ ಕಾನೂನು ಸಚಿವರು ಹೋಗಿದ್ದಾರೆ. 'ಅರ್ಹರಿಗೆ ನ್ಯಾಯ ಒದಗಿಸಬೇಕು. ನ್ಯಾಯಾಲಯಗಳು ಕಾರ್ಯನಿರ್ವಹಿಸುವಾಗ ಅಥವಾ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಅವುಗಳಿಗೆ ತೊಂದರೆಯಾಗುವಂತೆ ಮಾಡುವವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಕೂಡ ನಾವು ನ್ಯಾಯಾಂಗಕ್ಕೆ ನಿರ್ದೇಶನ ನೀಡಬೇಕಾಗುತ್ತದೆ' ಎಂದೂ ವಾಚಾಳಿ ಕಾನೂನು ಮಂತ್ರಿ ಬಡಬಡಿಸಿದ್ದಾರೆ.

ಇದರ ಸಂದೇಶ ಸ್ಪಷ್ಟವಾಗಿದೆ: ನಾಗರಿಕರ ವೈಯಕ್ತಿಕ ಸ್ವಾತಂತ್ರ್ಯದ ವಿಚಾರಗಳನ್ನು ಅಥವಾ ಕಾರ್ಯಾಂಗದ ತಪ್ಪು ಕೆಲಸಗಳನ್ನು ಯಾವುದೇ ಅರ್ಜಿದಾರರು ಪ್ರಶ್ನಿಸಿದರೆ ಅಂಥ ವಿಷಯಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಪರಿಗಣಿಸಬಾರದು ಎನ್ನುವುದು ಅದರ ಸೂಚನೆಯಾಗಿದೆ.

ಸಿಜೆಐ ತಿರುಗೇಟು

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ಸಚಿವರ ಈ ಅನಪೇಕ್ಷಿತ ಸಲಹೆಗೆ ದೃಢವಾದ ತಿರುಗೇಟು ನೀಡಿದ್ದಾರೆ. "ಕೋರ್ಟ್‌ಗೆ ಯಾವ ಪ್ರಕರಣವೂ ಚಿಕ್ಕದಲ್ಲ" ಎಂದವರು ಹೇಳಿದ್ದಾರೆ. ಅಲ್ಲದೆ, "ವೈಯಕ್ತಿಕ ಸ್ವಾತಂತ್ರ್ಯದ ವಿಚಾರಗಳಲ್ಲಿ ನಾವು ಕ್ರಮಕೈಗೊಂಡು ಪರಿಹಾರ ಒದಗಿಸದಿದ್ದರೆ ನಾವು ಇಲ್ಲಿ ಇರುವುದಾದರೂ ಯಾಕಾಗಿ?' ಎಂದವರು ಪ್ರಶ್ನಿಸಿದ್ದಾರೆ. ಜಸ್ಟಿಸ್ ಯು.ಯು. ಲಲಿತ್ ಸಿಜೆಐ ಆಗಿದ್ದ ಸಂಕ್ಷಿಪ್ತ ಅವಧಿಯಲ್ಲಿ ಮತ್ತು ಇಲ್ಲಿವರೆಗೆ, ಬಹಳ ದೀರ್ಘ ಕಾಲದಿಂದ ಜೈಲಿನಲ್ಲಿರುವವರ ಹಾಗೂ ಕೆಳ ನ್ಯಾಯಾಲಯಗಳು ಜಾಮೀನು ಅರ್ಜಿಗಳು ತಿರಸ್ಕೃತವಾಗಿರುವವರ ಜಾಮೀನು ಅರ್ಜಿಗಳ ಬಗ್ಗೆ ಸುಪ್ರೀಂ ಕೋರ್ಟ್ ಸೂಕ್ಷ್ಮ ಗಮನ ನೀಡುತ್ತಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾನೂನು (ಯುಎಪಿಎ) ಅಡಿಯಲ್ಲಿ ಎರಡು ವರ್ಷಗಳಿಂದ ಜೈಲಿನಲ್ಲಿದ್ದ ತೀಸ್ತಾ ಸೆಟಲ್ವಾಡ್ ಮತ್ತು ಸಿದ್ದಿಕ್ ಕಪ್ಪನ್‌ರಿಗೆ ಯು.ಯು. ಲಲಿತ್ ಸಿಜೆಐ ಆಗಿದ್ದ ಅವಧಿಯಲ್ಲಿ ಮಧ್ಯಂತರ ಜಾಮೀನು ಸಿಕ್ಕಿದೆ. ಅದಾದ ನಂತರ, ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಬಲವಾದ ಆಕ್ಷೇಪಗಳ ವಿರುದ್ಧವಾಗಿ ಗೌತಮ್ ನವ್ಲಾಖಾರ ಗೃಹ ಬಂಧನಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಅಲ್ಲದೆ, ಆನಂದ ತೇಲ್ತುಂಬ್ಡೆ ಅವರಿಗೆ ಮುಂಬೈ ಹೈ ಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿದ್ದ ಎನ್‌ಐಎ ಅರ್ಜಿಯನ್ನು ತಳ್ಳಿ ಹಾಕಿತ್ತು. ವೈಯಕ್ತಿಕ ಸ್ವಾತಂತ್ರ್ಯ ಮತ್ತು ನಾಗರಿಕ ಹಕ್ಕುಗಳನ್ನು ರಕ್ಷಿಸುವ ಸುಪ್ರೀಂ ಕೋರ್ಟ್‌ನ ಈ ಕೃತ್ಯಗಳೇ ಸರ್ವಾಧಿಕಾರಿ ಸರಕಾರದ ಕಣ್ಣು ಕೆಂಪಾಗಲು ಕಾರಣವಾಗಿವೆ.

'ನ್ಯಾಯಮೂರ್ತಿಗಳ ನೇಮಕದ ನಿಯಮಗಳನ್ನು ಬದಲಾಯಿಸದಿದ್ದರೆ ಉನ್ನತ ನ್ಯಾಯಾಂಗದಲ್ಲಿ ಹುದ್ದೆಗಳು ಖಾಲಿಯಿರುವ ಸಮಸ್ಯೆ ಉದ್ಭವವಾಗುತ್ತಲೇ ಇರುತ್ತದೆ' ಎಂದು ಅವರು ಸಂಸತ್ತಿನಲ್ಲಿ ಘೋಷಿಸಿದ್ದಾರೆ. ಇದರ ಪರಿಣಾಮ ತುಂಬಾ ಸ್ಪಷ್ಟವಾಗಿದೆ: ಹೈ ಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ಸಲಹೆ ಮಾಡಿದ ನೇಮಕಗಳನ್ನು ತಡೆಹಿಡಿಯುವುದನ್ನು ಸರಕಾರ ಮುಂದುವರಿಸಲಿದೆ. ಯಾರನ್ನು ನ್ಯಾಯಾಧೀಶರನ್ನಾಗಿ ನೇಮಿಸಬೇಕೆಂಬುದಕ್ಕೆ ಸರಕಾರದ ಇಚ್ಛೆಗೆ ನ್ಯಾಯಾಂಗ ಹೂಂಗುಡುವವರೆಗೆ ನೇಮಕವನ್ನು ತಡೆ ಹಿಡಿಯುತ್ತದೆ ಎನ್ನುವುದು ಇದರ ಸ್ಪಷ್ಟ ಸೂಚನೆಯಾಗಿದೆ.

ತಾನು ಹೇಳಿದಂತೆ ಬಗ್ಗುವ ಕೆಲವು ನ್ಯಾಯಮೂರ್ತಿಗಳನ್ನು ಸುಪ್ರೀಂ ಕೋರ್ಟ್‌ಗೆ ನೇಮಿಸುವಲ್ಲಿ ಕೇಂದ್ರ ಸರಕಾರ ಈಗಾಗಲೇ ಸಫಲವಾಗಿದೆ. ತೀರಾ ಇತ್ತೀಚಿನ ದಿನಗಳಲ್ಲಿ ಜಸ್ಟಿಸ್ ಅರುಣ್ ಮಿಶ್ರಾ (ಈಗ ನಿವೃತ್ತರು) ಮತ್ತು ಜಸ್ಟಿಸ್ ಎಂ.ಆರ್. ಷಾ, ಪ್ರಧಾನಿ ನರೇಂದ್ರ ಮೋದಿಯನ್ನು ಸಾರ್ವಜನಿಕವಾಗಿಯೇ ಹೊಗಳಿದ್ದನ್ನು ನಾವು ನೋಡಿದ್ದೇವೆ. ಆದರೆ, ತನಗೆ 'ಬದ್ಧವಾದ' ಜಡ್ಜ್‌ಗಳಿಂದಲೇ ಉನ್ನತ ನ್ಯಾಯಾಂಗವನ್ನು ತುಂಬಿಸಬೇಕೆಂಬ ಸರಕಾರದ ಉದ್ದೇಶಕ್ಕೆ ಕೊಲಿಜಿಯಂ ವ್ಯವಸ್ಥೆ ಅನುಕೂಲಕರ ಆಗಿಲ್ಲವೆನ್ನುವುದು ಮೋದಿ ಸರಕಾರದ ಚಿಂತೆಯಾಗಿದೆ. ಆದ್ದರಿಂದಲೇ ಕೊಲಿಜಿಯಂ ವ್ಯವಸ್ಥೆ ಮೇಲಿನ ಅದರ ಈ ಪರಿಯ ಆಕ್ರಮಣವನ್ನು ಉನ್ನತ ನ್ಯಾಯಾಂಗವನ್ನು ಕೈವಶ ಮಾಡಿಕೊಳ್ಳುವ ಯತ್ನದ ಭಾಗವೆಂದು ನೋಡಬೇಕಾಗಿದೆ. ಇನ್ನೊಂದು ನ್ಯಾಯಾಂಗ ನೇಮಕಾತಿ ಆಯೋಗ ರಚನೆಯಾಗಬೇಕೆಂದು ಆಳುವ ಬಿಜೆಪಿ ವಲಯ ಚರ್ಚೆ ನಡೆಸುತ್ತಿದೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನೇಮಕದಲ್ಲಿ ಕಾರ್ಯಾಂಗಕ್ಕೆ ಹೆಚ್ಚಿನ ಅಧಿಕಾರವಿರುವುದನ್ನು ಖಾತರಿಪಡಿಸುವುದು ಅದರ ಉದ್ದೇಶವಾಗಿದೆ. ಉನ್ನತ ನ್ಯಾಯಾಂಗವು ಸರಕಾರಕ್ಕೆ ಅಧೀನವಾಗಿರುವುದಕ್ಕೆ ಇದು ಅತ್ಯಂತ ಸೂಕ್ತ ಮಾರ್ಗವೆನ್ನುವುದು ಅದರ ಅಭಿಪ್ರಾಯವಾಗಿದೆ. ಸರಕಾರವೇ ಆಯುಕ್ತರನ್ನು ಆಯ್ಕೆ ಮಾಡುವ ಮೂಲಕ ಚುನಾವಣೆ ಆಯೋಗವನ್ನು ಅಧಿಕಾರಶೂನ್ಯವಾಗಿ ಮಾಡಿರುವ ವಿದ್ಯಮಾನದ ಹಿನ್ನೆಲೆಯಲ್ಲಿ ಒಂದು ಎಚ್ಚರಿಕೆಯ ಗಂಟೆ ಆಗಬೇಕಿದೆ.

ನ್ಯಾಯಾಧೀಶರುಗಳ ಆಯ್ಕೆ ಮತ್ತು ನೇಮಕಕ್ಕೆ ಸಂಬಂಧಿಸಿ ಸ್ಪಷ್ಟ ನಿಯಮಾವಳಿಗಳನ್ನು ಹೊಂದಿರುವ ವಿಶಾಲ ಆಧಾರದ, ಪಾರದರ್ಶಕವಾದ ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚಿಸಬೇಕೆಂದು ಎಡಪಂಥೀಯರ ಸಹಿತ ಪ್ರಜಾಸತ್ತಾತ್ಮಕ ಶಕ್ತಿಗಳು ದೀರ್ಘ ಕಾಲದಿಂದ ಪ್ರತಿಪಾದಿಸುತ್ತಾ ಬಂದಿವೆ. ಉನ್ನತ ನ್ಯಾಯಾಂಗ ಮತ್ತು ಕಾರ್ಯಾಂಗದ ಪ್ರತಿನಿಧಿಗಳಿರುವಂಥ ಇಂಥ ಆಯೋಗದಲ್ಲಿ ಪ್ರಖ್ಯಾತ ಕಾನೂನು ವಿದ್ವಾಂಸರು ಮತ್ತು ಸ್ವತಂತ್ರ ಸಂಸ್ಥೆಗಳ ಇತರ ಪ್ರತಿನಿಧಿಗಳು ಕೂಡ ಇರಬೇಕು. ಕೇವಲ ಕಾರ್ಯಾಂಗದ ಮೇಲುಗೈಗೆ ಅವಕಾಶ ನೀಡಬಾರದು.

2014ರಲ್ಲಿ ಮೋದಿ ಸರಕಾರದಡಿ ಅಂಗೀಕಾರವಾದ ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗ ಕಾನೂನು ಸಾಕಷ್ಟು ತಪ್ಪುಗಳಿಂದ ಕೂಡಿತ್ತು ಹಾಗೂ ಕಾರ್ಯಾಂಗದ ನಿಯಂತ್ರಣದಿಂದ ಸೂಕ್ತ ರಕ್ಷಣೆ ಹೊಂದಿಲ್ಲ.

ಈಗ ನ್ಯಾಯಾಂಗದ ಸ್ವಾತಂತ್ರ್ಯವನ್ನೇ ಹರಣ ಮಾಡಲು ಮೋದಿ ಸರಕಾರ ಹೊರಟಿರುವುದರಿಂದ ಪರಿಸ್ಥಿತಿಯೇ ಬದಲಾಗಿದೆ. ಕೊಲಿಜಿಯಂ ವ್ಯವಸ್ಥೆಗೆ ಪರ್ಯಾಯವಾಗಿ ಸರಕಾರದ ಮೇಲುಗೈ ಹೊಂದಿರುವಂಥ ಯಾವುದೇ ನ್ಯಾಯಾಂಗ ನೇಮಕ ಆಯೋಗವನ್ನು ಪ್ರಬಲವಾಗಿ ವಿರೋಧಿಸಬೇಕು. ಈ ನಡುವೆ, ನ್ಯಾಯಾಧೀಶರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಪಾರದರ್ಶಕವಾದ ಉತ್ತರದಾಯಿತ್ವದ ವ್ಯವಸ್ಥೆಯೊಂದಿಗೆ ಹಾಲಿ ಕೊಲಿಜಿಯಂ ವ್ಯವಸ್ಥೆಯನ್ನು ಸುಧಾರಿಸುವುದು ಕೂಡ ಅಗತ್ಯವಾಗಿದೆ.

ಅನು: ವಿಶ್ವ

ಒಯ್ಯುವುದು. ಕಡ್ಡಾಯ ಜಿಪಿಎಸ್ ಟ್ರ್ಯಾಕಿಂಗ್ ಒದಗಿಸುವಿಕೆ, ತುರ್ತು ಪ್ರತಿಕ್ರಿಯೆ ಸಂಖ್ಯೆಗಳು, ಮತ್ತು ಗರಿಷ್ಠ ಸಂಖ್ಯೆಯ ಗಂಟೆಗಳ ಚಾಲಕ ಕಾರ್ಯನಿರ್ವಹಿಸಬೇಕು. ಹೆಚ್ಚುವರಿಯಾಗಿ, ಕೆಲಸ ಮಾಡುವ ಉದ್ಯೋಗಸ್ತ ಮಹಿಳೆಯರು ಬೈಕ್–ಟ್ಯಾಕ್ಸಿಗಳನ್ನು ಬಳಸಲು ಹೆಚ್ಚಿನ ಒಲವನ್ನು ತೋರಿಸಿದ್ದಾರೆ. ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕೆಲವು ನಿಯಮಗಳನ್ನು ಅಳವಡಿಸಿಕೊಳ್ಳಬೇಕು. ಉದಾಹರಣೆಗೆ ಚಾಲಕರ ಸಂಪೂರ್ಣ ಹಿನ್ನೆಲೆ ಪರಿಶೀಲನೆ ನಡೆಸುವುದು, ಹೆಚ್ಚಿನ ಮಹಿಳಾ ಚಾಲಕರನ್ನು ನೇಮಿಸಿಕೊಳ್ಳುವುದು, GPS ಟ್ರ್ಯಾಕಿಂಗ್ ಮತ್ತು SOS ಸೇವೆಗಳು. ಇತ್ಯಾದಿ ಷರತ್ತುಗಳನ್ನು ಸಾರಿಗೆ ಇಲಾಖೆ ವಿಧಿಸಿದೆ. ಆದರೆ, ಈ ಅಗ್ರಿಗೇಟರ್ ಕಂಪನಿಗಳು ಇಂತಹ ಷರತ್ತುಗಳಿಗೆ ಬದ್ಧವಾಗಿರುತ್ತವೇ ಎಂಬ ಪ್ರಶ್ನೆಯೂ ಮೂಡುತ್ತದೆ. ಏಕೆಂದರೆ, ಇವು ಈಗಾಗಲೇ ಟ್ಯಾಕ್ಸಿ ಮತ್ತು ಆಟೋ ಪ್ರಯಾಣ ದರಗಳ ನಿಗದಿಯಲ್ಲಿ ಸಾರಿಗೆ ಇಲಾಖೆಯ ನಿಯಮಗಳನ್ನು ಪಾಲಿಸುತ್ತಿಲ್ಲ ಮತ್ತು ಇದರ ವಿರುದ್ಧ ಸಾರಿಗೆ ಇಲಾಖೆ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲು ಮುಂದಾಗುತ್ತಿಲ್ಲ ಎಂಬುದನ್ನು ನೋಡಿದಾಗ ಈ ಪ್ರಶ್ನೆ ಸಹಜ.

"ಇ–ಬೈಕ್ ಟ್ಯಾಕ್ಸಿಗಳಿಗೆ ಪರವಾನಗಿ ಕೊಡುವ ಸಾರಿಗೆ ಪ್ರಾಧಿಕಾರದ ನಿರ್ಧಾರದಿಂದ ಸಾವಿರಾರು ಕೋಟಿ ರೂ ಬಂಡವಾಳ ಹೂಡಿಕೆ ಮಾಡುವ ಸ್ವದೇಶಿ ಮತ್ತು ವಿದೇಶಿ ಕಂಪನಿಗಳು ಬೈಕ್ ಟ್ಯಾಕ್ಸಿ ಸೇವೆಯಲ್ಲಿ ತೊಡಗಿಕೊಳ್ಳುತ್ತವೆ. ಕಂಪನಿಗಳು ಆಕರ್ಷಕ ಜಾಹಿರಾತುಗಳು ಮತ್ತು ವಿವಿಧ ರೀತಿಯ ಅಮಿಷಗಳ ಮೂಲಕ ಗ್ರಾಹಕರನ್ನು ಮತ್ತು ನಿರುದ್ಯೋಗಿ ಯುವಜನತೆಯನ್ನು ಚಾಲಕ ವೃತ್ತಿಗೆ ಸೆಳೆಯುವ ಮೂಲಕ ಸಾರಿಗೆ ಸೇವೆಯನ್ನು ಏಕಸ್ವಾಮ್ಯ ಮಾಡಿಕೊಳ್ಳುತ್ತವೆ. ಇದು ಆಟೋ ಮತ್ತು ಟ್ಯಾಕ್ಸಿ ಸೇವೆಯಲ್ಲಿ ಸ್ವಂತ ಉದ್ಯೋಗ ಕಂಡುಕೊಂಡಿರುವ ಚಾಲಕರ ದುಡಿಮೆಯನ್ನು ಕಸಿದುಕೊಳ್ಳುತ್ತದೆ ಮತ್ತು ಕ್ರಮೇಣ ಚಾಲಕರ ವೃತ್ತಿಯನ್ನೇ ಇಲ್ಲದಂತೆ ಮಾಡುತ್ತದೆ ಎಂದಿರುವ ಸಿಐಟಿಯು ಸಂಯೋಜಿತ 'ಫೆಡರೇಷನ್ ಆಫ್ ಕರ್ನಾಟಕ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್' ಯಾವುದೇ ಕಾರಣಕ್ಕೂ ಬೈಕ್ ಟ್ಯಾಕ್ಸಿ ಸೇವೆಗೆ ಅನುಮತಿ ಕೊಡಬಾರದು. ಬೈಕ್ ಟ್ಯಾಕ್ಸಿಗೆ ಪರವಾನಗಿ ಕೊಡುವ ನಿರ್ಧಾರವನ್ನು ಸರ್ಕಾರ ಹಾಗೂ ಸಾರಿಗೆ ಪ್ರಾಧಿಕಾರ ಕೂಡಲೇ ಹಿಂಪಡೆಯಬೇಕು'' ಎಂದು ಒತ್ತಾಯಿಸಿದೆ.

ಉದ್ಯಮಿಗಳ ಬೇಲಿಯೊಳಗೆ ಬಂಧಿಯಾದ ಭೂಮಿ







ನಮ್ಮ ಭೂಮಿ ನಮಗೆ ಕೊಡಿ ನಮ್ಮ ಬದುಕ ನಮಗೆ ಬಿಡಿ

ಪಿ.ಆರ್. ವೆಂಕಟೇಶ್

'ಆಗ ಭೂಮ್ತಾಯಿ ಆಧಾರಿತ್ತು. ಮಳೆ ಈ ವರ್ಸಲ್ಲಿಂದ್ರ ಮುಂದುಲ ವರ್ಸ್ರಕ್ಕಾದ್ರು ಬೆಳೆ ಕಂಡಾತು. ಅದ್ರಾಗ ಬದುಕು ಹೆಂಗೋ ಸಾಗಿತ್ತು. ಉಪಾಸ ಬಿದ್ದಿಲ್ಲ'.

'ಇದ್ದಕ್ಕಿದ್ದಂಗ ಆವ್ರು ಬಂದ್ರು. ನಿಮ್ಮ ಜಮೀನು ಫ್ಯಾಕ್ಟ್ರಿಗೆ ಹೋಗ್ಯಾವ ಅಂದ್ರು. ಜೀವ ದಸಕ್ಕಂತಪ್ಪೊ'.

'ಮತ್ತ್ ಅವ್ರು ಹೇಳಿದ್ರು. ಅದು ಕೊಡ್ತೀವಿ, ಇದು ಕೊಡ್ತೀವಿ ಅಂತೇಳಿ ಬಾಯ್ ಮಾತ್ನ್ಯಾಗ ಸೂರ್ಯ ಚಂದ್ರನನ್ನು ತೋರ್ಸೀದ್ರೋ ಯಪ್ಪಾ. ಏನೇನೋ ಹೇಳಿ ನಮ್ಮನ್ನ ಕಗ್ಗಾನ ಕೌಳದಾಗ ದೂಡಿ ಬಿಟ್ರಪ್ಪೊ'.

ಎದೆಯ ಬೆಂಕಿಯನ್ನು ಉಸಿರಲ್ಲಿ ತುಂಬಿ, ಕಣ್ತುಂಬಿದ ಕನಸನ್ನು ನೀರಾಗಿಸಿ ಸುಮಾರು 80 ರ ಹರೆಯದ ಮುಗ್ಧ ವೃದ್ಧೆ ಕುಡಿತಿನಿ ಲಕ್ಷ್ಮಮ್ಮ, 'ಜನಶಕ್ತಿ' ಪತ್ರಿಕೆಯೊಂದಿಗೆ ತನ್ನ ಅಂತರಂಗದ ಬೇಗುದಿಯನ್ನು ಬಿಚ್ಚಿಟ್ಟ ಪರಿಯಿದು. ಇದು ಲಕ್ಷ್ಮಮ್ಮನ ಬೇಗುದಿ ಮಾತ್ರವಲ್ಲ, ಬಳ್ಳಾರಿ ತಾಲ್ಲೂಕಿನ ಕುಡಿತಿನಿ, ವೇಣಿವೀರಾಪುರ, ಕೊಳಗಲ್, ಹರಗಿನಡೋಣಿ ಹಾಗೂ ಸಿದ್ದಮ್ಮನಹಳ್ಳಿ ಗ್ರಾಮಗಳ ಒಟ್ಟು ಸುಮಾರು 3000 ಕುಟುಂಬಗಳ ಕಥೆ ವ್ಯಥೆಯಾಗಿದೆ.

ಕೈಗಾರಿಕಾ ಸ್ಥಾಪನೆಗಾಗಿ ಜಮೀನು ಕಳೆದುಕೊಂಡ ನೂರಾರು ರೈತರು "ನಮ್ಮ ಭೂಮಿ ನಮಗೆ ಕೊಡಿ, ನಮ್ಮ ಬದುಕ ನಮಗೆ ಬಿಡಿ" ಎಂಬ ಘೋಷವಾಕ್ಯದಡಿ 7 ಮತ್ತು 8 ಡಿಸೆಂಬರ್ 2022 ರಂದು ಪಾದಯಾತ್ರೆ ನಡೆಸಿ ಜಿಲ್ಲಾಧಿಕಾರಿ ಬಳಿ ತೋಡಿಕೊಂಡದ್ದು ಇದೇ ವ್ಯಥೆಯ ಕಥೆ.

ಸರಕಾರ ಎಸಗಿದ ದ್ರೋಹ

ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ–ಕೆಐಎಡಿಬಿ ರೈತರಿಗೆ ಎಸಗಿದ ದ್ರೋಹದ ಕಥೆ ಕೇಳಿ.

ಬಳ್ಳಾರಿ ಉತ್ಕೃಷ್ಟ ಗುಣಮಟ್ಟದ ಕಬ್ಬಿಣದ ಅದಿರು ಹೊಂದಿದ ಜಿಲ್ಲೆ. ಹೀಗಾಗಿ ದೇಶ, ವಿದೇಶದ ಸಂಬಂಧವನ್ನು ಹೊಂದಿದೆ. ಈ ಅದಿರು ಬಳಸಿ ತಯಾರಿಸಿದ ವಸ್ತುಗಳಿಂದ ಸಾಕಷ್ಟು ಲಾಭ ಗಳಿಸಲು ದೇಶ ವಿದೇಶಗಳ ಬೃಹತ್ ಕೈಗಾರಿಕಾ ಕಂಪನಿಗಳು ತುದಿಗಾಲಲ್ಲಿ ನಿಂತಿವೆ. ಅವುಗಳನ್ನು ತೃಪ್ತಿ ಪಡಿಸಲು ಸರ್ಕಾರಗಳು ಟೊಂಕ ಕಟ್ಟಿ ನಿಂತಿವೆ.

2017 ರಲ್ಲಿ ಈ ಗ್ರಾಮಗಳ ಒಟ್ಟು 12,500 ಎಕರೆ ಜಮೀನನ್ನು ಬ್ರಾಹ್ಮಣಿ ಸ್ಟೀಲ್ಸ್, ಅರ್ಸೆಲರ್ ಮಿತ್ತಲ್ ಕಂಪನಿಗಳು ತಲಾ 5000 ಎಕರೆ, ಹಾಗೂ ಎನ್.ಎಮ್.ಡಿ.ಸಿ.ಪಿ 2500 ಎಕರೆ ಜಮೀನನ್ನು ರೈತರಿಂದ ಸರಕಾರ ಕೆಐಎಡಿಬಿ ಮೂಲಕ ಸ್ವಾಧೀನ ಪಡಿಸಿಕೊಂಡಿದೆ. ಈ ಸಂದರ್ಭದಲ್ಲಿ ಎದ್ದ ಸಣ್ಣಪುಟ್ಟ ಪ್ರತಿರೋಧದ ಬಾಯಿಗೆ ಸರಕಾರ, ಕೆಐಎಡಿಬಿ, ಆಳುವ ಪಕ್ಷದ ಬಾಲಬಡುಕರ ಗುಂಪು, ಬಣ್ಣ ಬಣ್ಣದ ಬೀಗ ಜಡಿದು ವಂಚಿಸಿದವು.

ಈ ದೆಸೆಯಲ್ಲಿ ಅವರು ಎತ್ತಿದ ವಾದ ಹೀಗಿತ್ತು. "ಇಲ್ಲೀಗಂಟ ಹೊಲ ನಂಬಿ ಏನು ಉದ್ಧಾರ ಆದ್ರೆಪ್ಪ. ಸಾಲದ ಹೊರೆ ಹೊತ್ಕಂಡ್ ನರಳಾಕ ಹತ್ತೀರಿ. ಪ್ಯಾಕ್ಟ್ರೀಗೆ ಜಮೀನು ಕೊಟ್ಟು ಕೈ ತುಂಬಾ ಕೋಟಿಗಟ್ಲೆ ಪರಿಹಾರ ಸಿಗತೈತಿ. ಇದ್ದಬದ್ದ ಸಾಲ ತೀರಿಸ್ಕೊಂಡು ಅರಾಮಾಗಿರಿ. ಅಲ್ದೇ ನಿಮ್ಮ ಮನಿ ಮಕ್ಳಿಗೆ ದುಡಿಯಾಕ ಕೆಲ್ಸನೂ ಸಿಗತೈತಿ"

ಈ ಎಲ್ಲಾ ಭರವಸೆಯ ಬಲೆ ಹಾಸಿ ರೈತರಿಂದ ಜಮೀನು ಪಡೆದು 12 ವರ್ಷಗಳಾದರೂ ಕೈಗಾರಿಕೆ ಸ್ಥಾಪನೆಯಾಗಿಲ್ಲ. ಯುವಜನರಿಗೆ ಉದ್ಯೋಗವೂ ಸಿಗಲಿಲ್ಲ. ಅವರು ಮಾತು ಕೇಳಿದ ರೈತರ ಮನದಲ್ಲಿ 'ಅರಿಷಿಣದ ಅನ್ನಕ್ಕೆ ವರುಷದ ಹರ್ಷ ಕಳಕೊಂಡೆವೆಲ್ಲಾ' ಎಂಬ ಸಂಕಟ ಮನೆ ಮಾಡಿದೆ.

2013 ಭೂಸ್ವಾಧೀನ ಕಾಯ್ದೆ ಹೇಳಿದ್ದೇನು?

1. ಸರಕಾರ ರೈತರ ಜಮೀನು ವಶಪಡಿಸಿಕೊಳ್ಳುವ ಮೊದಲು ಶೇ.80ರಷ್ಟು ಜನಾಭಿಪ್ರಾಯ ಸಂಗ್ರಹಿಸಬೇಕು.
2. ಕೈಗಾರಿಕಾ ಸ್ಥಾಪನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಜ್ಞರ ವರದಿಯನ್ನು ಪರಿಗಣಿಸಬೇಕು.
3. ಬಹು ಬೆಳೆ ಹಾಗೂ ನೀರಾವರಿ ಜಮೀನನ್ನು ವಶಪಡಿಸಿಕೊಳ್ಳುವಂತಿಲ್ಲ.
4. ವಶಪಡಿಸಿಕೊಂಡ ಜಮೀನಿನ ರೈತರಿಗೆ ಮಾರುಕಟ್ಟೆ ಬೆಲೆಗಿಂತ ನಾಲ್ಕು ಪಟ್ಟು ಹೆಚ್ಚಿನ ಪರಿಹಾರ ನೀಡಬೇಕು.
5. ವಶಪಡಿಸಿಕೊಂಡ ಜಮೀನಿನಲ್ಲಿ ಉದ್ದೇಶಿತ ಕೈಗಾರಿಕೆಯನ್ನು ಐದು ವರ್ಷದೊಳಗೆ ಸ್ಥಾಪಿಸಬೇಕು. ಆಗದಿದ್ದಲ್ಲಿ ವಶಪಡಿಸಿಕೊಂಡ ಜಮೀನನ್ನು ರೈತರಿಗೆ ಬೇಷರತ್ತಾಗಿ ಹಿಂತಿರುಗಿಸಬೇಕು.

ಗಾಳಿ ಪಾಲಾದ ಕಾಯ್ದೆ

ಬಳ್ಳಾರಿಯ ಈ ಗ್ರಾಮಗಳಲ್ಲಿ ರೈತರ ಜಮೀನನ್ನು ವಶಪಡಿಸಿಕೊಳ್ಳುವಾಗ ಶೇ.80 ಜನಾಭಿಪ್ರಾಯ ಸಂಗ್ರಹಿಸಲೇ ಇಲ್ಲ. ಆಳುವ ರಾಜಕೀಯ ಪಕ್ಷಗಳ ಹಿಂಬಾಲಕರ ಸಭೆ ನಡೆಸಿ ಅದನ್ನೇ ಜನಾಭಿಪ್ರಾಯವೆಂದು ಬಿಂಬಿಸಲಾಗಿದೆ. ಹೊಲದ ಪಹಣಿಯ ಕಬ್ಜೆ ಅಥವಾ ಸ್ವಾಧೀನ ರೀತಿ ಕಾಲಂನಲ್ಲಿ ಕಂಪನಿ ಹೆಸರು ಬಂದಾಗಲೇ ರೈತರಿಗೆ ತಮ್ಮ ಜಮೀನು ಕೈಗಾರಿಕೆ ಪಾಲಾಗಿವೆ ಎಂದು ತಿಳಿದದ್ದು! ಕೈಗಾರಿಕಾ ಸ್ಥಾಪನೆಯಿಂದಾಗುವ ದುಷ್ಪರಿಣಾಮದ ಬಗ್ಗೆ ತಜ್ಞರ ತಂಡ ಗ್ರಾಮಕ್ಕೆ ಭೇಟಿ ನೀಡಲೂ ಇಲ್ಲ.

ಈಗಾಗಲೇ ಈ ಗ್ರಾಮಗಳ ವ್ಯಾಪ್ತಿಯಲ್ಲಿ ಹಲವಾರು ಕೈಗಾರಿಕೆಗಳು ತಲೆ ಎತ್ತಿದ್ದು, ಅವುಗಳ ಹೊಗೆ ಮನೆಯೊಳಗೆ ನುಗ್ಗಿ, ಪರಿಸರ ಹಾಗೂ ಜನರ ಆರೋಗ್ಯದ ಮೇಲೆ ತೀವ್ರ ದಾಳಿ ನಡೆಸಿದ ಪರಿಣಾಮ ನಾನಾ ರೋಗಗಳು ಉಲ್ಬಣಗೊಂಡಿವೆ. ಕೆಲವರು ಸಾವನ್ನಪ್ಪಿದ್ದಾರೆ. ಕೃಷಿ ಚಟುವಟಿಕೆ ಸಂಪೂರ್ಣ ಬಂದಾಗಿ ಕೃಷಿಯ ಉಪ ಕಸುಬುಗಳು ಕಾಣೆಯಾಗಿವೆ. ಇವುಗಳನ್ನೇ ನಂಬಿ ಬದುಕಿದ್ದ ನೂರಾರು ಕುಟುಂಬಗಳು ಬೀದಿಗೆ ಬಿದ್ದಿವೆ. ಈ ಪರಿಸ್ಥಿತಿಯಲ್ಲಿ ಹೊಸ ಕಾರ್ಖಾನೆಗಳು ತಲೆ ಎತ್ತಿದರೆ ಊಹೆಗೂ ನಿಲುಕದ ದುಸ್ಥಿತಿಯನ್ನು ಜನ ಅನುಭವಿಸುವಂತಾಗುತ್ತದೆ. ಹೀಗಿದ್ದರೂ ಸರಕಾರ ತಜ್ಞರ ವರದಿ ತರಿಸಿಕೊಳ್ಳುವಲ್ಲಿ ಕನಿಷ್ಠ ಕಾಳಜಿ ತೋರಿಲ್ಲ.

ಸರಕಾರ ಕೆಐಎಡಿಬಿ ಮೂಲಕ ವಶಪಡಿಸಿಕೊಂಡಿರುವ ಜಮೀನಿನಲ್ಲಿ ರೈತರು ಕೊಳವೆ ಬಾವಿ ಮೂಲಕ ನೀರಾವರಿ ಮಾಡಿಕೊಂಡ ಜಮೀನು ಸೇರಿದೆ. ಇಂಥಹ ಜಮೀನು ವಶಕ್ಕೆ ಬೇಡ ಎಂಬ ಕಾಯ್ದೆಯ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ವಶಪಡಿಸಿಕೊಂಡ ಜಮೀನಿಗೆ ಕಾಯ್ದೆಯಂತೆ ನೀಡಬೇಕಾದ ನಾಲ್ಕು ಪಟ್ಟು ಪರಿಹಾರ ಎಂಬುದು ಗಾಳಿ ಮಾತಾಗಿದೆ.

ಅಸಂಬದ್ಧ ಪರಿಹಾರ

ಪರಿಹಾರ ನಿಗದಿಯಲ್ಲಿ ಅವೈಜ್ಞಾನಿಕ ನೀತಿ ಅನುಸರಿಸಲಾಗಿದೆ. ಕೃಷಿ ಜಮೀನನ್ನು ಕೈಗಾರಿಕಾ ಜಮೀನಾಗಿ ಪರಿವರ್ತನೆಗೊಂಡಾಗ ಭೂಮಿಯ ಬೆಲೆ ಕೈಗಾರಿಕಾ ಜಮೀನಿನ ಬೆಲೆಯಾಗುತ್ತದೆ. ಆದರೆ ಸರಕಾರ ಕೃಷಿ ಭೂಮಿಗೆ ಅಲ್ಪ ಪರಿಹಾರ ನಿಗದಿ ಮಾಡಿ ರೈತರಿಗೆ ದ್ರೋಹವೆಸಗಿದೆ. ರೈತರಿಗೆ ಕೊಡಮಾಡಿದ ಪರಿಹಾರ ಅತ್ಯಂತ ಕಡಿಮೆ. ಜನಾರ್ಧನರೆಡ್ಡಿಯವರ ಬ್ರಾಹ್ಮಣಿ ಸ್ಟೀಲ್ಸ್ ಎಕರೆಗೆ 5 ಲಕ್ಷ ರೂ.ಗಳು, ಅರ್ಸೆಲರ್ ಮಿತ್ತಲ್ ಎಕರೆಗೆ 8 ಲಕ್ಷ ರೂ.ಗಳು, ಕೇಂದ್ರ ಸರಕಾರದ ಸ್ವಾಮ್ಯದ ಸಾರ್ವಜನಿಕ ವಲಯದ ಎನ್.ಎಮ್.ಡಿ.ಸಿ. ಎಕರೆಗೆ 23 ಲಕ್ಷ ರೂ.ಗಳು. . . ಹೀಗೆ 'ಅಸಂಬದ್ಧ ಪರಿಹಾರ' ನೀಡಲಾಗಿದೆ!

ವಶಪಡಿಸಿಕೊಂಡ ಜಮೀನನ್ನು ಐದು ವರ್ಷದೊಳಗೆ ಉದ್ದೇಶಿತ ಕೆಲಸಕ್ಕೆ ಬಳಸಬೇಕೆಂಬ ಕಾನೂನಿದ್ದರೂ 12 ವರ್ಷ ಕಳೆದರೂ ಕಾರ್ಖಾನೆಗಳು ಸ್ಥಾಪನೆಯಾಗಿಲ್ಲ. ಭೂಮಿ ಕಳೆದುಕೊಂಡ ಭೂಸಂತ್ರಸ್ತ ಕುಟುಂಬದ ಸದಸ್ಯರಿಗೆ ಉದ್ಯೋಗ ದೊರೆತಿಲ್ಲ.

ವಿಕೃತ ತಿದ್ದುಪಡಿ 2019

2013 ರ ಭೂಸ್ವಾಧೀನ ಕಾಯ್ದೆಗೆ ಅಭಿವೃದ್ಧಿಯ ಹೆಸರಲ್ಲಿ ಆಂಧ್ರ, ತಮಿಳುನಾಡು, ಸೇರಿದಂತೆ ಅನೇಕ ರಾಜ್ಯ ಸರಕಾರಗಳು ತಮ್ಮ ಅನುಕೂಲಕ್ಕೆ ತಕ್ಕಂತೆ 2019ರಲ್ಲಿ ತಿದ್ದುಪಡಿಯನ್ನು ತಂದವು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರವೂ ವಿಧಾನಸಭೆಯಲ್ಲಿ ಸಮರ್ಪಕವಾಗಿ ಚರ್ಚಿಸದೆ ತಿದ್ದುಪಡಿಯನ್ನು ಅಂಗೀಕರಿಸಿತು. ಈ ತಿದ್ದುಪಡಿ ಸಂಪೂರ್ಣವಾಗಿ 2017 ಭೂಸ್ವಾಧೀನ ಕಾಯ್ದೆಗೆ ವಿರುದ್ಧವಾಗಿದೆ. ಬಹು ಮುಖ್ಯವಾಗಿ ಈ ತಿದ್ದುಪಡಿ ಕೈಗಾರಿಕಾ ಮಾಲಿಕರ

ಪುಟ 10 ಕ್ಕೆ

ತನ್ನನ್ನು ಪೊರೆದು ಪೋಷಿಸುವ ಭೂಮಿಯನ್ನು ರೈತರು ಭೂಮಿ ತಾಯಿ ಎನ್ನುತ್ತಾರೆ. ಕೃಷಿ ನಮ್ಮ ಸಂಸ್ಕೃತಿ. ಚಳುವಳಿಯ ತಾಳ್ಮೆಯ ಮೌನವನ್ನು ಪರೀಕ್ಷಿಸಬೇಡಿ. ಕೈಗಾರಿಕೆ ಅಭಿವೃದ್ಧಿ ಹೆಸರಿನಲ್ಲಿ ಬದುಕಿನ ಬುನಾದಿಯಾದ ಜಮೀನನ್ನು ವಂಚಿಸುವುದು ಅಭಿವೃದ್ಧಿಯೇ? ಬೃಹತ್ ಉದ್ದಿಮೆಗಳ ಲಾಭಕ್ಕಾಗಿ ಲಕ್ಷಾಂತರ ರೈತರನ್ನು ಭೂಮಿಯಿಂದ ಕಿತ್ತೆಸೆಯುವುದು ಅಭಿವೃದ್ಧಿ ಎಂದಾದರೆ, ಇಂಥ ಅಭಿವೃದ್ಧಿಯನ್ನು ರೈತರು ಒಪ್ಪುವುದಿಲ್ಲ. ಇಂಥ ದಮನ ನೀತಿಯನ್ನು ಬಲವಾಗಿ ಖಂಡಿಸುತ್ತೇವೆ. ಇದು ಆರಂಭ ಮಾತ್ರ. ಭರವಸೆಗಳನ್ನು ನಂಬಿ ಕೂತಾಗಿದೆ. ಸರಕಾರ ಹಾಗೂ ಜಿಲ್ಲಾಡಳಿತ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ರೈತರು ಸಮರಶೀಲ ಹೋರಾಟವನ್ನು ಎದುರಿಸಬೇಕಾಗುತ್ತದೆ.

– ಡಾ.ಎಸ್.ವೈ.ಗುರುಶಾಂತ್
ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರು.

ಈ ಗ್ರಾಮಗಳಲ್ಲಿ ರೈತರ ಜಮೀನನ್ನು ವಶಪಡಿಸಿಕೊಳ್ಳುವಾಗ ಶೇ.80 ಜನಾಭಿಪ್ರಾಯ ಸಂಗ್ರಹಿಸಲೇ ಇಲ್ಲ. ಆಳುವ ರಾಜಕೀಯ ಪಕ್ಷಗಳ ಹಿಂಬಾಲಕರ ಸಭೆ ನಡೆಸಿ ಅದನ್ನೇ ಜನಾಭಿಪ್ರಾಯವೆಂದು ಬಿಂಬಿಸಲಾಯಿತು. ಹೊಲದ ಪಹಣಿಯ ಕಬ್ಜೆ ಅಥವಾ ಸ್ವಾಧೀನ ರೀತಿ ಕಾಲಂನಲ್ಲಿ ಕಂಪನಿ ಹೆಸರು ಬಂದಾಗಲೇ ರೈತರಿಗೆ ತಮ್ಮ ಜಮೀನು ಕೈಗಾರಿಕೆ ಪಾಲಾಗಿವೆ ಎಂದು ತಿಳಿದದ್ದು!

ಮಳೆ ಬಂತೆಂದರೆ ಈಗಲೂ ರೈತರ ಕಣ್ಣಲ್ಲಿ ಬೆಳೆ ತುಂಬಿದ ಹೊಲ ಕನಸುತ್ತದೆ. ಕೈಗಾರಿಕಾ ಸ್ಥಾಪನೆಯಿಲ್ಲದೆ ಬೀಳು ಬಿದ್ದ ಹೊಲವನ್ನು ಆಸೆಗಣ್ಣಿಂದ ನೋಡುತ್ತಾರೆ. ಕಾರ್ಖಾನೆ ಮಾಲೀಕರು ವಶಪಡಿಸಿಕೊಂಡ ಜಮೀನಿನ ಸುತ್ತ ಯಾರೂ ಹೆಜ್ಜೆ ಇಡದಂತೆ ಕಬ್ಬಿಣದ ಮುಳ್ಳು ಬೇಲಿಯ ದಿಗ್ಬಂಧನ ರಚಿಸಿದ್ದಾರೆ.

ಜಮೀನು ನುಂಗಿ 12 ವರ್ಷಗಳಾದರೂ ಕೈಗಾರಿಕೋದ್ಯಮಿಗಳು ಕಾರ್ಖಾನೆ ಸ್ಥಾಪಿಸದ ಕಾರಣ ಇತ್ತ ಜಮೀನು ಇಲ್ಲದೆ ಅತ್ತ ಕೆಲಸವಿಲ್ಲದೆ ಅತಂತ್ರ ಸ್ಥಿತಿ ನಿರ್ಮಾಣಗೊಂಡಿತು. ಆರ್ಥಿಕ ದುಸ್ಥಿತಿ ರೈತರ ಕುಟುಂಬವನ್ನು ಆಳಲು ಪ್ರಾರಂಭಿಸಿತು. ಹೀಗಾಗಿ ಕುಟುಂಬದ ಸದಸ್ಯರ ಸಂಬಂಧಗಳು ಬಿರುಕುಗೊಂಡವು.

ಬಹುಮುಖಿ ಹೋರಾಟದ ಅಗತ್ಯತೆ

ಉದ್ಯಮಗಳ ಸ್ಥಾಪನೆಗೆಂದು ಸ್ವಾಧೀನಪಡಿಸಿಕೊಂಡಾಗ ನೀಡಿದ ವಚನ ಪಾಲಿಸಲಾಗಿಲ್ಲ. ಭೂಮಿ ಕಳೆದು ಕೊಂಡ ರೈತರಿಗೆ ನೀಡಿದ ಪರಿಹಾರವೂ ಅತ್ಯಂತ ಅಸಮಾನತೆಯಿಂದ ಕೂಡಿದೆ. ಅದು ಉದ್ಯಮಿಗಳ ಸುಲಿಗೆಯನ್ನು ಬಲಗೊಳಿಸಿದೆ. ಹಿಂದೆ ಇದ್ದ ಕಾನೂನುಗಳಿಗೆ ತಂದ ಈಗಿನ ತಿದ್ದುಪಡಿಗಳು ಕನಿಷ್ಟ ಇದ್ದ ರಕ್ಷಣಾ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. ಸರ್ಕಾರದ ನೀತಿಗಳನ್ನು ಬದಲಾಯಿಸಲು, ಅದು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ನಿರಂತರ ಸತ್ಯಾಗ್ರಹದ ಹೋರಾಟ ನಡೆದಿರುವಾಗಲೇ ಕಾನೂನಾತ್ಮಕ ಹೋರಾಟವೂ ಮುಖ್ಯ. ಸರ್ಕಾರ ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು.

–ಯು.ಬಸವರಾಜ್
ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರು





ಕೇರಳದ ತ್ರಿಶೂರಿನಲ್ಲಿ ಸ್ಫೂತಿದಾಯಕವಾಗಿ ನಡೆದ ಎಐಕೆಎಸ್ 35ನೇ ರಾಷ್ಟ್ರ ಸಮ್ಮೇಳನ

ಭಾರತದ ರೈತಾಪಿ ಕೃಷಿಯನ್ನು ಉಳಿಸಲು ಆಳುವ ವರ್ಗಗಳ ನೀತಿಗಳನ್ನು ಹಿಮ್ಮೆಟ್ಟಿಸಲು



ರೈತ ಚಳುವಳಿಯನ್ನು ಬಲಗೊಳಿಸಲು ನಿರ್ಧಾರ

ಎಚ್.ಆರ್. ನವೀನ್ ಕುಮಾರ್

ಭಾರತದಲ್ಲಿ 1 ಕೋಟಿ 37 ಲಕ್ಷ ರೈತರ ಸದಸ್ಯತ್ವವನ್ನು ಹೊಂದಿರುವ ದೇಶದ ಅತಿ ದೊಡ್ಡ ರೈತ ಸಂಘಟನೆ 'ಅಖಿಲ ಭಾರತ ಕಿಸಾನ್ ಸಭಾ'–ಎಐಕೆಎಸ್ ನ 35 ನೇ ರಾಷ್ಟ್ರ ಸಮ್ಮೇಳನವು 2022 ಡಿಸೆಂಬರ್ 13 ರಿಂದ 16 ವರೆಗೆ ಕೇರಳದ ಸಾಂಸ್ಕೃತಿಕ ರಾಜಧಾನಿ ತ್ರಿಶೂರಿನಲ್ಲಿ ಕಾಮ್ರೇಡ್ ಕೆ.ವರದರಾಜನ್ ರವರ ನಗರದಲ್ಲಿ ಯಶಸ್ವಿಯಾಗಿ ನಡೆಯಿತು. ದೆಹಲಿಯ ಗಡಿಗಳಲ್ಲಿ ನಡೆದ ಐತಿಹಾಸಿಕ ಧೀರೋದ್ಧಾತ ರೈತ ಚಳುವಳಿಯ ಯಶಸ್ವಿಯ ನಂತರ ಈ ರೈತ ಸಮ್ಮೇಳನ ಸೇರುತ್ತಿರುವುದು ಮಹತ್ತರವಾಗಿದೆ. ಮಾತ್ರವಲ್ಲ, ಈ ಚಳುವಳಿಯನ್ನು ಯಶಸ್ವಿಗೊಳಿಸಲು ಶ್ರಮಿಸಿದ ಸಂಯುಕ್ತ ಕಿಸಾನ್ ಮೋರ್ಚಾದ ಭಾಗವಾಗಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದ ಎಐಕೆಎಸ್ ತನ್ನ ಅನುಭವದ ಬುತ್ತಿಯನ್ನು ಹೊತ್ತು ತಂದಿದೆ.

ಉದ್ಘಾಟನೆ

ಎಐಕೆಎಸ್‌ನ ಅಖಿಲ ಭಾರತ ಅಧ್ಯಕ್ಷರಾದ ಡಾ. ಅಶೋಕ್ ದವಳೆಯವರು ಕಿಸಾನ್ ಸಭಾದ ಕೆಂಬಾವುಟವನ್ನು ಹಾರಿಸುವ ಮೂಲಕ ಸಮ್ಮೇಳನಕ್ಕೆ ಅಧಿಕೃತ ಚಾಲನೆ ನೀಡಿದರು. ನಂತರ ಈ ಅವಧಿಯಲ್ಲಿ ಸಮಾಜಕ್ಕಾಗಿ ದುಡಿದು ಅಗಲಿದ ಹುತಾತ್ಮರಿಗೆ ಮತ್ತು ಗಣ್ಯರಿಗೆ ನಮಿಸಲಾಯಿತು. ಸಮ್ಮೇಳನದ ಉಧ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷೀಯ ಮಾತುಗಳನ್ನಾಡಿದ ಡಾ. ಅಶೋಕ್ ದವಳೆಯವರು 'ಈ ನಡುವೆ ಕೋವಿಡ್‌ನಿಂದಾಗಿ ಸುಮಾರು 64 ಕೋಟಿಯಷ್ಟು ಜನ ತೊಂದರೆಗೊಳಗಾಗಿದ್ದಾರೆ, ಸುಮಾರು 66 ಲಕ್ಷ ಜನ ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಜಾಗತಿಕವಾಗಿ ಕೋವಿಡ್‌ಗೆ ಲಸಿಕೆಯನ್ನು ವಿತರಿಸುವಲ್ಲಿ ವಿಪರೀತ ತಾರತಮ್ಯವನ್ನು ಮಾಡಲಾಗಿದೆ. ಈ ಸಂದರ್ಭದಲ್ಲಿ ಕೋವಿಡನ್ನು ನಿಯಂತ್ರಿಸುವಲ್ಲಿ ಮತ್ತು ಸಂಕಷ್ಟದಲ್ಲಿರುವ ಜನತೆಯನ್ನು ರಕ್ಷಿಸುವಲ್ಲಿ ಸಮಾಜವಾದಿ ರಾಷ್ಟ್ರಗಳು ಮತ್ತು ಬಂಡವಾಳಶಾಹಿ ರಾಷ್ಟ್ರಗಳ ನಡುವಿನ ವ್ಯತ್ಯಾಸ ಜಗಜ್ಜಾಹಿರಾಗಿದ್ದು, ಮತ್ತೊಮ್ಮೆ ಸಮಾಜವಾಧಿ ರಾಷ್ಟ್ರಗಳು ಜನಪರವಾಗಿಯೂ ಬಂಡವಾಳಶಾಹಿ ರಾಷ್ಟ್ರಗಳು ಜನವಿರೋಧಿಯಾಗಿಯೂ ಕೆಲಸ ಮಾಡಿರುವುದು ಸ್ಪಷ್ಟವಾಗಿ ಗೋಚರಿಸಿದೆ'.

'ಜಾಗತಿಕ ಹವಾಮಾನ ಬದಲಾವಣೆಗಳಿಂದಾಗಿ ವಾತಾವರಣದಲ್ಲಿ ವಿಪರೀತ ಬದಲಾವಣೆಗಳು ಸಂಭವಿಸಿ ಕೃಷಿ ಕ್ಷೇತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಒಂದೆಡೆ ಜನರು ಸಂಕಷ್ಟದಲ್ಲಿರುವಾಗ ಭಾರತದಲ್ಲಿ ಅದಾನಿಯಂತಹ ಉದ್ಯಮಿಪತಿಗಳು ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿ ಮೂರನೇ ಸ್ಥಾನವನ್ನು ಪಡೆದಿದ್ದಾರೆ. ಈ ವೈರುದ್ಯವನ್ನು ನಾವುಗಳು ಅರ್ಥಮಾಡಿಕೊಳ್ಳಲು ಸಾಧ್ಯವಾಗಬೇಕು. ಇದಕ್ಕೆ ಮುಖ್ಯವಾಗಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಉದಾರವಾದಿ ಆರ್ಥಿಕ ನೀತಿಗಳೇ ಕಾರಣ' ಎಂದರು.



ಕರಡು ವರದಿ ಮಂಡನೆ– ಬೆಳವಣಿಗೆಗಳ ವಿಶ್ಲೇಷಣೆ



ಹಿಸಾರ್‌ನಲ್ಲಿ ನಡೆದ 34 ನೇ ಅಖಿಲ ಭಾರತ ಸಮ್ಮೇಳನದ ನಂತರ ಕಳೆದ 5 ವರ್ಷಗಳ ಅವಧಿಯಲ್ಲಿನ ದೇಶದ ಕೃಷಿ ಬಿಕ್ಕಟ್ಟು, ರೈತರ ಸಮಸ್ಯೆಗಳು, ಇದಕ್ಕೆ ಕಾರಣವಾಗಿರುವ ಆಳುವ ಸರ್ಕಾರಗಳ ನೀತಿಗಳ ಕುರಿತು ವಿವರವಾಗಿ ಚರ್ಚಿಸಲು ಅನುಕೂಲವಾಗುವಂತೆ ಲಿಖಿತ ಕರಡು ವರದಿಯನ್ನು ಸಮ್ಮೇಳನದ ಮುಂದೆ ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಹನನ್ ಮುಲ್ಲಾ ಮಂಡಿಸಿದರು. ಈ ವರದಿಯ ಮೇಲೆ 29 ರಾಜ್ಯಗಳನ್ನು ಪ್ರತಿನಿಧಿಸಿ 62 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಭಾರತದ ರೈತಾಪಿ ಕೃಷಿಯನ್ನು ಉಳಿಸಲು ಮೋದಿ ಸರ್ಕಾರದ ಕಾರ್ಪೊರೇಟ್ ಪರ ನೀತಿಗಳನ್ನು ಹಿಮ್ಮೆಟ್ಟಿಸುವುದೇ ನಮ್ಮ ಮುಂದಿರುವ ಅತಿ ದೊಡ್ಡ ಸವಾಲು ಎಂದು ಅಖಿಲ ಭಾರತ ಕಿಸಾನ್ ಸಭಾದ 35 ನೇ ಸಮ್ಮೇಳನ ಅಭಿಪ್ರಾಯ ಪಟ್ಟಿತು.

ಸಮ್ಮೇಳನದ ಮುಂದೆ ಮಂಡಿಸಲಾಗಿದ್ದ ಕರಡು ವರದಿ ಮತ್ತು ಪ್ರತಿನಿಧಿಗಳ ಚರ್ಚೆಯಲ್ಲಿ ಬಂದ ಪ್ರಮುಖ ಅಂಶಗಳೆಂದರೆ. ಕಳೆದ ಸಮ್ಮೇಳನದ ನಂತರದ 5 ವರ್ಷಗಳ ಈ ಅವಧಿಯಲ್ಲಿರುವ ನರೇಂದ್ರ ಮೋದಿಯವರ ಸರ್ಕಾರ ಅತ್ಯಂತ ಕೆಟ್ಟ ಸರ್ಕಾರವಾಗಿದೆ. ಸ್ವಾತಂತ್ರ್ಯದ ನಂತರ ಸಂಸತ್ತಿನ ಮೇಲೆ, ಸಂವಿಧಾನದ ಮೇಲೆ, ಶಿಕ್ಷಣ ಕ್ಷೇತ್ರದ ಮೇಲೆ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವದ ಮೇಲಿನ ದಾಳಿಗಳು ಹೆಚ್ಚಾಗಿವೆ. ಕಾರ್ಪೊರೇಟ್ ಮತ್ತು ಕೋಮುವಾದಿ ಸಖ್ಯತೆಯ ಸರ್ಕಾರವನ್ನು ಆರ್‌ಎಸ್‌ಎಸ್ ನಿಯಂತ್ರಿಸುತ್ತಿದೆ.

ದೇಶದ ಆರ್ಥಿಕತೆ ಅತ್ಯಂತ ಕೆಟ್ಟ ಪರಿಸ್ಥಿತಿಗೆ ತಲುಪಿದ್ದು ಕಳೆದ 45 ವರ್ಷಗಳಲ್ಲಿ ಇಲ್ಲದಷ್ಟು ನಿರುದ್ಯೋಗ ಈ ಅವಧಿಯಲ್ಲಿ ಹೆಚ್ಚಳವಾಗಿದೆ. ಒಂದೆಡೆ ಬೆಲೆ ಏರಿಕೆ ಮತ್ತೊಂದೆಡೆ ಆಧಾಯದಲ್ಲಿ ಕುಸಿತ, ಬಡತನ ಹೆಚ್ಚಳ, ಭಾರತದ ಹಸಿವಿನ ಸೂಚ್ಯಾಂಕದಲ್ಲಿ ಏರಿಕೆ ಕಂಡುಬಂದಿದೆ. ದೇಶದ ಸಾರ್ವಜನಿಕ ಸಂಪತ್ತನ್ನು ಕಾರ್ಪೊರೇಟ್ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದ ಎಲ್ಲಾ ನೀತಿಗಳು ಜನಸಾಮಾನ್ಯರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿ, ಅದಾನಿ ಮತ್ತು ಅಂಭಾನಿ ಕಂಪನಿಗಳಿಗೆ ಲೂಟಿ ಹೊಡೆಯಲು ಅವಕಾಶ ಕಲ್ಪಿಸಿ ಕೊಡುವುದರ ಜೊತೆಗೆ, ದೇಶದ ಸಂಪತ್ತನ್ನ ದಾರೆಯೆರೆಯಲಾಗುತ್ತಿದೆ.

ಈ ಅವಧಿಯಲ್ಲಿ ನವಉದಾರೀಕರಣ ನೀತಿಗಳ ಜಾರಿ ಅತ್ಯಂತ ರಭಸದಿಂದ ಸಾಗಿದ್ದು ಇದರ ಪರಿಣಾಮವನ್ನು ಕೃಷಿ ಕ್ಷೇತ್ರ ನೇರವಾಗಿ ಅನುಭವಿಸುತ್ತಿದೆ. ಕೃಷಿಯು ಲಾಭದಾಯಕ ಕ್ಷೇತ್ರವಾಗಿ ಉಳಿದಿಲ್ಲ, ಸರ್ಕಾರ ಕೃಷಿ ಕ್ಷೇತ್ರದ ಮೇಲಿನ ಸಬ್ಸಿಡಿಗಳನ್ನು ಕಡಿತಗೊಳಿಸುವ ಮೂಲಕ ತನ್ನ ವೆಚ್ಚವನ್ನ ಕಡಿಮೆ ಮಾಡಿಕೊಂಡಿದೆ. ಇದರಿಂದಾಗಿ ಬಿತ್ತನೆ ಬೀಜ, ಪುಟ 11 ಕ್ಕೆ



ಸ್ವಾತಂತ್ರ್ಯ ಹೋರಾಟಗಾರ ಮತ್ತು ಆದಿವಾಸಿ ರೈತ ಹುತಾತ್ಮ ಬಿರ್ಸಾ ಮುಂಡಾ ಅವರ ಜನ್ಮದಿನವಾದ ನವೆಂಬರ್ 15, 2022 ರಂದು ರಾಷ್ಟ್ರವ್ಯಾಪಿ ಎಐಕೆಎಸ್ ಧ್ವಜ ದಿನಾಚರಣೆಯ ಕರೆಯೊಂದಿಗೆ ಅಖಿಲ ಭಾರತ ಮಟ್ಟದಲ್ಲಿ ತ್ರಿಶೂರ್ ಸಮ್ಮೇಳನದ ಅಭಿಯಾನವು ಪ್ರಾರಂಭವಾಯಿತು. ಅದರಂತೆ ದೇಶಾದ್ಯಂತ ಲಕ್ಷಾಂತರ ಧ್ವಜಗಳನ್ನು ಹಾರಿಸಲಾಯಿತು.

ಕೇರಳದ ತ್ರಿಶೂರ್ ಜಿಲ್ಲೆಯಲ್ಲಿಯೇ ಒಂದೂವರೆ ಲಕ್ಷಕ್ಕೂ ಅಧಿಕ ಮನೆಗಳಲ್ಲಿ ಎಐಕೆಎಸ್ ಧ್ವಜ ಹಾರಿಸಲಾಯಿತು. ಇದಲ್ಲದೇ ತ್ರಿಶೂರ್ ಜಿಲ್ಲೆಯ 93,220 ಕೇಂದ್ರಗಳಲ್ಲಿ ಧ್ವಜಾರೋಹಣ ಮಾಡಲಾಗಿದ್ದು, ಒಟ್ಟು 3,28,988 ಮಂದಿ ಭಾಗವಹಿಸಿದ್ದರು. ತ್ರಿಶೂರ್ ಸೇರಿದಂತೆ ಕೇರಳದ ಎಲ್ಲಾ 14 ಜಿಲ್ಲೆಗಳಲ್ಲಿ 1,04,245 ಕೇಂದ್ರಗಳಲ್ಲಿ ಎಐಕೆಎಸ್ ಧ್ವಜಾರೋಹಣ ಮಾಡಲಾಗಿದ್ದು, ಒಟ್ಟು 4,13,579 ಜನರು ಭಾಗವಹಿಸಿದ್ದರು. ದೇಶದಾದ್ಯಂತ, ಬಹುತೇಕ ಎಲ್ಲಾ ರಾಜ್ಯಗಳ ಸಾವಿರಾರು ಹಳ್ಳಿಗಳಲ್ಲಿ ಧ್ವಜವನ್ನು ಹಾರಿಸಲಾಗಿದೆ.

ಕೈಗಾರಿಕಾ ಅಭಿವೃದ್ಧಿ ಹೆಸರಲ್ಲಿ ರೈತರಿಂದ ಒತ್ತಾಯ ಪೂರ್ವಕವಾಗಿ ಪಡೆದ ಸಹಸ್ರಾರು ಎಕರೆ ಜಮೀನನ್ನು ಹೆಚ್ಚಿನ ದರಕ್ಕೆ ಪುನರ್ ಮಾರಾಟ ಮಾಡಿ, ರೈತರನ್ನು ವಂಚಿಸಿದವರ ಮೇಲೆ ತಕ್ಷಣ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಹೆಚ್ಚಿನ ಪರಿಹಾರ ನೀಡಬೇಕು. ಭೂಮಿ ಹಿಂತಿರುಗಿಸಬೇಕು.

–ಜೆ.ಸತ್ಯಬಾಬು
ಸಿ.ಐ.ಟಿ.ಯು ಜಿಲ್ಲಾ ಅಧ್ಯಕ್ಷರು

ತಮ್ಮ ಹಕ್ಕಿಗಾಗಿ ಹೋರಾಟನಿರತ ರೈತರ ಹಾಗೂ ಹೋರಾಟಗಾರರ ಮೇಲೆ ಗೂಂಡಾಕಾಯ್ದೆ ಅಡಿ ಗಡಿಪಾರು ಮಾಡಲು ಹವಣಿಸಿದ ಜಿಲ್ಲಾಡಳಿತ ಕ್ರಮ ಜನವಿರೋಧಿಯಾಗಿದೆ. ಇಂಥ ನೀಚ ಕ್ರಮಗಳಿಂದ ರೈತರ ಹೋರಾಟ ಬಗ್ಗು ಬಡಿಯಬಹುದೆಂಬುದು ನಿಮ್ಮ ಭ್ರಮೆ. ಪುನ: ಹೋರಾಟ ಸಿದ್ಧಗೊಂಡಿದೆ. ನೋವುಂಡ ಜನರ ಹೋರಾಟ ತಡೆಯುವ ಶಕ್ತಿ ಯಾರಿಂದಲೂ, ಯಾವುದರಿಂದಲೂ ಸಾಧ್ಯವಿಲ್ಲ.

–ವಿ.ಎಸ್.ಶಿವಶಂಕರ್, ಅಧ್ಯಕ್ಷರು,
ಕರ್ನಾಟಕ ಪ್ರಾಂತ ರೈತ ಸಂಘ

ರೈತ ಕುಟುಂಬಗಳಿಗಾದ ನಷ್ಟವನ್ನು ಸರಕಾರ ತುಂಬಿಕೊಡಬೇಕು. ಹಾಗು ಜಮೀನನ್ನು ರೈತರಿಗೆ ಹಿಂತಿರುಗಿಸಬೇಕು. ಈ ಭಾಗದಲ್ಲಿನ ದೇವದಾಸಿ ಮಹಿಳೆಯರಿಗೆಂದು ಮಂಜೂರಾಗಿದ್ದ ಭೂಮಿಯನ್ನೂ ಸಹ ಕೈಗಾರಿಕೆಗಳ ಅಭಿವೃದ್ಧಿಗೆಂದು ಸರಕಾರ ಸ್ವಾಧೀನ ಪಡಿಸಿಕೊಂಡು ಉದ್ಯಮಿಗಳಿಗೆ ನೀಡಿದೆ. ಇದು ಪರಮ ಅನ್ಯಾಯ. ಅದನ್ನು ಪರಿಹಾರದ ಸಮೇತ ಹಿಂತಿರುಗಿಸಬೇಕು.

–ಜೆ.ಚಂದ್ರಕುಮಾರಿ
ಜನವಾದಿ ಮಹಿಳಾ ಸಂಘದ ಜಿಲ್ಲಾ ಅಧ್ಯಕ್ಷರು.

ಉದ್ಯಮಿಗಳ ಬೇಲಿಯೊಳಗೆ ಬಂಧಿಯಾದ ಭೂಮಿ... ಪುಟ 8 ರಿಂದ

ಪರವಾಗಿದೆ. ಇದರಲ್ಲಿ ಅಭಿವೃದ್ಧಿಯ ಹೆಸರಲ್ಲಿ ಜಮೀನು ವಶಪಡಿಸಿಕೊಳ್ಳಲು ಇದ್ದ ಅಡ್ಡಿ ಆತಂಕಗಳನ್ನು ತೊಡೆದು ಹಾಕಿದೆ. ಅಲ್ಲದೆ ಸರಕಾರ ನಿಗದಿಪಡಿಸಿದ ಪರಿಹಾರಕ್ಕಿಂತ ಹೆಚ್ಚಿನ ಪರಿಹಾರ ಕೇಳುವ ರೈತರ ಹಕ್ಕನ್ನು ದಮನ ಮಾಡಿದೆ. ವಶಪಡಿಸಿಕೊಂಡ ಜಮೀನನ್ನು ಉದ್ಯಮಿಗಳು ಯಾವ ಉದ್ದೇಶಕ್ಕಾದರೂ ಬಳಸಲು ಪರವಾನಿಗೆ ನೀಡಿದೆ. ಈ ತಿದ್ದುಪಡಿ ರೈತ ವಿರೋಧಿಯಾಗಿದ್ದು ಬೇಸತ್ತ ರೈತರು ಹಾಗೂ ರೈತ ಸಂಘಟನೆಗಳು ಹೋರಾಟದ ಮೂಲಕ ನ್ಯಾಯಾಂಗದ ಮೊರೆ ಹೋಗಿದ್ದಾರೆ.

ಆದರೆ ಈ ತಿದ್ದುಪಡಿಯನ್ನೇ ಮುಂದಿಟ್ಟು ಬ್ರಾಹ್ಮಣಿ ಸ್ಟೀಲ್ಸ್ ಮಾಲೀಕರು ರೈತರಿಂದ ವಶಪಡಿಸಿಕೊಂಡ ಜಮೀನನ್ನು ಹೆಚ್ಚಿನ ಬೆಲೆಗೆ ಹೈದ್ರಾಬಾದ್ ಕಂಪನಿಯೊಂದಕ್ಕೆ ಮಾರಾಟ ಮಾಡಿ ರೈತರನ್ನು ವಂಚಿಸಿದೆ ಎಂಬ ಮಾತುಗಳು ಕೇಳಿಬಂದಿವೆ.

ಆಕ್ರಮಣಕಾರಿ ಕೈಗಾರಿಕಾ ಅಭಿವೃದ್ಧಿ

ದೇಶಕ್ಕೆ ಸ್ವಾತಂತ್ರ್ಯ ಬಂದ ಪ್ರಥಮ ಸ್ವಾತಂತ್ರ್ಯೋತ್ಸವದಲ್ಲಿ ಅಂದಿನ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರು ದೇಶದ ಮುಂದಿದ್ದ ಬಡತನ ಹಾಗೂ ನಿರುದ್ಯೋಗ ಸಮಸ್ಯೆಗಳು ಒಡ್ಡಿದ ಸವಾಲು ಕುರಿತು, "ಆದಷ್ಟು ತ್ವರಿತವಾಗಿ ಈ ಸವಾಲುಗಳನ್ನು ಎದುರಿಸಬೇಕಿದೆ. ಕಾರಣ ದೇಶದ ಮೂಲ ಆರ್ಥಿಕತೆಯನ್ನು ಬೆಳೆಸುವ ಸಲುವಾಗಿ ಕೈಗಾರಿಕಾ ಅಭಿವೃದ್ಧಿ ಸಾಧಿಸಲು ಪಣ ತೊಟ್ಟಿದ್ದೇವೆ" ಎಂದಿದ್ದರು. ಇದರಂತೆ ನಮ್ಮ ರಾಷ್ಟ್ರಕವಿ ಕುವೆಂಪುರವರು 'ಸರಸ್ವತಿ ಕೈಯಲ್ಲಿ ನೇಗಿಲ ಕೊಡುವ' ಕನಸು ಕಂಡರು.

ಈ ಎರಡೂ ಹೇಳಿಕೆಯಲ್ಲೂ ಮೂಲ ಆರ್ಥಿಕತೆಯನ್ನು ಉಳಿಸುವ ಹಾಗೂ ಬೆಳೆಸುವ ಆಶಯ ಅಡಗಿದೆ. ಭಾರತ ಕೃಷಿ ಪ್ರಧಾನ ದೇಶ. ಇದೇ ಇದರ ಮೂಲ ಆರ್ಥಿಕತೆ. ಇದಕ್ಕೆ ಪೂರಕವಾಗಿ ಕೈಗಾರಿಕೆ, ಯಂತ್ರಜ್ಞಾನ ಹಾಗೂ ತಂತ್ರಜ್ಞಾನ ಅಭಿವೃದ್ಧಿ ಎಂದೇ ಇದರ ಅರ್ಥ.

ಇಂಥಹ ಆಶಯದೊಂದಿಗೆ ಅಭಿವೃದ್ಧಿ ಹೊಂದಿದ ಅನೇಕ ರಾಷ್ಟ್ರಗಳು ಜಗತ್ತಿಗೆ ಮಾದರಿಯಾಗಿವೆ. ಕ್ಯೂಬಾ, ಚೀನಾ, ರಷ್ಯಾ ಮುಂತಾದ ಸಮಾಜವಾದಿ ರಾಷ್ಟ್ರಗಳ ಅನುಭವ ಕಣ್ಮುಂದೆ ಇದೆ. ಅಲ್ಲದೆ ಜಾಗತೀಕರಣ ಬತ್ತಳಿಕೆಯಲ್ಲಿ ಮದಗೊಂಡ ಖಾಸಗೀಕರಣ ಬಾಣದಿಂದ, ದೇಶ ಕಾಡುವ ಸಮಸ್ಯೆಗಳನ್ನು ನಾಶಗೊಳಿಸಲು ಮುಂದಾಗಿ, ಅರಾಜಕತೆ, ಅಸ್ಥಿರತೆ, ಭಯೋತ್ಪಾದನೆ, ಆರ್ಥಿಕ ದಿವಾಳಿತನಕ್ಕೆ ತುತ್ತಾಗಿ ತಮ್ಮ ಅಸ್ತಿತ್ವನ್ನೇ ಕಳಕೊಂಡ ಬಂಡವಾಳಶಾಹಿ ರಾಷ್ಟ್ರಗಳ ಅನುಭವವೂ ಜಗತ್ತಿನ ಕಣ್ಮುಂದೆ ಇದೆ.

ಇಂದಿನ ಭಾರತದ ಪ್ರಧಾನಿ ಮತ್ತವರ ಸರಕಾರದ ಕೈಗಾರಿಕಾ ಅಭಿವೃದ್ಧಿ ನೀತಿ ಬಂಡವಾಳಶಾಹಿ ರಾಷ್ಟ್ರಗಳ ಪರಿಕಲ್ಪನೆಯಲ್ಲೇ ಜಾರಿಗೊಳ್ಳುತ್ತಿರುವ ಕಾರಣ ದೇಶದ ಮೂಲ ಆರ್ಥಿಕತೆ ಅಂದರೆ ಕೃಷಿ ಮತ್ತು ಕೃಷಿಕರನ್ನು ಸಂಪೂರ್ಣ ನಿರ್ನಾಮ ಮಾಡುವ ಆಕ್ರಮಣಕಾರಿ ನೀತಿಯಾಗಿದೆ. ಕೋಟ್ಯಾಂತರ ರೈತರ ಹಾಗೂ ದೇಶದ ಬದುಕಿಗೆ ಆಧಾರವಾದ ಕೃಷಿ ಭೂಮಿಯನ್ನು ಖಾಸಗಿ ಕಾರ್ಪೊರೇಟ್‌ಗಳ ಲಾಭಕೋರರ ಬಾಯಿಗೆ ಎಸೆಯಲು ಮುಂದಾದ ಪರಿಣಾಮ ಎಲ್ಲಾ ಕಾಯ್ದೆಗಳಿಗೆ ವಿಕೃತ ತಿದ್ದುಪಡಿ ತಳ್ಳಲಾಗಿದೆ.

ಇದನ್ನು ಮನಗಂಡ ರೈತರು ದೆಹಲಿ ಗಡಿಭಾಗದಲ್ಲಿ ಸರಕಾರದ ತಿದ್ದುಪಡಿ ಕಾಯ್ದೆಗಳ ವಿರುದ್ಧ ಧೀರ್ಘ ಕಾಲ ಸಮರ ಹೂಡಿ ಅವುಗಳನ್ನು ತಡೆದಿದ್ದಾರೆ. ಹಿಂಬಾಗಿಲಿಂದ ಮಾರಕ ಕಾಯ್ದೆಗಳ ಜಾರಿಗೆ ಕೇಂದ್ರ ಸರಕಾರ ಹೊಂಚು ಹಾಕುತ್ತಲೇ ಇದೆ.

ಕಂಗಾಲಾದ ರೈತರ ಬದುಕು

ಕೈಗಾರಿಕಾ ಅಭಿವೃದ್ಧಿಯ ಹೆಸರಲ್ಲಿ ಸರಕಾರ ಮತ್ತು ಕೆಐಎಡಿಬಿ ಬಲವಂತದಿಂದ ಜಮೀನನ್ನು ವಶಪಡಿಸಿಕೊಂಡ ನಂತರ ರೈತರು ನಾನಾ ಸಮಸ್ಯೆಯ ಸುಳಿಗೆ ಸಿಲುಕಿದ್ದಾರೆ. ಬಹುತೇಕ ರೈತ ಕುಟುಂಬಗಳು ಎರಡು ಮೂರು ಸಂಸಾರ ಹೊಂದಿದ ಕೂಡು ಕುಟುಂಬಗಳು. ಸಾಮಾನ್ಯವಾಗಿ ಪ್ರತಿ ಭೂಸಂತ್ರಸ್ತ ಕುಟುಂಬ 1 ಎಕರೆಯಿಂದ 10 ಎಕರೆ ಜಮೀನು ಹೊಂದಿದವುಗಳೇ ಹೆಚ್ಚು.

ಭೂಸ್ವಾಧೀನದಿಂದ ಸರಕಾರ ನೀಡಿದ ಅಲ್ಪ ಪರಿಹಾರದಲ್ಲಿ ಶೂಲದಂತೆ ಇರಿಯುತ್ತಿದ್ದ ಬ್ಯಾಂಕ್ ಹಾಗೂ ಖಾಸಗಿ ಸಾಲ, ಅನಾರೋಗ್ಯ, ಮನೆ ನಿರ್ಮಾಣ, ಬೆಳೆದು ನಿಂತ ಮಕ್ಕಳ ಮದುವೆಗಳು ಪಾಲು ಪಡೆದವು. ಹೀಗಾಗಿ ಪರಿಹಾರ ಬಂದ ಕೆಲವೇ ವರ್ಷದಲ್ಲಿ ರೈತರು ಬರಿಗೈ ಆದರು. ಮುಂದಿನ ಬದುಕಿಗೆ ಪರ್ಯಾಯ ಕಾಣದೆ ರೈತರು ಕಂಗಾಲಾದರು.

ಜಮೀನು ನುಂಗಿ 12 ವರ್ಷಗಳಾದರೂ ಕೈಗಾರಿಕೋದ್ಯಮಿಗಳು ಕಾರ್ಖಾನೆ ಸ್ಥಾಪಿಸದ ಕಾರಣ ಇತ್ತ ಜಮೀನು ಇಲ್ಲದೆ ಅತ್ತ ಕೆಲಸವಿಲ್ಲದೆ ಅತಂತ್ರ ಸ್ಥಿತಿ ನಿರ್ಮಾಣಗೊಂಡಿತು. ಆರ್ಥಿಕ ದುಸ್ಥಿತಿ ರೈತರ ಕುಟುಂಬವನ್ನು ಆಳಲು ಪ್ರಾರಂಭಿಸಿತು. ಹೀಗಾಗಿ ಕುಟುಂಬದ ಸದಸ್ಯರ ಸಂಬಂಧಗಳು ಬಿರುಕುಗೊಂಡವು. ಇನ್ನೊಬ್ಬರಿಗೆ ಕೂಲಿಕೊಟ್ಟು ದುಡಿಸುತ್ತಿದ್ದ ರೈತರು ಈಗ ಕೊಟ್ಟಷ್ಟು ಕೂಲಿಗೆ ದುಡಿದು ಹೊಟ್ಟೆ ತುಂಬಿಸಿಕೊಳ್ಳುವ ಸ್ಥಿತಿ ಎದುರಾಗಿದೆ. ಹಿಡಿ ಕೂಲಿ ಕುಟುಂಬದ ದೊಡ್ಡ ಹೊಟ್ಟೆಗೆ ಸಾಲದಾಗಿದೆ. ಕೆಲ ಕುಟುಂಬಗಳು ವೃದ್ಧರನ್ನು ಮನೆಯಲ್ಲೇ ಇರಿಸಿ ದೂರದ ನಗರದಲ್ಲಿ ಬದುಕು ಕಟ್ಟಲು ಗುಳೆ ಹೊರಟಿವೆ. ಅನಾರೋಗ್ಯಕ್ಕೆ ತುತ್ತಾದ ಕುಟುಂಬದ ಹಿರಿಯರು ಆಸ್ಪತ್ರೆಯ ಚಿಕಿತ್ಸೆಗೆ ಹಣವಿಲ್ಲದೆ ಸಾವನ್ನಪ್ಪಿದ್ದಾರೆ.

ಮಳೆ ಬಂತೆಂದರೆ ಈಗಲೂ ರೈತರ ಕಣ್ಣಲ್ಲಿ ಬೆಳೆತುಂಬಿದ ಹೊಲ ಕನಸುತ್ತದೆ. ಕೈಗಾರಿಕಾ ಸ್ಥಾಪನೆಯಿಲ್ಲದೆ ಬೀಳು ಬಿದ್ದ ಹೊಲವನ್ನು ಆಸೆಗಣ್ಣಿಂದ ನೋಡುತ್ತಾರೆ. 'ಕೈಗಾರಿಕಾ ಸ್ಥಾಪನೆ ಆಗುವತನಕವಾದರೂ ಒಂದಿಷ್ಟು ಬೆಳೆ ಬೆಳೆದರೆ. . .' ಎಂದು ಮನಸ್ಸು ಬಯಸುತ್ತದೆ. ಈ ಬಯಕೆಗೂ ಕಾರ್ಖಾನೆ ಮಾಲೀಕರು ವಶಪಡಿಸಿಕೊಂಡ ಜಮೀನಿನ ಸುತ್ತ ಯಾರೂ ಹೆಜ್ಜೆ ಇಡದಂತೆ ಕಬ್ಬಿಣದ ಮುಳ್ಳು ಬೇಲಿಯ ದಿಗ್ಬಂಧನ ರಚಿಸಿದ್ದಾರೆ. ಭೂಮಿ ಕಳಕೊಂಡ ರೈತ ಕುಟುಂಬಗಳು ನಿತ್ಯ ಜಗಳ, ಹಸಿವು, ಆತಂಕ, ಯಾತನೆ ಎಲ್ಲವೂ ಸೇರಿದ ಸಂಕಟಗಳ ಗೂಡಾಗಿ ಛಿದ್ರಛಿದ್ರವಾಗಿ ಬೀದಿಗೆ ಬಿದ್ದಿವೆ.

ಪುಟಿದೆದ್ದ ರೈತರ ಹೋರಾಟ

ಈ ಗ್ರಾಮಗಳ ಭೂಸಂತ್ರಸ್ತರು ಹೋರಾಟಕ್ಕೆ ಸಜ್ಜಾಗಿದ್ದಾರೆ. ಡಿಸೆಂಬರ್ 7 ಮತ್ತು 8 ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟಕ್ಕೆ ಮುನ್ನುಡಿ ಹಾಡಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘ, ಸಿಐಟಿಯು ಕಾರ್ಮಿಕ ಸಂಘ ಜಂಟಿಯಾಗಿ ರೈತರ ಹೋರಾಟಕ್ಕೆ ನೇತೃತ್ವ ನೀಡಿವೆ. ಅಲ್ಲದೆ ಬಿಟಿಪಿಎಸ್ ಕಾರ್ಮಿಕ ಸಂಘಟನೆ, ಜನವಾದಿ ಮಹಿಳಾ ಸಂಘ, ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ, ಡಿ.ವೈ.ಎಫ್.ಐ. ಹಾಗೂ ಕನ್ನಡ ಪರ ಸಂಘಟನೆಗಳು ಬೆಂಬಲಕ್ಕೆ ನಿಂತಿವೆ. ಹಳ್ಳಿಗಳಿಂದ ಪಾದಯಾತ್ರೆಯಲ್ಲಿ ಬಂದ ಹೋರಾಟ ನಿರತ ರೈತರ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ರೈತರೊಂದಿಗೆ ಚರ್ಚಿಸಿ ಬೇಡಿಕೆಗಳನ್ನು ಪರಿಶೀಲಿಸುವ ಭರವಸೆ ನೀಡಿದ್ದಾರೆ.

ಹಕ್ಕೊತ್ತಾಯಗಳು, ಬೇಡಿಕೆಗಳು

ಇದೀಗ ಮೂರನೆಯ ಹಂತದ ಹೋರಾಟ ಆರಂಭಗೊಂಡಿದೆ. ಒಮ್ಮೆ ಕುಡಿತಿನಿ ಗಾಮದಿಂದ ಬೆಂಗಳೂರಿಗೆ ರೈತರು ಪಾದಯಾತ್ರೆ ಮೂಲಕ ಬಂದು ಸರಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಈ ಪಾದಯಾತ್ರೆ ಹೋರಾಟದ ಬೇಡಿಕೆಗಳು:

* ಜಿಲ್ಲಾ ನ್ಯಾಯಾಲಯವು ಮೂಲ ಬೆಲೆಯನ್ನು ತಲಾ ಎಕರೆಗೆ ಸುಮಾರು 20 ಲಕ್ಷ ರೂ. ಗಳೆಂದು ನಿಗದಿಸಿ ಭೂ ಸಂತ್ರಸ್ಥರ ಹಕ್ಕೊತ್ತಾಯವನ್ನು ಎತ್ತಿ ಹಿಡಿದಿದೆ. ಹೀಗಾಗಿ, ಭೂ ಸಂತ್ರಸ್ಥ ಕುಟುಂಬಗಳಿಗೆ ಎಕರೆಗೆ 20 ಲಕ್ಷ ರೂ ನೀಡಬೇಕು.
* 2013ರ ಭೂ ಸ್ವಾಧೀನ ಕಾಯ್ದೆಯಂತೆ ಐದು ವರ್ಷಗಳಲ್ಲಿ ಕೈಗಾರಿಕೆಗಳನ್ನು ನಿರ್ಮಿಸಬೇಕಿತ್ತು. ಆದರೆ 12 ವರ್ಷಗಳಾದರೂ ನಿರ್ಮಿಸಲಿಲ್ಲ. ಮಾತ್ರವಲ್ಲ, ಭೂ ಸ್ವಾಧೀನ ಕಾಯ್ದೆಯಂತೆ ರೈತರಿಗೆ ಉದ್ಯೋಗ ಪರಿಹಾರವನ್ನು ಒದಗಿಸಲಿಲ್ಲ ಹಾಗೂ ಜಮೀನುಗಳನ್ನು ವಾಪಾಸು ನೀಡಲಿಲ್ಲ. ಈ ನಡುವೆ, ಬ್ರಾಹ್ಮಿಣಿ ಸ್ಟೀಲ್ ಕಂಪನಿಯು ಭೂ ಸಂತ್ರಸ್ಥರನ್ನು ವಂಚಿಸಿದ್ದು ಮಾತ್ರವಲ್ಲ, ಕೆಐಎಡಿಬಿ ಜೊತೆ ಶಾಮೀಲಾಗಿ ಹೆಚ್ಚುವರಿ ಬೆಲೆಗಳಿಗೆ ನಮ್ಮ ಜಮೀನುಗಳನ್ನು ನಮಗೆ ತಿಳಿಯದಂತೆ, ಬೇರೊಂದು ಕಂಪನಿಗೆ ಮಾರಾಟ ಮಾಡಿದೆ. ಮಿತ್ತಲ್ ಕಂಪನಿಯು ಸ್ಟೀಲ್ ಕಂಪನಿ ನಿರ್ಮಾಣ ಮಾಡಲಾಗದೆಂದು ಹೇಳಿಕೊಂಡು ಭೂ ಸಂತ್ರಸ್ಥರಿಗೆ ಉದ್ಯೋಗ ವಂಚಿಸುವ ಸೋಲಾರ್ ಪ್ಲಾಂಟ್ ನಿರ್ಮಿಸುವುದಾಗಿ ರಾಜ್ಯ ಸರಕಾರದ ಮುಂದೆ ಅರ್ಜಿ ಸಲ್ಲಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ನು ಗಾಳಿಗೆ ತೂರಿದ ಕಂಪನಿ ವಿರುದ್ಧ ಸರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಹಾಗೂ ಉದ್ದೇಶಿತ ಕೆಲಸಕ್ಕೆ ವಶಪಡಿಸಿಕೊಂಡ ಜಮೀನು ಬಳಕೆಯಾಗದ ಕಾರಣ ರೈತರಿಗೆ ಹಿಂತಿರುಗಿಸಬೇಕು.
* ಐದು ವರ್ಷಗಳಲ್ಲಿ ಕೈಗಾರಿಕೆಗಳು ನಿರ್ಮಾಣವಾಗಿದ್ದರೆ ತಲಾ ಕುಟುಂಬಗಳು ಮಾಸಿಕ ಕನಿಷ್ಠ 20 ಸಾವಿರ ರೂ. ಗಳ ಆದಾಯ ಹೊಂದುತ್ತಿದ್ದವು. ವಾರ್ಷಿಕ 2.50 ಲಕ್ಷ ರೂಗಳಂತೆ ಏಳು ವರ್ಷಗಳಲ್ಲಿ ಪ್ರತಿ ಕುಟುಂಬಕ್ಕೆ ಕನಿಷ್ಟ 17.50 ಲಕ್ಷ ರೂಗಳಂತೆ ಸರಕಾರ ನಷ್ಟ ಪರಿಹಾರ ನೀಡಬೇಕು.
* ಭೂ ಸ್ವಾಧೀನ ಕಾಯ್ದೆಗೆ ಹೊಸದಾಗಿ ತಂದಿರುವ ತಿದ್ದುಪಡಿಗಳನ್ನು ತಕ್ಷಣ ಕೈಬಿಡಬೇಕು.

ತುತ್ತಿನ ತತ್ವ

ನನ್ನ ನಾಡಿನ ಕವಿ
ನನ್ನ ಯೋಗಿ ಎಂದಿದ್ದ
ಸರಸ್ವತಿಯ ಕೈಯಲ್ಲಿ
ನೇಗಿಲ ಕನಸಿದ್ದ
ಎಂಥ ಸುಂದರ ಬಯಕೆ.

ಮಣ್ಣಮ್ಮೆಗೆ ಕಣ್ಣು ಮೂಡಿ
ಬದುಕು ಹಾಡಿತ್ತು
ಹಸಿದ ಕರುಳಿಗೆ
ಭೂತಾಯಿ ಒಡಲಲ್ಲಿ
ರೊಟ್ಟಿ ಅರಳಿತ್ತು.

ಕವಿ ಹೃದಯ ಮಿಡಿದಿತ್ತು
ಅನ್ನ ದೇವನ ಮುಂದೆ
ಇನ್ನು ದೇವರುಂಟೇ
ತುತ್ತು ತತ್ವದ ಶಾಸ್ತ್ರ
ಬದುಕ ಭತ್ತಳಿಕೆಯಲಿ
ಅಭಿವೃದ್ಧಿಯ ಅಸ್ತ್ರ.

ಅನ್ನ ಧರ್ಮವ ಮರೆತ
ಕನ್ನ ಧರ್ಮದ ಮಂದಿ
ಯಂತ್ರ ಮಾಟವ ಹೊಸೆದು
ಹೊಗೆನೆಟ್ಟು ಊದಿದರು
ದೇಶಪ್ರೀತಿಯ ಮಂತ್ರ.

ಅನ್ನದಾತರು ನಾವು
ಹಸಿವೆ ಎಂದವರಿಗೆ
ಭೂ ತಾಯ ಕೊಟ್ಟೆವು
ಬೆವರೂ ಇದೆ
ಸುರಿಸಲು ಪಾತ್ರೆ ಕೊಡಿ ಎಂದೆವು.

ಪ್ರೀತಿ ಮಾರಿ ದ್ವೇಷದ ಉರಿಮಾರಿ
ತಿಳಿಯಲಿಲ್ಲ ನಮಗೆ
ಯೋಗಿ ಮುಗ್ದತೆಯೇ ವೈರಿಯಾಗಿ
ಅನ್ನಕೊಟ್ಟವ ದೇಶದ್ರೋಹಿ
ರೌಡಿಯ ಹಣೆಪಟ್ಟಿ ಹೊತ್ತೆವು.

ಎದೆ ಬೇನೆ ಅರಚಿದವು
ಹೋರಾಟದ ಕಾಲಿಗೆ ಹೆಜ್ಜೆಯಾದೆವು
ನಮ್ಮ ತಾಯಿ ನಮಗಿರಲಿ
ಬೆವರ ತಂದೆ ತಾಯಿಗಿರಲಿ ಎಂದಾಗ
ತಾಯಿ ಮುಳ್ಳು ಬೇಲಿಯ ಬಂಧಿ.

ಕುರ್ಚಿಯಲಿ ಕುಂತವರ
ಅರಿಷಿಣದ ಅರ್ಥ ಶಾಸ್ತ್ರಕೆ
ವರುಷ ಹರ್ಷವ ಕಳಕೊಂಡೆವು.
ಅಯ್ಯಯ್ಯೋ ಎಂದು
ಕೊರಳು ಕೂಗಿತು.
ಬಣ್ಣದ ಚೀಗವ ಜಡಿದವರು
ದನಿಕಿತ್ತು ಕೊಂದರು.

ನಾಡ ಕವಿ ಹಾಡಿದ
ನಾನು ಅಳುವ ಯೋಗಿ
ಸರಸ್ವತಿಯ ಕೈಯಲ್ಲಿ
ವಿಷದ ಪಾಷಾಣ
ಇನ್ನೆಲ್ಲಿ ಹೇಳಿ ದೇಶದ ತ್ರಾಣ.

–ಪಿ.ಆರ್. ವೆಂಕಟೇಶ್,
ಬಳ್ಳಾರಿ

ವಿದ್ಯಾರ್ಥಿ ನಿಲಯ ವಸತಿ ಕೇಂದ್ರಗಳ ಡಿ ವರ್ಗದ ಸಿಬ್ಬಂದಿಗಳನ್ನು ನಿವೃತ್ತಿವರೆಗೆ ಮುಂದುವರೆಸಲು ಪ್ರತಿಭಟನೆ

ಸರ್ಕಾರಿ ವಿದ್ಯಾರ್ಥಿ ನಿಲಯ ಹಾಗೂ ಸರ್ಕಾರಿ ವಸತಿ ಶಾಲೆ ಕಾಲೇಜುಗಳ್ಲಿ ದುಡಿಮೆ ಮಾಡಿಕೊಂಡು ಬಂದಿದ್ದ 'ಡಿ' ವರ್ಗದ ಹೊರಗುತ್ತಿಗೆ ಸಿಬ್ಬಂದಿಗಳನ್ನು ನಿವೃತ್ತಿವರೆಗೆ ಸೇವೆಯಲ್ಲಿ ಮುಂದುವರೆಸಬೇಕು ಮತ್ತು ಬಾಕಿ ವೇತನವನ್ನು ಸಂದಾಯ ಮಾಡುವಂತೆ ಆಗ್ರಹಿಸಿ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದ್ದಾರೆ.

ಪ್ರಸಕ್ತ ಚಳಿಗಾಲದ ವಿಧಾನಮಂಡಲ ಅಧಿವೇಶನ ಕುಂದಾನಗರಿ ಬೆಳಗಾವಿಯಲ್ಲಿ ನಡೆಯುತ್ತಿದ್ದು, ಸುವರ್ಣ ಸೌಧದ ಸಮೀಪ ಪ್ರತಿಭಟನೆಯನ್ನು ಹಮ್ಮಿಕೊಂಡ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘವು ಈ ಕುರಿತು ಸರ್ಕಾರ ಇಲಾಖಾ ಮಟ್ಟದಲ್ಲಿ ಸಭೆಯನ್ನು ಕರೆದು ಸಮಸ್ಯೆಗಳನ್ನು ಇತ್ಯರ್ಥಪಡಿಸಬೇಕೆಂದು ಆಗ್ರಹಿಸಿದ್ದಾರೆ.



ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮತ್ತು ಮೊರಾರ್ಜಿ ದೇಸಾಯಿ, ರಾಣಿಚನ್ನಮ್ಮ, ಡಾ. ಅಂಬೇಡ್ಕರ್ ಮೊದಲಾದ ವಿದ್ಯಾರ್ಥಿ ವಿದ್ಯಾರ್ಥಿನೀಯರ ವಸತಿ ಶಾಲೆಗಳಲ್ಲಿ ಅಡುಗೆ, ಸ್ವಚ್ಚತೆ, ಕಾವಲು ಮೊದಲಾದ ಕೆಲಸಗಳನ್ನು 'ಡಿ' ವರ್ಗದ ಸಿಬ್ಬಂದಿಗಳು ಮಾಡುತ್ತಾ ಬಂದಿದ್ದರು. ಈ ಬಗ್ಗೆ ಯಾರ ತಕರಾರು ಇರಲಿಲ್ಲ. ಒಂದಲ್ಲ ಒಂದು ದಿನ ತಮ್ಮತಮ್ಮ ಸ್ಥಾನಗಳಲ್ಲಿ ಕಾಯಂ ಆಗುವ ಕನಸು ಕಾಣುತ್ತಿದ್ದರು. ಇವರಲ್ಲಿ ಹೆಚ್ಚಿನವರು ಅವಿದ್ಯಾವಂತ ಮಹಿಳೆಯರಾದ್ದು ಸಾಮಾಜಿಕವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ, ಅಲ್ಪಸಂಖ್ಯಾತ ವರ್ಗದವರಾಗಿದ್ದಾರೆ. ಹಲವರು ವಿಧವೆಯರು, ಒಂಟಿ ಜೀವನ ನಡೆಸುವವರು ಆಗಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಾಜ್ಯ ಸರ್ಕಾರ ಡಿ ವರ್ಗದ ಸಿಬ್ಬಂದಿಗಳನ್ನು ಕಾಯಂಗೊಳಿಸುವ ಪ್ರಕ್ರಿಯೆ ಆರಂಭಿಸಿತು. ಆದರೆ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಸಿಬ್ಬಂದಿಗಳನ್ನು ಜೇಷ್ಠತೆಗೆ ಅನುಗುಣವಾಗಿ ಕಾಯಂ ಮಾಡುವ ಬದಲಾಗಿ ನೇರ ನೇಮಕಾತಿ ಮಾಡಲು ಮುಂದಾಗಿರುವುದು ಈಗಾಗಲೇ ಹತ್ತಾರು ವರ್ಷಗಳ ಅನುಭವಿ ನೌಕರರ ಕೆಲಸಕ್ಕೆ ಕುತ್ತಾಗಿದೆ. ಇದರ ಪರಿಣಾಮವಾಗಿ ಅನೇಕ ವರ್ಷಗಟ್ಟಲೆ ಕೆಲಸ ಮಾಡಿ ಅನುಭವ ಇದ್ದವರು ಕೆಲಸ ಕಳೆದುಕೊಂಡರು. ಅಡುಗೆ ಮಾಡುವ ಅನುಭವವೂ, ಆಸಕ್ತಿಯೂ ಇಲ್ಲದವರು ಆಯ್ಕೆಯಾಗಿದ್ದಾರೆ. ವರ್ಷಗಟ್ಟಲೆ ಕೆಲಸ ಮಾಡಿದ ನಮ್ಮನ್ನು ಹೆಚ್ಚುವರಿ

ಪುಟ 15 ಕ್ಕೆ

ರೈತ ಚಳುವಳಿಯನ್ನು ಬಲಗೊಳಿಸಲು ನಿರ್ಧಾರ.......

ಪುಟ 9 ರಿಂದ

ರಸಗೊಬ್ಬರ, ಕೀಟನಾಶಕಗಳ ಬೆಲೆಗಳು ಗಗನಕ್ಕೇರಿ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ಮತ್ತೊಂದೆಡೆ, ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಗಳೊಂದಿಗಿನ ಒಪ್ಪಂದದಿಂದಾಗಿ ನೂರಾರು ಕೃಷಿ ಉತ್ಪನ್ನಗಳು ಸಲೀಸಾಗಿ ಗಡಿದಾಟಿ ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿ ಅತ್ಯಂತ ಕಡಿಮೆ ಬೆಲೆಗೆ ತಮ್ಮ ಕೃಷಿ ಉತ್ಪನ್ನಗಳನ್ನು ಬಿಕರಿ ಮಾಡುತ್ತಿವೆ. ಇದರಿಂದ ಭಾರತದ ರೈತರ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆಯೂ ಇಲ್ಲದೆ, ಸರಿಯಾದ ಬೆಲೆಯೂ ಸಿಗದೆ ಮಾಡಿದ ಸಾಲವನ್ನೂ ತೀರಿಸಲಾಗದ ರೈತ ಆತ್ಯಹತ್ಯೆಗೆ ಶರಣಾಗುತ್ತಿದ್ದಾನೆ.

ರೈತರ ಕೈಯಿಂದ ಕೃಷಿ ಭೂಮಿಯನ್ನು ಕಿತ್ತು ಕಾರ್ಪೊರೇಟ್‌ಗಳಿಗೆ ವರ್ಗಾಯಿಸಲಾಗುತ್ತಿದೆ. ಇದರಿಂದ ದಿನದಿಂದ ದಿನಕ್ಕೆ ಭಾರತದಲ್ಲಿ ಭೂರಹಿತರ ಸಂಖ್ಯೆ ಹೆಚ್ಚಾಗುತ್ತಿದೆ. ಇವುಗಳಿಗೆ ಪೂರಕವಾಗಲೆಂದೇ ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ಕಾರ್ಪೊರೇಟೀಕರಣಗೊಳಿಸಬೇಕೆನ್ನುವ ಉದ್ದೇಶದಿಂದಲೇ ಮೋದಿ ಸರ್ಕಾರ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲು ಪ್ರಯತ್ನಿಸಿತು. ದೇಶದಲ್ಲಿ ಸುಮಾರು 66 ಲಕ್ಷ ಆದಿವಾಸಿಗಳು ತಮ್ಮ ಭೂಮಿ ಮತು ಸಮುದಾಯದ ಹಕ್ಕಿಗಾಗಿ ಕಾಯುತ್ತಿದ್ದಾರೆ.

ಜಗತ್ತಿನ ಗಮನ ಸೆಳೆದ, ಅತ್ಯಂತ ಸ್ಫೂರ್ತಿದಾಯಕವಾಗಿ 384 ದಿನಗಳ ಕಾಲ ದೆಹಲಿಯ ಗಡಿಗಳಲ್ಲಿ ನಡೆದ ರೈತ ಚಳುವಳಿಯಿಂದಾಗಿ ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದಿದ್ದರೂ ರೈತರ ಇನ್ನೂ ಪ್ರಮುಖ ಪ್ರಶ್ನೆಗಳು ಹಾಗೆಯೇ ಉಳಿದಿವೆ. ಅದರಲ್ಲಿ ಬಹಳ ಮುಖ್ಯವಾದದ್ದು ಕನಿಷ್ಟ ಬೆಂಬಲ ಬೆಲೆಯನ್ನು ಖಾತ್ರಿಗೊಳಿಸುವ ಕಾನೂನನ್ನು ಮಾಡುವುದು. ಇದಕ್ಕಾಗಿ ದೇಶಾದ್ಯಂತ ರೈತ ಚಳುವಳಿಯನ್ನು ಸ್ವತಂತ್ರ್ಯವಾಗಿ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ಮುಂದುವರೆಸಬೇಕಾಗಿದೆ.

ಕೃಷಿ ಕ್ಷೇತ್ರ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಕೇರಳದ ಎಡರಂಗ ಸರ್ಕಾರದ ನೀತಿಗಳು ಮತ್ತು ಅದರ ಕೆಲಸ ಮಾದರಿಯಾಗಿವೆ. ಕೇರಳದಲ್ಲಿ ಕೃಷಿ ಉತ್ಪನ್ನಗಳಿಗೆ ನೀಡುತ್ತಿರುವ ಬೆಂಬಲ ಬೆಲೆ, ಇಲ್ಲಿನ ಪಡಿತರ ವ್ಯವಸ್ಥೆಯಲ್ಲಿ ನೀಡುತ್ತಿರುವ ಅಗತ್ಯವಸ್ತುಗಳು, ಕಾರ್ಮಿಕರಿಗೆ ಮತ್ತು ಕೂಲಿಕಾರರಿಗೆ ದೇಶದಲ್ಲೇ ಅತಿ ಹೆಚ್ಚು ಕೂಲಿ ನಿಗದಿಪಡಿಸಿರುವುದು, ಭತ್ತ ಸೇರಿದಂತೆ ತೋಟಗಾರಿಕಾ ಬೆಳೆಗಳಿಗೆ ನೀಡುತ್ತಿರುವ ಪ್ರೋತ್ಸಾಹ ರೈತರನ್ನು ಆತ್ಮಹತ್ಯೆಯ ದಾರಿಯಿಂದ ವಾಪಸ್ ಕರೆತಂದು ಕೃಷಿಯನ್ನು ಲಾಭದಾಯಕವನ್ನಾಗಿ ಪರಿವರ್ತಿಸುತ್ತಿದೆ. ಈ ರೀತಿಯ 'ಜನಪರ ಮಾದರಿಗಳೇ ನಮ್ಮ ಮುಂದಿರುವ ಪರ್ಯಯಗಳು' ಎಂದು ಸಮ್ಮೇಳನ ಅಭಿಪ್ರಾಯಪಟ್ಟಿದೆ.

ಸವಾಲುಗಳು ಸಂಘಟನಾ ಕ್ರಮಗಳು

ಇದರ ಜೊತೆಗೆ ಚಳುವಳಿಗಳು ಮತ್ತು ಸಂಘಟನಾ ಬೆಳವಣಿಗೆಗಳ ಕುರಿತು ಚರ್ಚಿಸಿದ ಸಮ್ಮೇಳನವು ದೇಶದ ಜನತೆ ಮತ್ತು ಕೃಷಿ ಕ್ಷೇತ್ರದ ಮುಂದಿರುವ ಸವಾಲುಗಳನ್ನು ಎದುರಿಸಿ ಜನಪರ ನೀತಿಗಳು ಜಾರಿಯಾಗಬೇಕಾದರೆ ಅದಕ್ಕಾಗಿ ಸ್ವತಂತ್ರ ಚಳುವಳಿಯನ್ನು ಬಲಗೊಳಿಸುವ ಜೊತೆಗೆ ವಿಷಯಾಧಾರಿತವಾಗಿ ಜಂಟಿ ಚಳುವಳಿಯನ್ನು ಸಂಘಟಿಸಬೇಕಾದ ತುರ್ತು ಅಗತ್ಯವಿದೆ. ಈ ಅವಧಿಯಲ್ಲಿ ಈ ಕೆಲಸ ಅತ್ಯುತ್ತಮವಾಗಿ ಮೂಡಿಬಂದಿದೆ. ಮೊದಲ ಹಂತದಲ್ಲಿ ಸುಮಾರು 50 ಸಂಘಟನೆಗಳನ್ನು ಒಳಗೊಂಡ 'ಭೂಮಿ ಅಧಿಕಾರ್ ಆಂದೋಲನ' ವೇದಿಕೆಯ ನೇತೃತ್ವದಲ್ಲಿ ರೈತರ ಭೂಮಿಯನ್ನು ಕಬಳಿಸುವ ಕರಾಳ ಭೂಸ್ವಾಧಿನ ಕಾಯ್ದೆಯ ವಿರುದ್ಧ ದೇಶಾದ್ಯಂತ ನಿರಂತರ ಚಳುವಳಿಯನ್ನು ನಡೆಸಲಾಗಿದೆ. ನಂತರ ಎರಡನೇ ಹಂತದಲ್ಲಿ ಸುಮಾರು 250 ಕ್ಕೂ ಹೆಚ್ಚು ಸಂಘಟನೆಗಳನ್ನು ಒಳಗೊಂಡು 'ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ' ರಚಿಸಿ ಕೇಂದ್ರ ರಾಜ್ಯ ಸರ್ಕಾರಗಳ ಕೃಷಿ ನೀತಿಗಳ ವಿರುದ್ಧ ಹೋರಾಟಗಳನ್ನು ರೂಪಿಸಲಾಗಿದೆ. ಅಂತಿಮವಾಗಿ, ಮೋದಿ ಸರ್ಕಾರ ಜಾರಿಗೆ ತರಲು ಮುಂದಾದ ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ಸುಮಾರು 500 ಕ್ಕೂ ಹೆಚ್ಚು ರೈತ, ಕಾರ್ಮಿಕ, ಕೂಲಿಕಾರ ಸಂಘಟನೆಗಳನ್ನು ಒಳಗೊಂಡ ವಿಶಾಲ ವೇದಿಗೆ 'ಸಂಯುಕ್ತ ಕಿಸಾನ್ ಮೋರ್ಚ' ರಚಿಸಿ ಒಂದು ವರ್ಷಕ್ಕೂ ಹೆಚ್ಚು ಕಾಲ ಸುಧೀರ್ಘವಾಗಿ ಮತ್ತು ಯಶಸ್ವಿಯಾಗಿ ಮಾದರಿ ರೈತ ಚಳುವಳಿಗೆ ಎಸ್‌ಕೆಎಂ ನಾಯಕತ್ವ ನೀಡಿದೆ.

> **ದೇಶದ ಜನತೆ ಮತ್ತು ಕೃಷಿ ಕ್ಷೇತ್ರದ ಮುಂದಿರುವ ಸವಾಲುಗಳನ್ನು ಎದುರಿಸಿ ಜನಪರ ನೀತಿಗಳು ಜಾರಿಯಾಗಬೇಕಾದರೆ ಅದಕ್ಕಾಗಿ ಸ್ವತಂತ್ರ ಚಳುವಳಿಯನ್ನು ಬಲಗೊಳಿಸುವ ಜೊತೆಗೆ ವಿಷಯಾಧಾರಿತವಾಗಿ ಜಂಟಿ ಚಳುವಳಿಯನ್ನು ಸಂಘಟಿಸಬೇಕಾದ ತುರ್ತು ಅಗತ್ಯವಿದೆ. ಈ ಅವಧಿಯಲ್ಲಿ ಈ ಕೆಲಸ ಅತ್ಯುತ್ತಮವಾಗಿ ಮೂಡಿಬಂದಿದೆ.**

ಈ ಅನುಭವಗಳ ಆಧಾರದಲ್ಲಿ ಒಂದೆಡೆ ಸ್ವತಂತ್ರ್ಯ ಶಕ್ತಿಯನ್ನು ವಿಸ್ತರಿಸಿ ಕ್ರೋಡೀಕರಿಸುತ್ತಾ, ಮತ್ತೊಂದೆಡೆ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ರೈತ ಚಳುವಳಿಯನ್ನು ಬಲಗೊಳಿಸುತ್ತಾ ಭಾರತದ ರೈತಾಪಿ ಕೃಷಿಯನ್ನು ಉಳಿಸಲು ಮೋದಿ ಸರ್ಕಾರದ ಕಾರ್ಪೊರೇಟ್ ಪರ ನೀತಿಗಳನ್ನು ಹಿಮ್ಮೆಟ್ಟಿಸುವುದೇ ನಮ್ಮ ಮುಂದಿರುವ ಅತಿ ದೊಡ್ಡ ಸವಾಲು ಎಂದು ಅಖಿಲ ಭಾರತ ಕಿಸಾನ್ ಸಭಾದ 35 ನೇ ಸಮ್ಮೇಳನ ಅಭಿಪ್ರಾಯಪಟ್ಟಿತು.

ಐಕ್ಯ ಚಳುವಳಿಗೆ ಒತ್ತು

ಸಮ್ಮೇಳನದ ಎರಡನೇ ದಿನ ಸಂಯುಕ್ತ ಕಿಸಾನ್ ಮೋರ್ಚಾದ ಪ್ರಮುಖ ಭಾಗಿದಾರ ಸಂಘಟನೆಗಳ ವಿಶೇಷ ಅಧಿವೇಶನವನ್ನು ಸಂಘಟಿಸಲಾಗಿತ್ತು. ಇದರಲ್ಲಿ ಭಾರತೀಯ ಕಿಸಾನ್ ಯೂನಿಯನ್‌ನ ರಾಕೇಶ್ ಟಿಕಾಯತ್, ಅಖಿಲ ಭಾರತ ಕಿಸಾನ್ ಸಭಾದ ಅತುಲ್ ಅಂಜನ್ ಮತ್ತು ಅಖಿಲ ಭಾರತ ಕಿಸಾನ್ ಮುಜ್ದೂರ್ ಸಂಘದ ರಾಜಾರಾಮ್ ಸಿಂಗ್ ಜೊತೆಗೆ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನನ್ ಮುಲ್ಲಾ ಮತ್ತು ರಾಷ್ಟ್ರೀಯ ಅಧ್ಯಕ್ಷರಾದ ಡಾ.ಅಶೋಕ್ ದವಳೆಯವರು ಉಪಸ್ಥಿತರಿದ್ದರು. ಈ ವಿಶೇಷ ಅಧಿವೇಶನದಲ್ಲಿ ದೆಹಲಿ ರೈತ ಚಳುವಳಿಯ ಅನುಭವಗಳು ಮತ್ತು ಧೀರ್ಘಾವಧಿ ಹೋರಾಟವನ್ನು ಕಟ್ಟಿದ ರೀತಿ ಜೊತಗೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚೆಚ್ಚು ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ನಿರ್ಣಾಯಕ ಹೋರಾಟಗಳನ್ನು ಕಟ್ಟುವುದರ ಜೊತೆಗೆ ಜಂಟಿ ವಿಷಯಾಧಾರಿತವಾದ ಜಂಟಿ ಚಳುವಳಿಯನ್ನು ದೇಶದಲ್ಲಿ ಎಲ್ಲಾ ಹಂತಗಳಲ್ಲೂ ಬಲಗೊಳಿಸಬೇಕೆಂದು ಅಭಿಪ್ರಾಯಪಟ್ಟರು. ವೇದಿಕೆಯ ಮೇಲೆ ವಿವಿಧ ಸಂಘಟನೆಗಳನ್ನು ಪ್ರತಿನಿಧಿಸಿದ ಎಸ್‌ಕೆಎಂನ ನಾಯಕತ್ವ ಪರಸ್ಪರ ಕೈಹಿಡಿದು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸುತ್ತಿದ್ದರೆ ದೆಹಲಿಯ ಐತಿಹಾಸಿಕ ರೈತ ಚಳುವಳಿ ಕಣ್ಮುಂದೆ ಬಂದದ್ದು ಮಾತ್ರವಲ್ಲ ದೇಶದ ಕೃಷಿ ಮತ್ತು ರೈತರನ್ನು ಉಳಿಸಲು ಸಂಯುಕ್ತ ಕಿಸಾನ್ ಮೋರ್ಚಾದ ಅಗತ್ಯವನ್ನು ಸಾರಿ ಸಾರಿ ಹೇಳುವಂತಿತ್ತು.

ಮೂರು ಆಯೋಗಗಳು–ಆಳ ವಿಶ್ಲೇಷಣೆ

ಸಮ್ಮೇಳನದ ಮೂರನೇ ದಿನ ಭಾಗವಹಿಸಿದ್ದ 756 ಪ್ರತಿನಿಧಿಗಳನ್ನು ಮೂರು ತಂಡಗಳಾಗಿ ವಿಂಗಡಿಸಿ 1. 'ಗ್ರಾಮೀಣ ಭಾರತದಲ್ಲಿ ಬೆಳೆದು ಬರುತ್ತಿರುವ ಭೂಮಿಯ ಪ್ರಶ್ನೆಗಳ ಕುರಿತು' 2. 'ಕನಿಷ್ಟ ಬೆಂಬಲ ಬೆಲೆಯನ್ನು ಶಾಸನಬದ್ಧವಾಗಿ ಖಾತ್ರಿಗೊಳಿಸುವ ಕುರಿತು' 3. 'ಕೃಷಿ ಕೇತ್ರದ ಮೇಲೆ ಕಾರ್ಪೊರೇಟ್ ಮತ್ತು ಹಣಕಾಸು ಬಂಡವಾಳದ ಪ್ರಭಾವದ ಕುರಿತು' ಒಟ್ಟು ಮೂರು ಆಯೋಗಗಳನ್ನು ರಚಿಸಿ ಪತ್ಯೇಕವಾಗಿ ಲಿಖಿತ ಟಿಪ್ಪಣಿಯ ಆಧಾರದಲ್ಲಿ ಚರ್ಚೆಗಳನ್ನು ನಡೆಸಲಾಗಿದೆ. ಸಮ್ಮೇಳನದಲ್ಲಿ ಒಟ್ಟು 15 ನಿರ್ಣಯಗಳನ್ನು ಅಂಗೀಕರಿಸಲಾಯಿತು.

ನೂತನ ನಾಯಕತ್ವದ ಆಯ್ಕೆ

ಸಮ್ಮೇಳನವು ಅಂತಿಮವಾಗಿ 149 ಜನರ ಅಖಿಲ ಭಾರತ ಕಿಸಾನ್ ಕೌನ್ಸಿಲ್, 77 ಜನರ ಸೆಂಟ್ರಲ್ ಕಿಸಾನ್ ಕಮಿಟಿ, 21 ಜನರ ಪಧಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಅಖಿಲ ಭಾರತ ಕಿಸಾನ್ ಸಭಾದ ನೂತನ ಅಧ್ಯಕ್ಷರಾಗಿ ಡಾ.ಅಶೋಕ್ ದವಳೆಯವರು ಪುನರಾಯ್ಕೆಯಾದರು. ಕಾಮ್ರೇಡ್ ಡಾ.ವಿಜೂ ಕೃಷ್ಣನ್ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಕಾಮ್ರೇಡ್ ಪಿ.ಕೃಷ್ಣ ಪ್ರಸಾದ್ ಹಣಕಾಸು ಕಾರ್ಯದರ್ಶಿಯಾಗಿ ಆಯ್ಕೆಯಾದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಜಿ.ಸಿ. ಬಯ್ಯಾರೆಡ್ಡಿ ಮತ್ತು ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಟಿ.ಯಶವಂತ ಸಿಕೆಸಿಗೆ ಮತ್ತು ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ಜಿ.ನಾಗರಾಜ ಮತ್ತು ರಾಜ್ಯ ಜಂಟಿ ಕಾರ್ಯದರ್ಶಿ ಕಾಮ್ರೆಡ್ ಎಚ್.ಆರ್.ನವೀನ್‌ಕುಮಾರ್ ಎಐಕೆಸಿಗೆ ಆಯ್ಕೆಯಾದರು.

ಅಭೂತ ಪೂರ್ವ ಸಿದ್ಧತೆ

ಹಲವು ಧೀರೋದ್ಧಾತ ರೈತ ಚಳುವಳಿಯನ್ನು ನಡೆಸಿರುವ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ಬಲವಾಗಿರುವ ಕೇರಳದಲ್ಲಿ ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ಸಮ್ಮೇಳನ ನಡೆಯುತ್ತದೆ ಎಂದು ನಿರ್ಧಾರವಾದಾಗಲೇ ದೇಶಾದ್ಯಂತ ನಿರೀಕ್ಷೆಗಳು ಹೆಚ್ಚಾಗಿದ್ದವು. ಅದರಂತೆ ತ್ರಿಶೂರು ಜಿಲ್ಲೆಯ ಸ್ಥಳೀಯ ಸ್ವಾಗತ ಸಮಿತಿಯು ನಾಲ್ಕು ದಿನಗಳ ಈ ಮಹತ್ವದ ರೈತ ಸಮ್ಮೇಳನವನ್ನು ಯಾವುದೇ ಕುಂದು ಕೊರತೆಗಳು ಬಾರದಂತೆ ಮಾತ್ರವಲ್ಲ, ಕಿಸಾನ್ ಸಭಾವನ್ನು ದೇಶಾದ್ಯಂತ ಬಲಿಷ್ಟವಾಗಿ ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ಸ್ಫೂರ್ತಿ ನೀಡುವಂತೆ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸಿದ್ದರು. ಸಮ್ಮೇಳನದ ಅಂಗವಾಗಿ ವಿವಿಧ ವಿಷಯಗಳ ಮೇಲೆ 18 ಕ್ಕೇ ಹೆಚ್ಚು ವಿಚಾರ ಸಂಕಿರಣಗಳು, ವಿವಿಧ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಮೂಲಕ ರಾಜ್ಯದ ರೈತರನ್ನು ಮತ್ತು ಎಲ್ಲ ವಿಭಾಗದ ಜನರನ್ನು ಇದರಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸುವ ರೀತಿಯಲ್ಲಿ ಮಾಡಲಾಗಿತ್ತು.

ಬಹಿರಂಗ ರ್‍ಯಾಲಿ

ಸಮ್ಮೇಳನದ ಕೊನೆಯ ದಿನ ಸುಮಾರು 25 ಸಾವಿರಕ್ಕೂ ಹೆಚ್ಚು ರೈತರ ಬೃಹತ್ ಬಹಿರಂಗಸಭೆಯನ್ನು ತ್ರಿಶೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಬಹಿರಂಗ ಸಭೆಯನ್ನು ಉಧ್ಘಾಟಿಸಿ ಕೇರಳ ಎಡರಂಗ ಸರ್ಕಾರದ ಮುಖ್ಯಮಂತ್ರಿ ಕಾಮ್ರೇಡ್ ಪಿಣರಾಯಿ ವಿಜಯನ್ ಮಾತನಾಡಿದರು.

ನಿರುದ್ಯೋಗದ ಸಂಖ್ಯೆ 5 ಕೋಟಿಗಿಂತಲೂ ಹೆಚ್ಚು–ನಿರುದ್ಯೋಗ ದರ 9%


ಇದು ಅಮೃತ ಕಾಲ

ನವಂಬರ್ 2022 ರಲ್ಲಿ ಭಾರತದಲ್ಲಿ ನಿರುದ್ಯೋಗಿಗಳ ಸಂಖ್ಯೆ 5 ಕೋಟಿ ದಾಟಿದೆ. ಈ ಮೊದಲು ಕೊವಿಡ್ ಕಾಲದಲ್ಲಿ ಲಾಕ್‌ಡೌನುಗಳು ಇತ್ಯಾದಿಗಳನ್ನು ಕಂಡ ಸಮಯದಲ್ಲಿ ಇದು 5.3 ಕೋಟಿಗೇರಿತ್ತು. ಆಮೇಲೆ ನಿಧಾನವಾಗಿ ಅರ್ಥವ್ಯವಸ್ಥೆ ಸುಧಾರಿಸುತ್ತಿದ್ದಂತೆ ಕೆಳಗಿಳಿದ ಅದು ನವಂಬರ್ 2022ರಲ್ಲಿ 5.1 ಕೋಟಿ ಆಗಿದೆ ಎಂದು ಇತ್ತೀಚಿನ ಅಂಕಿ–ಅಂಶಗಳು ತಿಳಿಸುತ್ತಿವೆ. ಅಂದರೆ ಕೊವಿಡ್ ಕಾಲದ ಸಂಖ್ಯೆಯನ್ನು ಸಮೀಪಿಸುತ್ತಿದೆ.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ದೇಶದಲ್ಲಿ ಒಟ್ಟು ಉದ್ಯೋಗಿಗಳ ಸಂಖ್ಯೆ ಇನ್ನೂ ಕೊವಿಡ್–ಪೂರ್ವ ಮಟ್ಟಕ್ಕೆ ಹಿಂದಿರುಗಿಲ್ಲ. (ಕೆಳಗಿರುವ ಕೋಷ್ಟಕ ನೋಡಿ). ಇದು 2019ರಲ್ಲಿ 44.2 ಕೋಟಿ ಇತ್ತು. ಕೊವಿಡ್‌ನಿಂದಾಗಿ ಅದು 42.4 ಕೋಟಿಗೆ ಇಳಿಯಿತು. ನವಂಬರ್ 2022ರಲ್ಲಿ ಅದು 43.7 ಕೋಟಿ.

ನಿರುದ್ಯೋಗ ದರವೂ ಸತತವಾಗಿ ಮೇಲ್ಮಟ್ಟದಲ್ಲೇ ಇದೆ. ಐದು ವರ್ಷಗಳ 'ಅಚ್ಛೇ ದಿನ್'ಗಳ ಕೊನೆಯಲ್ಲಿ 2019ರಲ್ಲಿ ಅದು ಸರಾಸರಿ 7.4% ಇತ್ತು. 2020ರ ಮೊದಲ ಕೊವಿಡ್ ಅಲೆಯ ಕಾಲದಲ್ಲಿ ಅದು 25% ದಾಟಿತು. ನಂತರ ಕ್ರಮೇಣ ಸುಧಾರಿಸಿ 2021ರಲ್ಲಿ 7.8%ಕ್ಕಿಳಿಯಿತು. 2022ರಲ್ಲಿ ನವಂಬರ್ ವರೆಗೆ ಅದು 7.5% ಇತ್ತು.

ಆದರೆ ಡಿಸೆಂಬರ್ 1ರಂದು 30 ದಿನಗಳ ಸರಾಸರಿ ನಿರುದ್ಯೋಗ 8.2% ಇದ್ದದ್ದು, ಡಿಸೆಂಬರ್ 16 ರವೇಳೆಗೆ 9.3%ಕ್ಕೆ ಏರಿದೆ. ಅದರಲ್ಲೂ



ಲೋಕಸಭಾ ಚಉನಾವಣೆಯ ವೇಳೆಗೆ) ನೇಮಕಾತಿ ನಡೆಸುವುದಾಗಿ ಮತ್ತೊಂದು ಆಶ್ವಾಸನೆ ನೀಡಿದರು. ಅದರಲ್ಲಿ 75,000 ಹುದ್ದೆಗಳ ಆದೇಶಪತ್ರಗಳನ್ನು ಪ್ರಧಾನಿಗಳು ಹಿಮಾಚಲ ಮತ್ತು ಗುಜರಾತ್ ಚುನಾವಣಾ ಪ್ರಚಾರದ ತುಸು ಮೊದಲು ಅಕ್ಟೋಬರ್‌ನಲ್ಲಿ ಮತ್ತು ಇನ್ನು 75000ದ್ದು ಗುಜರಾತ್ ಮತದಾನದ ವೇಳೆಯಲ್ಲಿ ಟಿವಿಯಲ್ಲಿ ದೂರಹಂಚಿಕೆ ಮೂಲಕ ವಿತರಿಸಿದ್ದಾರೆ. 10 ಕೋಟಿ ಉದ್ಯೋಗ ನಿರ್ಮಾಣದ ಆಶ್ವಾಸನೆ 8ವರ್ಷಗಳಲ್ಲಿ ಈಗಾಗಲೇ ಇರುವ 10ಲಕ್ಷ ಉದ್ಯೋಗಾವಕಾಶಗಳ ಭರ್ತಿಯ 'ರೋಜ್‌ಗಾರ್ ಮೇಲಾ'ದ ಮಟ್ಟಕ್ಕೆ ಇಳಿದಿದೆ.

ಇನ್ನೂ ಕೆಲವು ಅಂಕಿ–ಅಂಶಗಳನ್ನು ನೋಡಿ:

	ಡಿಸೆಂಬರ್ 2017	ಡಿಸೆಂಬರ್ 2022
ನಿರುದ್ಯೋಗ ದರ	4.7%	8.90%
ಉದ್ಯೋಗ ಅರಸುತ್ತಿದ್ದವರು	42.87 ಕೋಟಿ	48.40 ಕೋಟಿ
ಉದ್ಯೋಗ ಪಡೆದವರು	45.20 ಕೋಟಿ	41.17 ಕೋಟಿ
ವ್ಯತ್ಯಾಸ	+23.3 ಕೋಟಿ	+3.3 ಕೋಟಿ

ಉದ್ಯೋಗ ದೊರೆಯದವರ ಪೂರ್ಣ ಮಾಹಿತಿ ನವಂಬರ್ 2022ರ ವರೆಗೆ ದೊರೆತಿದೆ. ಅದು ಹೀಗಿದೆ:

	ಡಿಸೆಂಬರ್ 2017	ನವಂಬರ್ 2022
20–24 ವಯೋಗುಂಪು	22.45%	45.40%
ಪದವೀಧರ ನಿರುದ್ಯೋಗ	12.30%	18.00%

ಅಂದರೆ ಕಳೆದ 5 ವರ್ಷಗಳಲ್ಲಿ ಉದ್ಯೋಗ ಅರಸುತ್ತಿದ್ದ 23.3 ಕೋಟಿ ಜನಗಳಲ್ಲಿ ಉದ್ಯೋಗ ಪಡೆದವರು ಕೇವಲ 3.3 ಕೋಟಿ, ಅಥವ 14%. ಅಂದರೆ ಕಳೆದ 5 ವರ್ಷಗಳಲ್ಲಿ
ಉದ್ಯೋಗ ಬೇಕಿದ್ದ 86% ಮಂದಿಗೆ ಉದ್ಯೋಗ ದೊರೆತಿಲ್ಲ!
ಯುವಜನರ ನಡುವೆ ನಿರುದ್ಯೋಗದ ಪ್ರಮಾಣ ದ್ವಿಗುಣಗೊಂಡಿದೆ, ಮತ್ತು ಪದವೀಧರರ ನಡುವೆ ಒಂದೂವರೆ ಪಟ್ಟಾಗಿದೆ.

"ಮಾನ್ಯ ಪ್ರಧಾನ ಮಂತ್ರಿ ಮೋದಿಯವರ ಅಡಿಯಲ್ಲಿ ಭಾರತ ಅತ್ಯಂತ ವೇಗದಲ್ಲಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯಾಗಿದೆ. ಆದರೂ ವಿರೋಧ ಪಕ್ಷಗಳವರು ದೇಶದ ಪ್ರಗತಿಯ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತ ಇರುವುದು ಕೇವಲ ಮತ್ಸರದಿಂದ" ಎಂದು ಮಾನ್ಯ ಹಣಕಾಸು ಮಂತ್ರಿಗಳು ಇತ್ತೀಚೆಗೆ ಸಂಸತ್ತಿನಲ್ಲಿ ಹೇಳಿರುವುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

"ನೀನು ರಾಷ್ಟ್ರೀಯ ಅರ್ಥವ್ಯವಸ್ಥೆಯ ಬಗ್ಗೆ ಆಡಿಕೊಳ್ಳುತ್ತೀಯಾ?"



"ನಾನು ಬಡವ ಅಷ್ಟೇ!

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ವಾಸ್ತವವಾಗಿ, ವಿರೋಧ ಪಕ್ಷಗಳವರು ಮಾತ್ರವಲ್ಲ, ರಿಝರ್ವ್ ಬ್ಯಾಂಕ್ ಸರ್ವೆ ಪ್ರಕಾರವೇ ಬಹಳಷ್ಟು ಮಂದಿ ಪ್ರಸಕ್ತ ಆರ್ಥಿಕ ಸನ್ನಿವೇಶದ ಬಗ್ಗೆ ನಕಾರಾತ್ಮಕ ಭಾವನೆ ಹೊಂದಿದ್ದಾರೆ. ಎರಡು ತಿಂಗಳಿಗೊಮ್ಮೆ ಅದು ನಡೆಸುವ ಬಳಕೆದಾರ ವಿಶ್ವಾಸ ಸರ್ವೆಯ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ ಸೂಚ್ಯಂಕ 83.5. ಸೂಚ್ಯಂಕ 100 ಕ್ಕಿಂತ ಕಡಿಮೆ ಇದ್ದರೆ ಅದರರ್ಥ ಜನಗಳಲ್ಲಿ ನಕಾರಾತ್ಮಕ ಭಾವನೆ ಇದೆ ಎಂದು. ಅದು ಮತ್ತೊಮ್ಮೆ ಈ ಅಂಕಿ–ಅಂಶಗಳಲ್ಲಿ ಪ್ರಕಟಗೊಂಡಿದೆ.

* 55.7%ಮಂದಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದಿದ್ದಾರೆ, ಅದು ಉತ್ತಮಗೊಂಡಿದೆ ಎಂದವರ ಪ್ರಮಾಣ ಕೇವಲ 28%.
* ಆದಾಯ ಇಳಿದಿದೆ ಎಂದವರ ಪ್ರಮಾಣ 32.9% ಮತ್ತು ಹೆಚ್ಚಿದೆ ಎಂದವರ ಪ್ರಮಾಣ 20.9%
* ಅಗತ್ಯ ವಸ್ತುಗಳ ಖರ್ಚುಗಳು ಹೆಚ್ಚಿವೆ ಎಂದವರ ಪ್ರಮಾಣ 84.7% ವಾದರೆ, ಅಗತ್ಯವಲ್ಲದ ಖರ್ಚುಗಳಾದರೂ ಇಳಿದಿವೆ ಎಂದವರ ಪ್ರಮಾಣ ಕೂಡ ಅರ್ಧಕ್ಕಿಂತ ಕಡಿಮೆ, 44%!

ಇಷ್ಟೇ ಅಲ್ಲ, ಈ ವರ್ಷ ವಿದೇಶಿ ಹೂಡಿಕೆದಾರರು (ಎಫ್‌ಪಿಐ) 16.58 ಶತಕೋಟಿ ಡಾಲರುಗಳಷ್ಟು, ಅಂದರೆ 1.22ಲಕ್ಷ ಕೋಟಿ ರೂ. ಗಳಷ್ಟು ತಮ್ಮ ಹೂಡಿಕೆಗಳನ್ನು ಭಾರತದ ಶೇರು ಮಾರುಕಟ್ಟೆಯಿಂದ ಹಿಂದಕ್ಕೆ ಪಡೆದಿದ್ದಾರೆ, ಕಳೆದ ಮೂರು ವರ್ಷಗಳಲ್ಲಿ ಈ ವಿದೇಶಿ ಹೂಡಿಕೆದಾರರು ಖರೀದಿಸಿದ್ದಕ್ಕಿಂತ ಮಾರಿದ್ದೇ ಹೆಚ್ಚು ಎಂದು ವರದಿಯಾಗಿದೆ.

ಮನೆಗೆಲಸದ ಕಾರ್ಮಿಕರು ಕನಿಷ್ಟ ಕೂಲಿ ಗಳಿಸಲು 6 ಮನೆಗಳಲ್ಲಿ ಕೆಲಸ ಮಾಡಬೇಕು

ಬೆಂಗಳೂರಿನ ಒಂದು ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ ಬೆಂಗಳೂರು ಮತ್ತು ಚೆನ್ನೈಗಳಲ್ಲಿ ಮನೆಗೆಲಸ ಮಾಡುವವರು ರಾಜ್ಯ ಸರಕಾರಗಳು ನಮೂದಿಸಿರುವ ಕನಿಷ್ಟ ಕೂಲಿಯನ್ನು ಗಳಿಸಬೇಕಾದರೆ ಆರು ಮನೆಗಳಲ್ಲಿ ಕೆಲಸ ಮಾಡಬೇಕು ಆದರೂ ಅವರನ್ನು ದುಡಿಸಿಕೊಳ್ಳುವವರಲ್ಲಿ ಬೆಂಗಳೂರಿನಲ್ಲಿ ಸರ್ವೆ ಮಾಡಿದವರಲ್ಲಿ 55% ದಷ್ಟು ಮತ್ತು ಚೆನ್ನೈನಲ್ಲಿ 51% ದಷ್ಟು ತಾವು ಚೆನ್ನಾಗಿಯೇ ಸಂಭಾವನೆ ಕೊಡುತ್ತಿದ್ದೇವೆ ಎಂದು ಭಾವಿಸಿದ್ದಾರೆ.

ಸರ್ವೆ ಮಾಡಿದ ಕೆಳ, ಮಧ್ಯಮ ಮತ್ತು ಉನ್ನತ ಆದಾಯದ ಕುಟುಂಬಗಳಲ್ಲಿ ಬೆಂಗಳೂರಿನಲ್ಲಿ 54%ದಷ್ಟು ಮತ್ತು ಚೆನ್ನೈನಲ್ಲಿ 32%ದಷ್ಟು ಮನೆಗೆಲಸದವರನ್ನು ಅವಲಂಬಿಸಿದ್ದಾರೆ. ಬೆಂಗಳೂರಿನಲ್ಲಿ ಮನೆಗೆಲಸದವರು ಪಡೆಯುವ ಸಂಬಳ 1000ರೂ.ನಿಂದ 10,000 ರೂ.ವರೆಗೆ ಮತ್ತು ಚೆನ್ನೈನಲ್ಲಿ 2000ದಿಂದ 13000ರೂ.

ಇದು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಹ್ಯೂಮನ್ ಸೆಟ್ಲ್‌ಮೆಂಟ್ಸ್ ನಡೆಸಿದ ಸರ್ವೆಯಲ್ಲಿ ಕಂಡು ಬಂದ ಸಂಗತಿಗಳು.

ಕೇಂದ್ರ ಸರಕಾರದ ನಿಯತಕಾಲಿಕ ಶ್ರಮಶಕ್ತಿ ಸರ್ವೆ(ಪಿಎಲ್‌ಎಫ್‌ಎಸ್) ಮನೆಗೆಲಸವನ್ನು "ಅನೌಪಚಾರಿಕ" ಎಂದು ವರ್ಗೀಕರಿಸಿದೆ. ಅದರ ಪ್ರಕಾರ ಮನೆಗೆಲಸದವರ ಅಧಿಕೃತ ಸಂಖ್ಯೆ 47.5 ಲಕ್ಷ. 31 ರಾಜ್ಯಗಳಲ್ಲಿ 10 ರಾಜ್ಯಗಳು ಮಾತ್ರ ಇವರನ್ನು ಕನಿಷ್ಟ ಕೂಲಿ ಶೆಡ್ಯೂಲಿನಲ್ಲಿ ಸೇರಿಸಿವೆ. ಈ ಎರಡು ರಾಜ್ಯಗಳು ಪ್ರಕಟಿಸಿರುವ ಕನಿಷ್ಟ ಕೂಲಿಗಳ ಪ್ರಕಾರ ಈ ಎರಡು ನಗರಗಳಲ್ಲಿ ಈ ಮನೆಗೆಲಸದವರು ಅಧಿಕೃತ ಕನಿಷ್ಟಕೂಲಿಯಷ್ಟು ಗಳಿಸಬೇಕಾದರೆ 6 ಕಡಿಮೆ–ಸಂಭಾವನೆ ಕೊಡುವ ಮನೆಗಳಲ್ಲಿ ಕೆಲಸ ಮಾಡಬೇಕು. ಆದರೆ ರಾಜ್ಯಮಟ್ಟದ ಕನಿಷ್ಟ ಕೂಲಿಗಳನ್ನು ಬೆಂಗಳೂರು, ಚೆನ್ನೈನಂತಹ ದುಬಾರಿ ಜೀವನದ ವೆಚ್ಚದ ಮಹಾನಗರಗಳಿಗೆ ಅನ್ವಯಿಸುವುದು ಸರಿಯಾಗಲಿಕ್ಕಿಲ್ಲ ಎಂದು ಈ ಸಂಸ್ಥೆ ದಿಲ್ಲಿಯಂತಹ ನಗರ–ರಾಜ್ಯದಲ್ಲಿನ ಕನಿಷ್ಟ ಕೂಲಿಯನ್ನು ಪರಿಗಣಿಸಿ ಇದನ್ನು ಗಳಿಸಲು 7–14 ಮನೆಗಳಲ್ಲಿ ಕೆಲಸ ಮಾಡಬೇಕಾಗುತ್ತದೆ ಎಂದು ಅಂದಾಜು ಮಾಡಿದೆ.



ಜಿ20 ಅಧ್ಯಕ್ಷಗಿರಿಯನ್ನು ಮೆರೆಸಲು ಬಡವರು ಅದೃಶ್ಯರಾಗಬೇಕೇ?

ಭಾರತದ ಜಿ20 ಅಧ್ಯಕ್ಷಗಿರಿಯ ಪ್ರಚಾರದ ಗೀಳು ವಿವಿಧ ರೂಪಗಳಲ್ಲಿ ಪ್ರಕಟವಾಗುತ್ತಿದೆ. ಜಿ20 ದೇಶಗಳ ಮೂರು ದಿನಗಳ ಮುಂಬೈ ಸಮಾವೇಶದ ಸಂದರ್ಭದಲ್ಲಿ ಅಲ್ಲಿನ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ಗುಂಟ ಇರುವ ಕೊಳೆಗೇರಿಗಳ ಮುಂದೆ ದೊಡ್ಡ ದೊಡ್ಡ ಪರದೆಗಳನ್ನು ನೇತು ಹಾಕಲಾಯಿತು ಮತ್ತು ಅವುಗಳ ಎದುರು ಜಿ20ರ ದೊಡ್ಡ ದೊಡ್ಡ ಬಹುವರ್ಣದ ಜಾಹೀರಾತು ಫಲಕಗಳನ್ನು ಸಾಲುಸಾಲಾಗಿ ಜೋಡಿಸಲಾಯಿತು ಎಂದು ವರದಿಯಾಗಿದೆ.

ಒಟ್ಟು ಉದ್ದೇಶ ದೇಶದ ಪ್ರಮುಖ ಮಹಾನಗರ ಮುಂಬೈಯ ಬಡವರು ವಿದೇಶಿ ಗಣ್ಯರ ದೃಷ್ಟಿಗೆ ಬೀಳಬಾರದು ಎಂಬುದೇ ಆಗಿರಬೇಕು ಎಂದು ಅಲ್ಲಿಯ ನಿವಾಸಿಗಳು ಹೇಳುತ್ತಿದ್ದಾರಂತೆ. ಹಿಂದೆ ಅಧ್ಯಕ್ಷ ಟ್ರಂಪ್‌ರವರ ಅಹಮದಾಬಾದ್ ಭೇಟಿ ಕಾಲದಲ್ಲಿ ಮಾಡಿದಂತೆ ಪಕ್ಕಾ ಗೋಡೆಯನ್ನೇ ಕಟ್ಟಿ, ಬಡತನವನ್ನು ಸಂಪೂರ್ಣ ಮರೆಮಾಡಬಹುದಾಗಿತ್ತು ಎಂದು ಕೆಲವು ಮುಂಬೈ ನಾಗರಿಕರು ಸಾಮಾಜಿಕ ಮಾಧ್ಯಮಗಳಲ್ಲಿ ಟಿಪ್ಪಣಿ ಮಾಡಿದ್ದಾರಂತೆ.

ಅಗ್ರ 50 ಉದ್ದೇಶ ಪೂರ್ಣ ಸುಸ್ತಿದಾರರ ಬಾಕಿ 92570 ಕೋಟಿ ರೂ.: 'ಮೆಹುಲ್ ಭಾಯ್' ನಂ. ಒನ್

ಬ್ಯಾಂಕುಗಳು 10.1 ಲಕ್ಷ ಕೋಟಿ ರೂ.ಗಳಷ್ಟು ಮೊತ್ತದ ಸಾಲಗಳನ್ನು ಬ್ಯಾಂಕ್ ಲೆಕ್ಕಪತ್ರಗಳಿಂದ ಹೊರಗಿಟ್ಟಿವೆ, ಅಂದರೆ ರೈಟ್–ಆಫ್ ಮಾಡಿವೆ ಎಂಬ ಮಾಹಿತಿ ನೀಡಿದ ನಂತರ ಸರಕಾರ ಲೋಕಸಭೆಗೆ ಇನ್ನೊಂದು ಮಾಹಿತಿ ನೀಡಿದೆ, ಅದರ ಪ್ರಕಾರ ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಬೇಕೆಂದೇ ತೀರಿಸದಿರುವ ಅಗ್ರ 50 ಸುಸ್ತಿದಾರರ ಒಟ್ಟು ಮೊತ್ತ 92570 ಕೋಟಿ ರೂ. ಇದರಲ್ಲಿ ಮೊದಲ ಸ್ಥಾನದಲ್ಲಿರುವವರು ಗೀತಾಂಜಲಿ ಜೆಮ್ಸ್‌ನ ಮಾಲಕ ವಜ್ರದ ವ್ಯಾಪಾರಿ ಮೆಹುಲ್ ಚೊಕ್ಸಿ. ಈತ ಬ್ಯಾಂಕಿಗೆ ವಂಚಿಸಿರುವ ಮೊತ್ತ ರೂ.7848 ಕೋಟಿ.

ಪ್ರಧಾನಿಗಳು ಸಮಾರಂಭವೊಂದರಲ್ಲಿ ಈತನನ್ನು ಪ್ರೀತಿಯಿಂದ ನಮ್ಮ ಮೆಹುಲ್ ಭಾಯ್ ಎಂದು ಕರೆದಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ವರಮಾನಗಳ ಅಸಮತೆ ಹೆಚ್ಚುವುದರಿಂದಾಗಿಯೇ ಸಂಪತ್ತಿನ ಅಸಮತೆಯೂ ಹೆಚ್ಚುತ್ತದೆ



ಸಂಪತ್ತಿನ ಅಸಮತೆಯ ಏಕಾಏಕಿ ಏರಿಕೆ ಕೇವಲ ಭಾರತದಂತಹ ದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಅಮೆರಿಕಾದಂತಹ ಶ್ರೀಮಂತ ದೇಶಗಳಲ್ಲೂ ಇದು ಕಾಣ ಬರುತ್ತಿದೆ. ಆದರೆ ಈ ದೇಶಗಳಲ್ಲಿನ ಹೆಚ್ಚಳವು ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳಲ್ಲಿ ಕಾಣುವ ಅಮತೆಯ ಏರಿಕೆಗಿಂತ ಕೆಳಮಟ್ಟದಲ್ಲಿದೆ. ಆದ್ದರಿಂದ ಇದು ನವ–ಉದಾರವಾದದಲ್ಲಿಯೇ ಅಂತರ್ಗತವಾಗಿರುವ ಸಂಗತಿ. ತಂತ್ರಜ್ಞಾನ–ಸಂರಚನೆಯ ಬದಲಾವಣೆಯಿಂದಾಗಿ ಹೆಚ್ಚುವ ಆರ್ಥಿಕ ಮಿಗುತಾಯದಲ್ಲಿ ಹೆಚ್ಚಿನದ್ದು ಬಂಡವಾಳದ ಪಾಲಾಗುವುದು, ಬಂಡವಾಳದ ಕೇಂದ್ರೀಕರಣ ಮತ್ತು ಉತ್ಪಾದಕ ಆಸ್ತಿಗಳ ಬಲವಂತದ ಸ್ವಾಧೀನದಿಂದ ವರಮಾನಗಳ ಅಸಮತೆ ಸಂಪತ್ತಿನ ಅಸಮತೆಯನ್ನೂ ತರುತ್ತದೆ. ಸಂಪತ್ತಿನ ಅಸಮತೆಯನ್ನು ಉದ್ದೇಶಪೂರ್ವಕವಾಗಿ ಹೆಚ್ಚಿಸುವ ಎಲ್ಲಾ ವಿಧಾನಗಳೂ ನವ–ಉದಾರವಾದದ ಆಳ್ವಿಕೆಯಲ್ಲಿ ಉತ್ತೇಜನ ಪಡೆಯುತ್ತವೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್



ನವ–ಉದಾರವಾದಿ ಆಳ್ವಿಕೆಯಲ್ಲಿ ವರಮಾನ ಮತ್ತು ಸಂಪತ್ತಿನ ಅಸಮಾನತೆಗಳು ಏಕಾಏಕಿಯಾಗಿ ಹೆಚ್ಚುತ್ತಿವೆ ಎಂಬ ಅಂಶದ ಬಗ್ಗೆ ವಿವಾದವಿಲ್ಲ. ಫ್ರೆಂಚ್ ಅರ್ಥಶಾಸ್ತ್ರಜ್ಞ ಥಾಮಸ್ ಪಿಕೆಟ್ಟಿ ಅವರ ತಂಡದ ಅಧ್ಯಯನವು ಅಸಮತೆಗಳು ಹೆಚ್ಚುತ್ತಿವೆ ಎಂಬುದನ್ನು ಖಾತ್ರಿಪಡಿಸುತ್ತದೆ. ಒಂದು ದೇಶದ ಜನಸಂಖ್ಯೆಯ ಮೇಲ್ತುದಿಯ ಶೇಕಡಾ ಒಂದರಷ್ಟು ಮಂದಿಯು ಆ ದೇಶದ ರಾಷ್ಟ್ರೀಯ ಆದಾಯದಲ್ಲಿ ಹೊಂದಿರುವ ಪಾಲನ್ನು ನಿರ್ಣಯಿಸಲು ಪಿಕೆಟ್ಟಿ ತಂಡವು ಆದಾಯ ತೆರಿಗೆ ದತ್ತಾಂಶವನ್ನು ಬಳಸಿಕೊಳ್ಳುತ್ತದೆ. ಈ ರೀತಿಯ ಅಂದಾಜುಗಳನ್ನು ಮಾಡಲು ಅವರು ಅನುಸರಿಸುವ ಈ ವಿಧಾನದ ಬಗ್ಗೆ ಆಕ್ಷೇಪಣೆಗಳಿರಬಹುದು. ಆದರೆ, ಅವರ ಈ ಅಧ್ಯಯನದಿಂದ ಹೊರಹೊಮ್ಮಿದ ಅಂಕಿ–ಅಂಶಗಳು ಮಾತೇ ಹೊರಡದಷ್ಟು ಗಂಭೀರವಾಗಿವೆ. ಉದಾಹರಣೆಗೆ, ಪಿಕೆಟ್ಟಿ ಮತ್ತು ಚಾನ್ಸೆಲ್ ಅವರ ತಂಡವು, 1982ರಲ್ಲಿ ಭಾರತದ ರಾಷ್ಟ್ರೀಯ ಆದಾಯದಲ್ಲಿ ಕೇವಲ ಶೇ.6ರಷ್ಟು ಪಾಲನ್ನು ಹೊಂದಿದ್ದ ಮೇಲ್ತುದಿಯ ಶೇ. ಒಂದರಷ್ಟು ಮಂದಿಯು 2013ರಲ್ಲಿ ಶೇ. 22ಕ್ಕಿಂತಲೂ ಹೆಚ್ಚು ಪಾಲನ್ನು ಹೊಂದಿದ್ದರು ಎಂಬುದನ್ನು ಪತ್ತೆ ಹಚ್ಚಿದ್ದಾರೆ. ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ಭಾರತದಲ್ಲಿ ಆದಾಯತೆರಿಗೆಯನ್ನು 1922 ರಲ್ಲಿ ಜಾರಿಗೊಳಿಸಿದಾಗಿನಿಂದ ಹಿಡಿದು, ಅಂಕಿ–ಅಂಶಗಳು ಲಭ್ಯವಿರುವ 2013ರ ವರೆಗಿನ ಅವಧಿಯಲ್ಲಿ ಇದು ಅತ್ಯಂತ ಹೆಚ್ಚಿನ ಪಾಲು.

ವರಮಾನಗಳ ಅಸಮತೆಯ ಈ ರೀತಿಯ ಹೆಚ್ಚಳದ ಬಗ್ಗೆ ಪಿಕೆಟ್ಟಿಯವರು ಕೊಡುವ ಸೈದ್ಧಾಂತಿಕ ವಿವರಣೆಯು ಸಂಪೂರ್ಣವಾಗಿ ಸಮರ್ಥನೀಯವಲ್ಲ. ಏಕೆಂದರೆ ಅವರ ವಿವರಣೆಯು, ಬಂಡವಾಳಶಾಹಿ ಅರ್ಥವ್ಯವಸ್ಥೆಯು ಸದಾ ಪೂರ್ಣ ಉದ್ಯೋಗದ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬ ಪೂರ್ವಕಲ್ಪನೆಯನ್ನು ಆಧರಿಸಿದೆ. ಅನುಭವದ ಆಧಾರದಲ್ಲಿ ಹೇಳುವುದಾದರೆ ಈ ಭಾವನೆ ಸುಳ್ಳು ಮಾತ್ರವಲ್ಲ ತರ್ಕದ ದೃಷ್ಟಿಯಲ್ಲೂ ಅದು ದೋಷಪೂರಿತವಾಗಿದೆ. ಏಕೆಂದರೆ, ಪೂರ್ಣ ಉದ್ಯೋಗದ ಪರಿಸ್ಥಿತಿ ಇರುವಲ್ಲಿ ಉತ್ಪಾದನೆಯನ್ನು ಒಂದು ಶಿಸ್ತಿಗೊಳಪಡಿಸುವ ಒಂದು ಏರ್ಪಾಟು ಅರ್ಥವ್ಯವಸ್ಥೆಯಲ್ಲಿ ಇಲ್ಲದಾಗುತ್ತದೆ. ಅದೇನೇ ಇರಲಿ, ಆದಾಯಗಳ ಅಸಮತೆಯ ಹೆಚ್ಚಳಕ್ಕೆ ಸೈದ್ಧಾಂತಿಕ ವಿವರಣೆ ಕೊಡಲು ಬಹಳೇನೂ ಹುಡುಕಾಡುವ ಅವಶ್ಯಕತೆಯಿಲ್ಲ. ಅದನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ನವ–ಉದಾರವಾದಿ ಅರ್ಥವ್ಯವಸ್ಥೆಯಲ್ಲಿ ತಂತ್ರಜ್ಞಾನ–ಸಂರಚನಾತ್ಮಕ ಬದಲಾವಣೆಗಳಿಗೆ ಸಂಬಂಧಿಸಿದ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕುವುದರಿಂದಾಗಿ ಕಾರ್ಮಿಕರ ಉತ್ಪಾದಕತೆಯ ಬೆಳವಣಿಗೆಯ ದರ ಹೆಚ್ಚುತ್ತದೆ. ಜಿಡಿಪಿಯ ಹೆಚ್ಚಳ ಎಷ್ಟೇ ಇದ್ದರೂ, ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಮತ್ತು ಶ್ರಮಶಕ್ತಿಯ ಸ್ವಾಭಾವಿಕ ಬೆಳವಣಿಗೆಯ ದರಕ್ಕೆ ಹೋಲಿಸಿದರೆ, ಉದ್ಯೋಗಗಳ ಬೆಳವಣಿಗೆಯ ದರ ಇಳಿಕೆಯಾಗಿರುತ್ತದೆ. ಹಾಗಾಗಿ, ಕಾರ್ಮಿಕರ ಸಂಖ್ಯೆಗೆ ಹೋಲಿಸಿದರೆ, ಕಾರ್ಮಿಕ ಮೀಸಲು ಪಡೆಯ ಗಾತ್ರವು ಸಾಪೇಕ್ಷವಾಗಿ ದೊಡ್ಡದಾಗಿರುತ್ತದೆ. ಶ್ರಮದ ಉತ್ಪಾದಕತೆಯ ಬೆಳವಣಿಗೆಯ ಹೆಚ್ಚಳದಿಂದಾಗಿ ಒಟ್ಟು ಉತ್ಪಾದನೆಯಲ್ಲಿ ಮಿಗುತಾಯದ ಪಾಲು ಹೆಚ್ಚುತ್ತಿದ್ದರೂ ಸಹ, ಕಾರ್ಮಿಕರ ನಿಜ ವೇತನವನ್ನು ಒಂದು ಬದುಕುಳಿಯಲು ಸಾಲುವಷ್ಟೇ ಮಟ್ಟಕ್ಕೆ ಮಿತಿಗೊಳಿಸಲಾಗುತ್ತದೆ. ಆದ್ದರಿಂದ, ಆದಾಯಗಳ ಅಸಮತೆಯ ಮಟ್ಟ ಹೆಚ್ಚುತ್ತದೆ. ಪಿಕೆಟ್ಟಿ ತಂಡವು ಪತ್ತೆಹಚ್ಚಿದ ವೈಯಕ್ತಿಕ ಆದಾಯಗಳ ಅಸಮತೆಯ ಹೆಚ್ಚಳವು ನವ–ಉದಾರವಾದವು ಹೇರಿದ ವರ್ಗಆದಾಯ ಅಸಮತೆಯ ಈ ರೀತಿಯ ಹೆಚ್ಚಳದಲ್ಲಿ ಬೇರೂರಿದೆ. (ಶ್ರಮ ಶಕ್ತಿಯ ಮೇಲಿನ ವೆಚ್ಚಗಳ ಉಳಿತಾಯಕ್ಕಾಗಿಯೇ ತಂತ್ರಜ್ಞಾನದ ಬಳಕೆ ಮಾಡುವುದರಿಂದಾಗಿ, ಅದರ ಫಲವಾಗಿ ಹೆಚ್ಚುವ ಕಾರ್ಮಿಕರ ಉತ್ಪಾದಕತೆಯ ಹೆಚ್ಚಳದ ಪರಿಣಾಮವಾಗಿಯೇ ಉದ್ಯೋಗಗಳ ಕುಸಿತ ಉಂಟಾಗುತ್ತದೆ. ('ಕುರುಡು ಕಾಂಚಾಣ' ಅಂಕಣ ಲೇಖನ – ಜನಶಕ್ತಿ, ಸಂಚಿಕೆ 52– ಓದಿ).

ಇದೇ ರೀತಿಯಲ್ಲಿ, ನವ–ಉದಾರವಾದದ ಅಡಿಯಲ್ಲಿ, ಸಂಪತ್ತಿನ ಅಸಮತೆಯ ಏಕಾಏಕಿ ಹೆಚ್ಚಳವು ಜಾಗತಿಕ ದಕ್ಷಿಣ ದೇಶಗಳಲ್ಲೂ ಕಂಡುಬಂದಿದೆ. 2000 ಮತ್ತು 2021ರ ನಡುವೆ, ಕ್ರೆಡಿಟ್ ಸ್ವೂಸೆ ದತ್ತಾಂಶದ ಪ್ರಕಾರ, ಅಮೇರಿಕಾದಲ್ಲಿಯೂ ಸಂಪತ್ತಿನ ಅಸಮತೆ ಹೆಚ್ಚಿದೆ. ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳಿಗೆ ಹೋಲಿಸಿದರೆ ಅಮೇರಿಕಾದ ಹೆಚ್ಚಳವು ಕೆಳ ಮಟ್ಟದಲ್ಲಿದೆ. ಸಂಪತ್ತಿನ ಅಸಮತೆಯ ಅಂದಾಜುಗಳು ನಂಬಲರ್ಹವಲ್ಲ ಎಂಬುದು ನಿಜವೇ. ಏಕೆಂದರೆ, ಅವು ಷೇರುಮಾರುಕಟ್ಟೆಯ ಏರಿಳಿತಗಳಿಂದ ಪ್ರಭಾವಿತವಾಗಿರುತ್ತವೆ. ಆಸ್ತಿಗಳ ಭೌತಿಕ ಬೆಲೆಗಳು ಏರಿಕೆಯಾಗದಿದ್ದರೂ ಸಹ, ಷೇರು ಮಾರುಕಟ್ಟೆಯು ಭರಾಟೆಯಲ್ಲಿದ್ದಾಗ ಒಟ್ಟು ಸಂಪತ್ತಿನ ಅಂದಾಜು ಕೃತಕವಾಗಿ ಉಬ್ಬಿಕೊಂಡಿರುತ್ತದೆ ಮಾತ್ರವಲ್ಲ, ಶ್ರೀಮಂತರು ಷೇರುಮಾರುಕಟ್ಟೆಯಲ್ಲಿ ಹೆಚ್ಚು ಸಕ್ರಿಯರಾಗಿರುವುದರಿಂದ, ಅವರ ಸಂಪತ್ತಿನ ಪಾಲು ಹೆಚ್ಚುತ್ತದೆ ಕೂಡ. ಈ ವಿದ್ಯಮಾನವು ಸಂಪತ್ತಿನ ಅಸಮತೆಯ ಹೆಚ್ಚಳವನ್ನು ತೋರಿಸುತ್ತದೆ. ಆದರೆ, ಷೇರುಮಾರುಕಟ್ಟೆಯ ಕುಸಿತದ ಅವಧಿಯಲ್ಲಿ ಈ ಸಂಪತ್ತಿನ ಮೌಲ್ಯವು ಕುಸಿದಿರುತ್ತದೆ. ತನ್ನ ಜನಸಂಖ್ಯೆಯ ಅಗ್ರ ಶೇ.ಒಂದರಷ್ಟು ಮಂದಿಯು ರಾಷ್ಟ್ರೀಯ ಆದಾಯದಲ್ಲಿ 2000 ರಲ್ಲಿ ಹೊಂದಿದ್ದ ಶೇ.32 ಪಾಲು 2021 ರ ವೇಳೆಗೆ ಶೇ.40.6ಕ್ಕೆ ಏರಿಕೆಯಾಗಿದೆ ಎಂಬುದನ್ನು ಭಾರತವು ತೋರಿಸುತ್ತಿರುವಾಗ ಮತ್ತು 2000 ಇಸವಿಯಲ್ಲಿದ್ದ ಇದೇ ಈ ಪಾಲು ಶೇ.43ರಿಂದ 2021ರ ವೇಳೆಗೆ ಶೇ.49.3ಕ್ಕೆ ಏರಿಕೆಯಾಗಿದೆ ಎಂಬುದನ್ನು ಬ್ರೆಜಿಲ್ ತೋರಿಸುತ್ತಿರುವಾಗ, ಈ ಹೆಚ್ಚಳವನ್ನು ಆಸ್ತಿಗಳ ಮಾರಾಟದಿಂದ ಗಳಿಸಿದ ಕ್ಷಣಿಕ ಲಾಭವೆಂದು ವಿವರಿಸಲಾಗದು. ಕೆಲವು ಮೂಲಭೂತ ಅಂಶಗಳು ಇಲ್ಲಿ ಕಾರ್ಯಪ್ರವೃತ್ತವಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

ವರಮಾನಗಳ ಅಸಮತೆ ಮತ್ತು ಮಿಗುತಾಯದ ಹೆಚ್ಚಳ

ಅಂತಹ ಒಂದು ಮೂಲಭೂತ ಅಂಶವೆಂದರೆ, ವರಮಾನಗಳ ಅಸಮತೆಯ ಹೆಚ್ಚಳದ ಬೇರು ಉತ್ಪಾದನೆಯಲ್ಲಿ ಆರ್ಥಿಕ ಮಿಗುತಾಯದ ಪಾಲಿನ ಹೆಚ್ಚಳದಲ್ಲಿ ಊರಿದೆ ಎಂಬುದು. ಆಸ್ತಿಗಳ ಮಾರಾಟದ ಮೂಲಕ ಗಳಿಸುವ ತಾತ್ಕಾಲಿಕ ಲಾಭಗಳ ಸಂಗ್ರಹವನ್ನು ಬದಿಗಿಟ್ಟರೆ, ಸಂಪತ್ತಿನ ಯಾವುದೇ ಏರಿಕೆಯು ಉಳಿತಾಯದ ಮೂಲಕ ಸಂಭವಿಸುತ್ತದೆ. ಮೇಲ್ನೋಟದಲ್ಲಿ ಇದು ವಿಚಿತ್ರವಾಗಿ ತೋರಬಹುದು. ಭೌತಿಕ ಸ್ವತ್ತುಗಳಲ್ಲಿ ಹೂಡಿಕೆ ಮಾಡುವುದರಿಂದ ಮಾತ್ರ ಸಂಪತ್ತಿನ ಹೆಚ್ಚಳ ಸಂಭವಿಸುತ್ತದೆ ಎಂದು ಭಾವಿಸಬಹುದು.

ಆದರೆ, ಹೂಡಿಕೆಯ ಮೂಲಕ ಉಳಿತಾಯವೂ ಉಂಟಾಗಬಹುದು. ಮತ್ತು ಉಳಿತಾಯದ ಮೂಲಕವೂ ಸಂಪತ್ತಿನ ಹೆಚ್ಚಳವಾಗಬಹುದು. ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ದೇಶವು ಹೂಡಿಕೆ ಮಾಡದಿದ್ದರೂ ಸಹ, ಅದು ತನ್ನ ಉಳಿತಾಯಗಳನ್ನು ಬೇರೆ ದೇಶಗಳಿಗೆ ಸಾಲವಾಗಿ ನೀಡಿದರೆ, ಆ ದೇಶಗಳ ಮೇಲಿನ ದಾವೆಯ ರೂಪದಲ್ಲಿ ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತದೆ. ರಾಷ್ಟ್ರೀಯ ವರಮಾನದಲ್ಲಿ ಶ್ರೀಮಂತರ ಪಾಲು ಹೆಚ್ಚಿದಾಗ, ಬಡವರಿಗಿಂತ ಹೆಚ್ಚಿನ 'ಆದಾಯವನ್ನು ಶ್ರೀಮಂತರು ಉಳಿತಾಯ ಮಾಡುವುದರಿಂದ, ದೇಶದ ಒಟ್ಟು ಉಳಿತಾಯದಲ್ಲಿ ಶ್ರೀಮಂತರ ಪಾಲು ಇನ್ನೂ ವೇಗವಾಗಿ ಹೆಚ್ಚಾಗುತ್ತದೆ. ಇದು ಏನನ್ನು ಅರ್ಥೈಸುತ್ತದೆ ಎಂದರೆ, ಒಂದು ದೇಶದ ಸಂಪತ್ತಿನ ಹೆಚ್ಚಳದಲ್ಲಿ ಶ್ರೀಮಂತರ ಪಾಲು ಮೂಲತಃ ಇದ್ದುದಕ್ಕಿಂತಲೂ ಹೆಚ್ಚಾಗುತ್ತದೆ ಎಂಬುದು. ಅಂದರೆ, ಒಂದು ದೇಶದ ಒಟ್ಟು ಸಂಪತ್ತಿನಲ್ಲಿ ಶ್ರೀಮಂತರ ಪಾಲು ಹೆಚ್ಚುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ವರಮಾನಗಳ ಅಸಮತೆ ಹೆಚ್ಚುವುದರಿಂದಾಗಿಯೇ ಸಂಪತ್ತಿನ ಅಸಮತೆಯೂ ಹೆಚ್ಚುತ್ತದೆ.

"ಬಂಡವಾಳದ ಕೇಂದ್ರೀಕರಣ" ಮತ್ತು ಸಂಪತ್ತಿನ ಕೇಂದ್ರೀಕರಣ

ಸಂಪತ್ತಿನ ಅಸಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಎರಡನೆಯ ಅಂಶವೆಂದರೆ, ಯಾವ ಪ್ರಕ್ರಿಯೆಯನ್ನು "ಬಂಡವಾಳದ ಕೇಂದ್ರೀಕರಣ" ಎಂದು ಮಾರ್ಕ್ಸ್ ಕರೆದಿದ್ದರೊ ಅದೇ ಪ್ರಕ್ರಿಯೆಯೇ. ತಂತ್ರಜ್ಞಾನದ ಆವಿಷ್ಕಾರಗಳು ಮತ್ತು ಸಂರಚನೆಯಲ್ಲಿನ ಬದಲಾವಣೆಗಳಿಂದಾಗಿ, ಒಂದು ವ್ಯವಹಾರೋದ್ದಿಮೆಯು ಕಾಲಾನಂತರದಲ್ಲಿ ಸಣ್ಣ ಬಂಡವಾಳದಿಂದ ದೊಡ್ಡ ಬಂಡವಾಳಕ್ಕೆ ಬದಲಾಗುತ್ತದೆ. ಇದು ಸಂಭವಿಸಲು ಕಾರಣ, ಕಾಲಾನಂತರದಲ್ಲಿ ಲಭ್ಯವಾಗುವ ಹೊಸ ಪ್ರಕ್ರಿಯೆಗಳು ಮತ್ತು ಉತ್ಪನ್ನಗಳನ್ನು ಬಳಕೆಗೆ ತರಲು ದೊಡ್ಡಗಾತ್ರದ ಬಂಡವಾಳವೇ ಬೇಕಾಗುತ್ತದೆ. ಅದಕ್ಕಾಗಿ, ಉದ್ದಿಮೆಯು ಕಾಲಾನಂತರದಲ್ಲಿ ಸಣ್ಣ ಬಂಡವಾಳದಿಂದ ದೊಡ್ಡ ಬಂಡವಾಳಕ್ಕೆ ಪಲ್ಲಟಗೊಳ್ಳಬೇಕಾಗುತ್ತದೆ. ಈ ರೀತಿಯ ಪಲ್ಲಟವು, ಮೇಲೆ ಚರ್ಚಿಸಿದಂತೆ, ಒಟ್ಟು ಉತ್ಪಾದನೆಯಲ್ಲಿ ಆರ್ಥಿಕ ಮಿಗುತಾಯದ ಪಾಲು ಹೆಚ್ಚುವ ರೀತಿಯಲ್ಲೇ ಸಂಭವಿಸುತ್ತದೆ ಮತ್ತು ನಿಖರವಾಗಿ ಅದೇ ಪರಿಣಾಮವನ್ನು ಬೀರುತ್ತದೆ: ವ್ಯವಹಾರೋದ್ದಿಮೆಯು ಸಣ್ಣ ಬಂಡವಾಳದಿಂದ ದೊಡ್ಡ ಬಂಡವಾಳಕ್ಕೆ ಪಲ್ಲಟ ಹೊಂದುವ ರೀತಿಯಲ್ಲೇ ಲಾಭಗಳ ವಿತರಣೆಯಲ್ಲೂ ಬದಲಾವಣೆ ಇರುತ್ತದೆ. (ಅಂದರೆ, ಸಣ್ಣ ಬಂಡವಾಳವು ವ್ಯವಹಾರದಲ್ಲಿ ಬಚಾವಾಗಿ ಮುಂದುವರೆದರೆ, ಅದು ತನ್ನ ಲಾಭದಿಂದ ಮಾಡುವ ಉಳಿತಾಯದ ಪ್ರಮಾಣವು ಸಣ್ಣದಿರುತ್ತದೆ; ಮತ್ತು ಒಂದು ವೇಳೆ ಅದನ್ನು ಸಂಪೂರ್ಣವಾಗಿ ಹೊಸಕಿಹಾಕಿದರೆ, ಅದರ ಸಂಪೂರ್ಣ ಲಾಭವನ್ನು ದೊಡ್ಡ ಬಂಡವಾಳವು ವಶಪಡಿಸಿಕೊಳ್ಳುತ್ತದೆ). ಒಟ್ಟಿನಲ್ಲಿ, ಉಳಿತಾಯದ ಪ್ರಮಾಣವು ಸಣ್ಣ ಬಂಡವಾಳಕ್ಕಿಂತ ದೊಡ್ಡ ಬಂಡವಾಳಕ್ಕೆ ಹೆಚ್ಚಿನದಿರುತ್ತದೆ. ಈ ಕಾರಣದಿಂದಾಗಿ ಮತ್ತು ಉತ್ಪತ್ತಿಯಲ್ಲಿ ಉಳಿತಾಯದ ಪಾಲು ಹೆಚ್ಚುವ ಅಂಶದಿಂದಾಗಿ, ಒಟ್ಟು ಉಳಿತಾಯದಲ್ಲಿ ಅಗ್ರ ಶೇ.ಒಂದರಷ್ಟು ಮಂದಿಯ ಪಾಲು ಹೆಚ್ಚುತ್ತದೆ ಮತ್ತು ಒಟ್ಟು ಸಂಪತ್ತಿನ ಅಸಮತೆಯ ಅಂತರವೂ ಹೆಚ್ಚುತ್ತದೆ. ಹಾಗಾಗಿ, ಸಂಪತ್ತಿನ ಕೇಂದ್ರೀಕರಣವು ಬಂಡವಾಳದ ಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿದೆ ಎಂಬುದಂತೂ ನಿಸ್ಸಂಶಯವೇ.

ಪುಟ 15 ಕ್ಕೆ

ಪೆರು: ‘ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ’ ಮತ್ತು ರಾಜಕೀಯ ಬಿಕ್ಕಟ್ಟು

ಬ್ರೆಜಿಲ್ ನಲ್ಲಿ ಎಡಪಂಥೀಯ ಸರಕಾರದ ವಿರುದ್ಧ ಯು.ಎಸ್ ಪ್ರಯೋಗ ಮಾಡಿದ ಕಾನೂನು ಬಾಹಿರ ‘ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ’ ತಂತ್ರ ರಿವರ್ಸ್ ಹೊಡೆದಿದೆ. ಅದನ್ನೇ ಪೆರುವಿನಲ್ಲಿ ಪ್ರಯೋಗಿಸಲಾಗಿದೆ. ಇಲ್ಲಿ ಇನ್ನೂ ಬೇಗ ರಿವರ್ಸ್ ಹೊಡೆಯುವ ಸಾಧ್ಯತೆಗಳಿವೆ.



ವಸಂತರಾಜ ಎನ್.ಕೆ

ಪೆರುವಿನ ರಾಜಕೀಯ ಬಿಕ್ಕಟ್ಟು ತೀವ್ರವಾಗುತ್ತಾ ನಡೆದಿದೆ. ಕಳೆದ ಎರಡು ವಾರಗಳಿಂದ ಪದಚ್ಯುತರಾದ ಅಧ್ಯಇಕ್ಷ ಪೆದ್ರೊ ಕ್ಯಾಸ್ಟಿಲೊ ಬೆಂಬಲಿಗರು ದಂಗೆ ಎದ್ದಿದ್ದಾರೆ. ಪಾರ್ಲಿಮೆಂಟ್ ನೇಮಿಸಿದ ಅಧ್ಯಕ್ಷ ದೀನಾ ಅವರನ್ನು ವಜಾ ಮಾಡಬೇಕು. ಚುನಾಯಿತ ಅಧ್ಯಬಕ್ಷ ಪೆದ್ರೊ ಕ್ಯಾಸ್ಟಿಲೊ ಅವರನ್ನು ಅಧ್ಯಕ್ಷ–ಸ್ಥಾನಕ್ಕೆ ಮರಳಿಸಬೇಕು. ಪಾರ್ಲಿಮೆಂಟನ್ನು ವಿಸರ್ಜಿಸಿ ಚುನಾವಣೆ ನಡೆಯಬೇಕು. ಅದರ ಜತೆಗೆ ಅಲ್ಬರ್ಟೊ ಫುಜಿಮೊರಿ ಸರ್ವಾಧಿಕಾರಿ ಆಡಳಿತದ (1990–2000) ಕಾಲದಲ್ಲಿ ರಚಿಸಲಾದ 1993ರ ಸಂವಿಧಾನವನ್ನು ರದ್ದು ಮಾಡಿ ಹೊಸ ಸಂವಿಧಾನ ರಚಿಸಲು ಸಂವಿಧಾನ ಸಭೆಗೂ ಚುನಾವಣೆ ನಡೆಯಬೇಕು ಎಂಬುದು ಪೆದ್ರೊ ಬೆಂಬಲಿಗರ ಹಕ್ಕೊತ್ತಾಯಗಳು. ಇವಕ್ಕೆ ಒತ್ತಾಯಿಸಿ ಪ್ರತಿ ದಿನ ಹತ್ತಾರು ಸಾವಿರಾರು ಜನ ಭಾಗವಹಿಸಿದ ಪ್ರತಿಭಟನೆಗಳು ದೇಶದಾದ್ಯಂತ ನಡೆಯುತ್ತಿದೆ. ಇದರಲ್ಲಿ ಕಾರ್ಮಿಕ, ರೈತ, ಕೃಷಿ ಕೂಲಿಕಾರರ, ವಿದ್ಯಾರ್ಥಿಗಳ ಸಂಘಟನೆಗಳು ಸಕ್ರಿಯ ಪಾತ್ರ ವಹಿಸುತ್ತಿವೆ. ಇದನ್ನು ಹತ್ತಿಕ್ಕಲು ತೀವ್ರ ಹಿಂಸಾತ್ಮಕ ದಮನಕ್ರಮಗಳನ್ನು ಸರಕಾರ ಬಳಸುತ್ತಿದೆ. ಪೋಲಿಸ್ ಅಲ್ಲದೆ ಮಿಲಿಟರಿ ಪಡೆಗಳನ್ನು ಕರೆದಿದ್ದು ಅವು ಅಶ್ರು?ವಾಯು, ಮದ್ದು–ಗುಂಡುಗಳನ್ನು ಎಗ್ಗಿಲ್ಲದೆ ಬಳಸುತ್ತಿವೆ. ಡಿಸೆಂಬರ್ 12ರಂದು ‘ತುರ್ತು ಪರಿಸ್ಥಿತಿ’ಯನ್ನು ಘೋಷಿಸಿ ಪ್ರತಿಭಟನೆ, ಪ್ರದರ್ಶನ, ಸಭೆಗಳನ್ನು ನಿ?ಏಧಿಸಲಾಗಿದೆ. ಹಲವಾರು ಕಡೆ ಪ್ರಯಾಣ, ವಾಹನಗಳ ಮೇಲೆ ನಿರ್ಬಂಧ ಹೇರಲಾಗಿದೆ. ಪೆರುವಿನ ರಾಷ್ಟ್ರೀಯ ಮಾನವ ಹಕ್ಕು ಸಂಯೋಜಕರ ವರದಿಯ ಪ್ರಕಾರವೇ ಹಲವು ಮಕ್ಕಳನ್ನು ಸೇರಿದಂತೆ 27 ಜನ ಸತ್ತಿದ್ದಾರೆ. 60 ಜನ ಗಂಭೀರ ಮಾರಣಾಂತಿಕ ಗಾಯಗಳೊಂದಿಗೆ ಆಸ್ಪತ್ರೆ ಸೇರಿದ್ದಾರೆ. 113 ಬಂಧನಗಳನ್ನು ಮಾಡಲಾಗಿದೆ. ವಾಸ್ತವದಲ್ಲಿ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿರುವ ಸಂಭವವೇ ಹೆಚ್ಚು. ಒಟ್ಟಾರೆಯಾಗಿ ಪೆರು ವಿನಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಇದಕ್ಕೆ ತಕ್ಷಣದ ಪ್ರಚೋದನೆ ದೊರಕಿದ್ದು ಡಿಸೆಂಬರ್ 7 ರ ರಾಜಕೀಯ ಘಟನೆಗಳಿಂದ.

ಪೆದ್ರೊ ಪದಚ್ಯುತಿ

ಡಿಸೆಂಬರ್ 7 ರಂದು ನಡೆದಿದ್ದಾರೂ ಏನು? ಗ್ರಾಮೀಣ ಪ್ರದೇಶದ ಬಡ ಶಾಲಾಶಿಕ್ಷಕರ ಯೂನಿಯನ್ ನಾಯಕರಾಗಿದ್ದ ಪೆರುವಿನ ಜನಪ್ರಿಯ ಅಧ್ಯಕ್ಷ ಪೆದ್ರೊ ಕ್ಯಾಸ್ಟಿಲೊ ಅವರನ್ನು ಡಿಸೆಂಬರ್ 7ರಂದು ಪದಚ್ಯುತಿ ಮಾಡಲಾಯಿತು. ಇದಕ್ಕೆ ಮುಂಚೆ ಮತ್ತು ನಂತರ ಆ ದಿನದ ಘಟನಾವಳಿ ನೋಡೋಣ. ಡಿಸೆಂಬರ್ 7 ರಂದು ಬೆಳಿಗ್ಗೆ ಪೆದ್ರೊ ತಾವು ಪಾರ್ಲಿಮೆಂಟನ್ನು ವಿಸರ್ಜಿಸಿ ‘ತುರ್ತು ಪರಿಸ್ಥಿತಿ ಸರಕಾರ’ ರಚಿಸುವುದಾಗಿ ಘೋಷಿಸುತ್ತಾರೆ. ಅದೇ ದಿನ ಪೆದ್ರೊ ವಿರುದ್ಧ (ಕಳೆದ ಒಂದುವರೆ ವರ್ಷದಲ್ಲಿ ಮೂರನೆಯ ಬಾರಿ ತರಲಾದ) ದೋಷಾರೋಪಣೆ ಅಭಿಯೋಗದ ಮೇಲೆ ಪಾರ್ಲಿಮೆಂಟಿನಲ್ಲಿ ಮತದಾನವಾಗುವುದಿತ್ತು. ಆ ಮತದಾನ ನಡೆದು ಪಾರ್ಲಿಮೆಂಟ್ ಅಧ್ಯ)ಕ್ಷರನ್ನು ಪದಚ್ಯುತಗೊಳಿಸುತ್ತದೆ. ಕೂಡಲೇ (ಅವರ ಜತೆಗೆ ಆಯ್ಕೆಯಾದ) ಉಪಾಧ್ಯಕ್ಷ ದಿನಾ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಗುತ್ತದೆ. ಪೆದ್ರೊ ಅವರನ್ನು ‘ಸಾಂವಿಧಾನಿಕ ವ್ಯವಸ್ಥೆಯ ಉಲ್ಲಂಘನೆ’ಯ ಆಪಾದನೆ ಮೇಲೆ ಕ್ರಿಮಿನಲ್ ಪ್ರಕರಣದಲ್ಲಿ ಬಂಧಿಸಲಾಗುತ್ತದೆ. ಅವರನ್ನು ಒಂದು ವಾರದ ವರೆಗೆ ಜೈಲಿಗೆ ಕಳಿಸಲಾಗುತ್ತದೆ. ಅದನ್ನು ಮುಂದೆ ವಿಸ್ತರಿಸುತ್ತಾ ಹೋಗಿ, ಡಿ.15ರಂದು 18 ತಿಂಗಳ ಜೈಲುವಾಸ ವಿಧಿಸಲಾಗುತ್ತದೆ. ಡಿ.7ರ ಈ ಘಟನೆಗಳನ್ನಷ್ಟೇ ನೋಡಿದರೆ ಅಧ್ಯಕ್ಷ ಪೆದ್ರೊ ಸರ್ವಾಧಿಕಾರಿ ಹಾದಿ ಹಿಡಿದಿದ್ದರು ಎಂದನಿಸಬಹುದು. ಹಾಗಂತ ಪಾಶ್ಚಿಮಾತ್ಯ ಮಾಧ್ಯಪಮಗಳು ಪ್ರಚಾರ ಮಾಡುತ್ತಿವೆ ಕೂಡಾ ಮುಂದಿನ ಭಾಗದಲ್ಲಿ ಡಿ.7ರ ಹಿಂದಿನ ಮತ್ತು ಆನಂತರ ಬೆಳಕಿಗೆ ಬಂದ ಘಟನೆಗಳು ಮತ್ತು ಮಾಹಿತಿಗಳನ್ನು ವಿವರವಾಗಿ ಗಮನಿಸಿದರೆ ಮಾತ್ರ ವಾಸ್ತವವ ಸ್ಥಿತಿ ಅರ್ಥವಾಗುವುದು.

ನಿರ್ಲಕ್ಷಿತ ಗ್ರಾಮೀಣ ಜನ ಮತ್ತು ರೈತ–ಕಾರ್ಮಿಕರು ಕೂಲಿಕಾರರು ಬಡವರ ಕಣ್ಮಣಿಯಾಗಿದ್ದ ಪೆದ್ರೊ ಅವರು ಪೆರು ವಿನ ಮೊದಲ ಎಡಪಂಥೀಯ ಅಧ್ಯಕ್ಷರಾಗಿದ್ದರು. ಲ್ಯಾಟಿನ್ ಅಮೆರಿಕದ ದೇಶಗಳಲ್ಲೇ ತೀವ್ರ ಅಸಮಾನತೆ, ಶೋಷಣೆ, ಅನಬಿವೃದ್ಧಿಯನ್ನುಎದುರಿಸುತ್ತಿದ್ದ ಬಡಜನರು, ದುಡಿಯುವ ಜನ ಅವರಲ್ಲಿ ಬಹಳ ನಿರೀಕ್ಷೆಯಿಟ್ಟುಕೊಂಡಿದ್ದರು. ಆದರೆ ಪೆರುವಿನ ಉದ್ಯಮಿಗಳು, ಶ್ರೀಮಂತರು, ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳ ಅಧಿಕಾರಿಗಳು ಏಜೆಂಟರು ಮತ್ತು ಅವರ ಹಿತಾಸಕ್ತಿಗಳನ್ನು ಕಾಪಾಡುತ್ತಾ ಬಂದಿರುವ ರಾಜಕಾರಣಿಗಳು, ಅಧಿಕಾರಿಗಳು, ಪೋಲಿಸ್/ಮಿಲಿಟರಿ ಅಧಿಕಾರಿಗಳು ತಮ್ಮ ನಿರಂಕುಶ ಆಳ್ವಿಕೆಗೆ ಕುತ್ತು ಬಂದಿದೆ ಎಂದು ಆತಂಕಿತರಾಗಿದ್ದರು. ಈ ಆತಂಕವನ್ನು ಕ್ರೋಢೀಕರಿಸಿ, ಅಧ್ಯಕ್ಷೀಯ ಚುನಾವಣೆಯಲ್ಲಿ ಪೆದ್ರೊ ಪ್ರತಿಸ್ಪರ್ಧಿಯಾಗಿದ್ದ ಕೈಕೊ ಫುಜಿಮೊರಿ (ಹಿಂದೆ ಹೇಳಿದ ಕುಖ್ಯಾತ ಸರ್ವಾಧಿಕಾರಿ ಅಲ್ಬರ್ಟೊ ಫುಜಿಮೊರಿ ಅವರ ಮಗಳು), ಪೆದ್ರೊ ಪದಗ್ರಹಣ ಮಾಡಿದಂದಿನಿಂದಲೇ ಅವರ ಪದಚ್ಯುತಿಗೆ ಸ್ಕೆಚ್ ಹಾಕಲಾರಂಭಿಸಿದ್ದರು. ಪಾರ್ಲಿಮೆಂಟಿನಲ್ಲಿ ಬಲಪಂಥೀಯ ಶಾಸಕರ ಬಹುಮತ ಇರುವುದನ್ನು ಇದಕ್ಕೆ ಯಥೇಚ್ಛವಾಗಿ ಬಳಸಲಾಯಿತು.

ಪೆದ್ರೊ ನೇಮಿಸಿದ ಸಚಿವ ಸಂಪುಟದ ಸದಸ್ಯರ ಮೇಲೆ ‘ಅನುಭವ–ಪರಿಣತಿಯ ಅಭಾವ’ ಮತ್ತು ‘ಭ್ರಷ್ಟಾಚಾರ’ದ ಯಾವುದೇ ಪುರಾವೆಯಿಲ್ಲದ ಆಪಾದನೆಗಳನ್ನು ಮಾಡಲಾಯಿತು. ‘ಅನುಭವ–ಪರಿಣತಿಯ ಅಭಾವ’ದ ಆಪಾದನೆಯನ್ನು ಪೆದ್ರೊ ಅವರ ವಿರುದ್ಧವೂ ಮಾಡಲಾಯಿತು. ಪಾರ್ಲಿಮೆಂಟಿನಲ್ಲಿ ಈ ಕುರಿತು ಕೋಲಾಹಲ ಸೃಷ್ಟಿಸಲಾಯಿತು. ಹೆಚ್ಚಿನ ಸಚಿವರು ಎಡ ಮತ್ತು ಎಡ–ನಡು ಪಂಥೀಯ ಪಕ್ಷಗಳ ನಾಯಕರಾಗಿದ್ದು ಅವರಿಗೆ ಪರಿಣತಿಯ ಅಭಾವವಿರಲಿಲ್ಲ. ಸಚಿವರಾಗಿ ಅನುಭವದ ಕೊರತೆ ಇತ್ತು, ಅದಕ್ಕೆ ಯಾವತ್ತೂ ಬಲಪಂಥೀಯರೇ ಆಳಿದ್ದ ಪೆರುವಿನಲ್ಲಿ ಅಂತಹ ಅವಕಾಶಗಳೇ ಸಿಕ್ಕಿರಲಿಲ್ಲ! ಈ ಆಪಾದನೆಗಳಿಗೆ ಉತ್ತರಿಸುತ್ತಾ ಅವರು ‘ನಾನು ಯು.ಎಸ್ ಗೆ ಹೋಗಿ ಅಧ್ಯಕ್ಷನಾಗಿ ಪೆರುವಿನ ಶ್ರೀಮಂತರ ಹಿತಾಸಕ್ತಿ ರಕ್ಷಿಸುವುದು ಹೇಗೆ ಎಂಬ ತರಬೇತಿ ಪಡೆದು ಬಂದಿಲ್ಲ. ನಮ್ಮ ಸಚಿವರೂ ಅಷ್ಟೇ’ ಎಂದು ಮಾಧ್ಯ್ಮ ಸಂದರ್ಶನವೊಂದರಲ್ಲಿ ಖಾರವಾಗಿ ಹೇಳಿದ್ದರಂತೆ! ಅಧಿಕಾರದ ಅವಕಾಶವೇ ಇಲ್ಲದಿರುವಾಗ ಭ್ರಷ್ಟಾಚಾರದ ಪ್ರಶ್ನೆ ಎಲ್ಲಿ ಬರುತ್ತದೆ? ಆಧರೂ ಪಾರ್ಲಿಮೆಂಟರಿ ಒತ್ತಡದಿಂದಾಗಿ ನಾಲ್ಕು ಬಾರಿ ಸಂಪುಟ ಪುನರ್ರಚನೆ ಮಾಡಬೇಕಾಯಿತು. ಸಂಪುಟ ಸ್ಥಿರವಿಲ್ಲವಾದ್ದರಿಂದ ಆಡಳಿತ ಅಸ್ಥಿರಗೊಂಡಿದೆಯೆಂದೂ ಮತ್ತೆ ಆಪಾದನೆ ಮಾಡಲಾಯಿತು!


‘ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ’ ಗೆ ರಿಹರ್ಸಲ್

ಅಕ್ಟೋಬರ್ 2021ರಲ್ಲಿಯೇ ಪೆರು ವಿನ ಉದ್ಯಮಗಳ ರಾಷ್ಟ್ರೀಯ ಸಂಘಟನೆ, ಸಾರಿಗೆ ಉದ್ಯಮದ ಗಿಲ್ಡ್, ಕೈಕೊ ಫುಜಿಮೊರಿ ಮತ್ತಿತರ ರಾಜಕಾರಣಿಗಳು ಪೆದ್ರೊ ಸರಕಾರ ಉರುಳಿಸುವ ಪಿತೂರಿ ಆರಂಭಿಸಿದರು. ನವೆಂಬರ್ 2021ರಲ್ಲಿ ಮಹಾ ಸಾರಿಗೆ ಮುಷ್ಕರ ಮಾಡಿ ಆರ್ಥಿಕವನ್ನು ಸ್ಥಗಿತಗೊಳಿಸುವ, ಸಚಿವರು, ಅಧಿಕಾರಿಗಳನ್ನು ಬೆದರಿಸುವ, 2021ರ ಯು.ಎಸ್ ಪಾರ್ಲಿಮೆಂಟಿನ ಮೇಲೆ ನಡೆದ ದಾಳಿಯ ಮಾದರಿಯ ನೇರ ಭಯೋತ್ಪಾದಕ ದಾಳಿ ಇವುಗಳನ್ನೆಲ್ಲ ಯೋಜಿಸಲಾಗಿತ್ತು. ಈ ಯೋಜನೆಗಳನ್ನು ವೆಬ್ ಪತ್ರಿಕೆಯೊಂದು ರೆಕಾರ್ಡಿಂಗ್ ಸಮೇತ ಬಹಿರಂಗ ಪಡಿಸಿತು.

ಪಾರ್ಲಿಮೆಂಟ್ ನ ಬಲಪಂಥೀಯ ಬಹುಮತ ಬಳಸಿ ಅಧ್ಯಯಕ್ಷರ ಅಧಿಕಾರ ಮೊಟಕು ಮಾಡುವ, ಜನಪರ ಕ್ರಮಗಳಿಗೆ ಅಡೆತಡೆಗಳನ್ನೊಡ್ಡುವ ಸರಣಿ ಕ್ರಮಗಳನ್ನು ಕೈಗೊಳ್ಳಲಾಯಿತು. ಪಾರ್ಲಿಮೆಂಟ್ ವಿಸರ್ಜನೆ ಮಾಡುವ ಅಧ್ಯವಕ್ಷರ ಅಧಿಕಾರವನ್ನು ಮೊಟಕು ಮಾಡುವಂತೆ ಸಂವಿಧಾನವನ್ನು ವ್ಯಾಖ್ಯಾನಿಸುವ ಕಾನೂನು ಮಾಡಲಾಯಿತು. ಆದರೆ ಅಧ್ಯಕ್ಷರನ್ನು ಪದಚ್ಯುತಗೊಳಿಸಬಹುದಾದ ಪಾರ್ಲಿಮೆಂಟಿನ ಅಧಿಕಾರವನ್ನು ಉಳಿಸಿಕೊಳ್ಳಲಾಯಿತು. ಸಂವಿಧಾನವನ್ನು ಪುನರ್ರಚಿಸಲು ಸಂವಿಧಾನ ಸಭೆಯ ಚುನಾವಣೆಗೆ ಜನಮತಸಂಗ್ರಹ ಸಂಘಟಿಸಲು ಹೊಸ ಷರತ್ತುಗಳನ್ನು ಹಾಕುವ ಕಾನೂನು ಮಾಡಿತು. ಇಂತಹ ಜನಮತ ಸಂಗ್ರಹ ಮಾಡುವ ಮೊದಲು ಸಂವಿಧಾನದ ಸುಧಾರಣೆ ಮಾಡುವ ಅಗತ್ಯತೆ ಕುರಿತು ಕಾನೂನು ಮಾಡಬೇಕು ಎಂಬುದೇ ಆ ಷರತ್ತು. ಪೆದ್ರೊ ಸರ್ವಾಧಿಕಾರದ ಕಾಲದಲ್ಲಿ ರಚಿಸಲಾದ ಸಂವಿಧಾನವನ್ನು ಬದಲಾಯಿಸುವ ಆಶ್ವಾಸನೆಯ ಮೇಲೆ ಗೆದ್ದಿದ್ದರು. ಅದರರ್ಥ ಸಂವಿಧಾನವನ್ನು ಬದಲಾಯಿಸುವುದಕ್ಕೆ ಜನಾದೇಶ ದೊರಕಿತ್ತು ಎಂದಲ್ಲವೇ?

ಪೆರು ಪಾರ್ಲಿಮೆಂಟ್ ಸಭಾಪತಿ ಸ್ಪೈನ್ ಗೆ ಭೇಟಿ ಕೊಟ್ಟಾಗ “ಪೆರು ವನ್ನು ಕಮ್ಯುನಿಸ್ಟರು ವಶಪಡಿಸಿಕೊಂಡಿದ್ದಾರೆ. ಪೆದ್ರೊ ಕಾನೂನುಬದ್ಧ ಅಧ್ಯಕ್ಷರಲ್ಲ.’ ಎಂಬ ನಿರ್ಣಯ ಪಾಸು ಮಾಡುವಂತೆ ಪಾರ್ಲಿಮೆಂಟ್ ಸದಸ್ಯರನ್ನು ಕೇಳಿಕೊಂಡರು. ಇವೆಲ್ಲವೂ ‘ಸಾಂವಿಧಾನಿಕ ವ್ಯವಸ್ಥೆಯ ಉಲ್ಲಂಘನೆ’ ಯಲ್ಲವೇ?

ಇದು ಸಾಲದು ಎನ್ನುವಂತೆ ಅಪರೂಪದ ಗಂಭೀರ ಸನ್ನಿವೇಶಗಳಲ್ಲಿ ಬಳಸಬೇಕಾದ ‘ಅಧ್ಯಟಕ್ಷೀಯ ದೋಷಾರೋಪಣೆ’ಯನ್ನು (ಇಂಪೀಚ್ ಮೆಂಟ್) ಬೇಕಾಬಿಟ್ಟಿಯಾಗಿ ಬಳಸಲಾಯಿತು. ಜುಲೈ 2021ರಲ್ಲಿ ಪೆದ್ರೊ ಅಧಿಕಾರ ವಹಿಸಿಕೊಂಡರೆ ನವೆಂಬರ್ 2021ರಲ್ಲಿಯೇ (4 ತಿಂಗಳೊಳಗೆ) ಮೊದಲ ‘ದೋಷಾರೋಪಣೆ’ ಮಾಡಲಾಯಿತು. ಪೆದ್ರೊ ಕಚೇರಿಯ ಅಧಿಕಾರಿಯ ಮೇಲೆ ‘ಭ್ರಷ್ಟಾಚಾರ’ದ ಆಪಾದನೆ ನೆಪವಾಗಿತ್ತು. ಪೆದ್ರೊ ಗೆ ‘ಪದವಿಯಲ್ಲಿರಲು ನೈತಿಕ ಅರ್ಹತೆ’ ಇಲ್ಲ’ವೆಂದು ಕೈಕೊ ಗರ್ಜಿಸಿದರು. ಆದರೆ ಅದಕ್ಕೆ ‘ದೋಷಾರೋಪಣೆ’ ಅಭಿಯೋಗದ ಕ್ರಮ ಆರಂಭಿಸಲು ಅಗತ್ಯವಾದ ಕನಿಷ್ಠ ಮತ ಪಾರ್ಲಿಮೆಂಟಿನಲ್ಲಿ ಬರಲಿಲ್ಲವಾಧ್ದ’ರಿಂದ ಬಿದ್ದು ಹೋಯಿತು. ಆ ಅಭಿಯೋಗ ಎಷ್ಟು ಹುರುಳಿಲ್ಲದ್ದು ಅಂದರೆ ಬಲಪಂಥೀಯ ಬಹುಮತ ಇದ್ದಾಗ್ಯೂ ಅದಕ್ಕೆ ಕೇವಲ 46 ಮತ ಬಂತು. ವಿರುದ್ಧ 76 ಮತ ಬಂತು. ಫೆಬ್ರುವರಿ 2022ರಲ್ಲಿ ಎರಡನೆಯ ಬಾರಿ ‘ಅಧ್ಯೂಕ್ಷೀಯ ದೋಷಾರೋಪಣೆ’ಯನ್ನು ತರಲಾಯಿತು. ಈ ಬಾರಿ ಕೈಕೊ ಮೊದಲ ಮುಖಭಂಗದಿಂದ ಪಾಠ ಕಲಿತು ‘ಅಗತ್ಯ ತಯಾರಿ’ಯನ್ನುಮಾಡಿದ್ದರು. ‘ದೋಷಾರೋಪಣೆ’ ಮೊದಲ ಸುತ್ತು ದಾಟಿ ವಿಚಾರಣೆ ಹಂತಕ್ಕೆ ಬಂದು ಅಂತಿಮ ಮತದಾನದಲ್ಲಿ ಮಾತ್ರ ಬಿದ್ದು ಹೋಯಿತು. ಅಗತ್ಯ 87 ಮತಗಳು ಬರಲಿಲ್ಲ. ಕೇವಲ 55 ಮತಗಳು ಬಂದವು. **ಇವೆಲ್ಲವೂ ಡಿ.7ರ ‘ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ’ಗೆ ರಿಹರ್ಸಲ್ ಅಲ್ಲವೇ?**



ಪೆದ್ರೊ ಪಾರ್ಲಿಮೆಂಟ್ ವಿಸರ್ಜನೆ ಘೋಷಿಸಿದ್ದು ಸರಿಯೇ?

ಜುಲೈ 2022ರಲ್ಲಿ ಮೂರನೆಯ ದೋಷಾರೋಪಣೆಯನ್ನು ಮಾಡಲಾಯಿತು. ಅದೇ ಡಿ.7ಕ್ಕೆ ಪಾರ್ಲಿಮೆಂಟಿನ ಮುಂದೆ ಬರುವುದಿತ್ತು. ಎಲ್ಲ ಸಮೀಕ್ಷೆಗಳು ರಾಜಕೀಯ ವಿಶ್ಲೇಷಕರು ಈ ಬಾರಿ ಸಹ ಅದಕ್ಕೆ ಅಗತ್ಯ ಮೂರನೇ ಎರಡು ಬಹುಮತ ಬರುವುದಿಲ್ಲವೆಂದು ಹೇಳಿದ್ದರು. ಹಾಗಿರುವಾಗ ಪೆದ್ರೊ ಏಕೆ ➚

ವಿದ್ಯಾರ್ಥಿ ನಿಲಯ ವಸತಿ ಕೇಂದ್ರಗಳ ಡಿ ವರ್ಗದ ಸಿಬ್ಬಂದಿಗಳನ್ನು......

ಪುಟ 11 ರಿಂದ

ಸಿಬ್ಬಂದಿಗಳೆಂದು ಹೊರಹಾಕಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೊರೊನಾ ಸಾಂಕ್ರಾಮಿಕತೆ ಸಂದರ್ಭದಲ್ಲಿಯೂ ಅನುಭವಿ ಸಿಬ್ಬಂದಿಗಳು ತಮ್ಮ ಜೀವದ ಹಂಗು ತೊರೆದು ಕೆಲಸ ಮಾಡಿದ್ದರು. ಇದರೊಂದಿಗೆ ಬಹುತೇಕ ಮಂದಿಗೆ ಅನೇಕ ತಿಂಗಳುಗಳಿಂದ ವೇತನ ಪಾವತಿ ಆಗಿರುವುದಿಲ್ಲ. ಇಂತಹ ಪರಿಸ್ಥಿತಿಯನ್ನು ಇಲಾಖೆಯ ಕೆಲವು ಸ್ಥಳೀಯ ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡು, ತಮಗೆ ಬೇಕಾದವರಿಗೆ, ಲಂಚಕೊಟ್ಟವರಿಗೆ ಈ 'ಡಿ' ವರ್ಗದ ಹುದ್ದೆಗಳನ್ನು ಮಾರಿಕೊಂಡಿದ್ದಾರೆ ಎಂದು ಆರೋಪಿಸಿದರು.

ಹಲವು ಕಡೆ ನೇರ ನೇಮಕಾತಿಯಲ್ಲಿ ನೇಮಕಗೊಂಡವರು ವಿದ್ಯಾವಂತರೂ, ಪದವೀಧರರೂ ಆಗಿದ್ದು ತಮ್ಮ ಬದಲಿಗೆ ಬೇರೆಯವರನ್ನು ಅಂಥ ಕೆಲಸಗಳಿಗೆ ನಿಯೋಜಿಸಿ ಕೆಲಸ ಮಾಡಿಸುತ್ತಾ ತಮ್ಮ ಸಂಬಳದಲ್ಲಿ ಒಂದು ಅತ್ಯಲ್ಪ ಭಾಗವನ್ನು ಅವರಿಗೆ ಕೊಟ್ಟು ದುಡಿಸಿಕೊಳ್ಳುತ್ತಿರುವುದು ದ್ರೋಹದ ಕೆಲಸಕ್ಕೆ ಕೈಹಾಕಿದ್ದಾರೆ.

ಪ್ರಮುಖ ಬೇಡಿಕೆಗಳಾದ ಸರ್ಕಾರಿ ವಿದ್ಯಾರ್ಥಿ ನಿಲಯ ಹಾಗೂ ಸರ್ಕಾರಿ ವಸತಿ ಶಾಲೆ ಕಾಲೇಜುಗಳಲ್ಲಿ ಸಿಬ್ಬಂದಿಗಳ ನೇರ ನೇಮಕಾತಿಯನ್ನು ಕೈಬಿಡಬೇಕು. ಕೆಲಸದಿಂದ ಕೈಬಿಡಲಾದ ಎಲ್ಲ 'ಡಿ' ವರ್ಗದ ಹೊರಗುತ್ತಿಗೆ ಸಿಬ್ಬಂದಿಗಳನ್ನುಮರಳಿ ಕೆಲಸಕ್ಕೆನೇಮಿಸಿಕೊಳ್ಳಬೇಕು. ಶಾಸಕರು ಅಥವಾ ಸಂಸದರ ಶಿಫಾರಸ್ಸು ಪತ್ರ ಕೇಳಬಾರದು. ಹಿರಿಯ ಅಧಿಕಾರಿಗಳ ಅನುಮತಿ ಇಲ್ಲದೆ ತಾಲ್ಲೂಕು ಅಧಿಕಾರಿಗಳು ಹಾಗು ವಾರ್ಡನ್‌ಗಳ ಅಕ್ರಮವಾಗಿ ನೇಮಕಾತಿ ಮಾಡುವುದನ್ನು ತಡೆಯಬೇಕು ಎಂದು ಆಗ್ರಹಿಸಿದರು.

ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಬಾಕಿ ಇರುವ ವೇತನ ಮತ್ತು ಲಾಕ್‌ಡೌನ್ ಅವಧಿಯ ವೇತನವನ್ನು ಹಾಗೂ ಡಿ.ಎ. ಅರಿಯರ್ಸ್ ಹಣವನ್ನು ಕೂಡಲೇ ಪಾವತಿ ಮಾಡಬೇಕು. ಹೊರಗುತ್ತಿಗೆ ಸಿಬ್ಬಂದಿಗಳನ್ನು ನಿವೃತ್ತಿವರೆಗೆ ಸೇವೆಯಲ್ಲಿ ಮುಂದುವರೆಸಿ ಸೇವಾ ಭದ್ರತೆಯನ್ನು ನೀಡಬೇಕು. ಹೊಸದಾಗಿ ತೆರೆಯಲಾದ ವಿದ್ಯಾರ್ಥಿ ನಿಲಯಗಳು ಮತ್ತು ವಸತಿ ಶಾಲೆ-ಕಾಲೇಜುಗಳ 'ಡಿ' ವರ್ಗದ ಕೆಲಸಗಳಿಗೆ ಈ ಹಿಂದೆ ಕೆಲಸ ಮಾಡಿ ಅನುಭವ ಇರುವ ಹೊರಗುತ್ತಿಗೆ ಸಿಬ್ಬಂದಿಗಳನ್ನೇ ನೇಮಿಸಬೇಕು ಎಂದು ಪ್ರತಿಭಟನಾಕಾರರ ಒತ್ತಾಯವಾಗಿದೆ.

ಹಿಂದುಳಿದ ವರ್ಗಗಳ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ವಿದ್ಯಾರ್ಥಿ ನಿಲಯಗಳಿಗೆ ಈ ಹಿಂದೆ ಕೆಲಸ ಮಾಡಿದವರನ್ನೇ ರಾತ್ರಿ ಕಾವಲುಗಾರರಾಗಿ ನೇಮಿಸಬೇಕು. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲಿ ಊಟದಲ್ಲಿ ಜೋಳದ ರೊಟ್ಟಿ ಹೆಚ್ಚು ಬಳಕೆಯಾಗುತ್ತಿರುವುದರಿಂದ ಮತ್ತು ರೊಟ್ಟಿ ತಯಾರಿಸುವ ಕೆಲಸ ಹೆಚ್ಚು ಶ್ರಮದಾಯಕವಾಗಿರುವುದರಿಂದ ಪ್ರತಿಯೊಂದು ವಿದ್ಯಾರ್ಥಿ ನಿಲಯಕ್ಕೆ ಕನಿಷ್ಠ ಒಬ್ಬ ಮಹಿಳಾ ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ಈ ಹಿಂದೆ ಕೆಲಸ ಮಾಡಿ ಅನುಭವ ಇದ್ದವರನ್ನೇ ನೇಮಿಸಬೇಕು ಎಂದು ಪ್ರತಿಭಟನಾಕಾರರ ಆಗ್ರಹವಾಗಿದೆ.

ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ಶೇ. 25ರಷ್ಟು ವಿದ್ಯಾರ್ಥಿ/ವಿದ್ಯಾರ್ಥಿನೀಯರ ಸಂಖ್ಯೆಯನ್ನು ಹೆಚ್ಚಿಸಬೇಕು. ಅದರೊಂದಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಕಾನೂನು ಪ್ರಕಾರ ವಾರದ ರಜೆ ಹಾಗೂ ಹೆರಿಗೆ ಭತ್ಯೆಯನ್ನು ಕೊಡಬೇಕು. ಇಎಸ್‌ಐ ಮತ್ತು ಪಿ.ಎಫ್. ಸೌಲಭ್ಯವನ್ನು ವಿಸ್ತರಿಸಿ, ಸಿಬ್ಬಂದಿಗಳು ಹಿಂಪಡೆಯಲು ಬಯಸುವ ಅವರ ಪಾಲಿನ ಹಣವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ವಸತಿ ಶಾಲೆ-ಕಾಲೇಜುಗಳಲ್ಲಿ ಎಸ್‌ಡಿಸಿ ಮೊದಲಾದ ಪಠ್ಯೇತರ ಹೊರ ಸಂಪನ್ಮೂಲ ನೌಕರರನ್ನು ಅವರವರ ಸ್ಥಾನದಲ್ಲಿ ಕಾಯಂ ಮಾಡಬೇಕು. ಬಾಕಿ ವೇತನವನ್ನು ಸಂದಾಯ ಮಾಡಬೇಕು ಎಂದು ಪ್ರತಿಭಟನಾಕಾರರ ವಿನಂತಿಯಾಗಿದೆ.

ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಕೆಲವು ಸ್ಥಳೀಯ ಅಧಿಕಾರಿಗಳಿಂದ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಸರ್ಕಾರದ ಹಣದ ದುರ್ಬಳಕೆಯನ್ನು ಕಟ್ಟುನಿಟ್ಟಾಗಿ ತಡೆಗಟ್ಟಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ, ವೈದ್ಯಕೀಯ ಮತ್ತು ಇತರ ಸೇವೆಗಳನ್ನು ಒದಗಿಸಬೇಕೆಂಬುದು ಪ್ರತಿಭಟನಾಕಾರರ ಆಗ್ರಹವಾಗಿದೆ.

ಪ್ರತಿಭಟನೆಯ ಮೂಲಕ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮತ್ತು ಇಲಾಖೆಯ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದರು. ಕೂಡಲೇ ಸಚಿವರು ನೌಕರರ ಪರಿಸ್ಥಿತಿ ಹಾಗೂ ಬೇಡಿಕೆಗಳ ಕುರಿತು ತಮ್ಮ ಅಧ್ಯಕ್ಷತೆಯಲ್ಲಿ ಹಿರಿಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಪ್ರತಿನಿಧಿಗಳ ಸಭೆಯನ್ನು ಕರೆಯಬೇಕೆಂದು ವಿನಂತಿಸಿಕೊಂಡಿದ್ದಾರೆ.

ವರಮಾನಗಳ ಅಸಮತೆ ಹೆಚ್ಚುವುದರಿಂದಾಗಿಯೇ ಸಂಪತ್ತಿನ....

ಪುಟ 13 ರಿಂದ

ಇಲ್ಲಿಯವರೆಗೆ ನಾವು ಉಳಿತಾಯದ ಹಂಚಿಕೆಯಲ್ಲಿ ಬದಲಾವಣೆಗಳ ಮೂಲಕ ಸಂಪತ್ತು ಸಾಂದ್ರಗೊಳ್ಳುವ ಬಗ್ಗೆ ಮಾತನಾಡಿದೆವು. ಉಳಿತಾಯವು ಸಾಕಾರಗೊಳ್ಳುವುದು ಸಮಸ್ಯೆಯಾದಾಗ, ಸಾಮರ್ಥ್ಯದ ಬಳಕೆಯ ಮೂಲ(base) ಮಟ್ಟದಲ್ಲಿ ಆಗುವ ಉಳಿತಾಯಕ್ಕಿಂತ ಒಂದು ವೇಳೆ ಹೂಡಿಕೆಯೇ ಕಡಿಮೆಯಾದರೆ ಮಾಡುವುದೇನು? ಎಂದು ಕೇಳಬಹುದು. ಆದರೆ, ಉಳಿತಾಯವು ಸಾಕಾರಗೊಳ್ಳುವುದು ಒಂದು ವೇಳೆ ಸಮಸ್ಯೆಯಾದರೆ, ಅಂದರೆ, ಸಾಮರ್ಥ್ಯದ ಬಳಕೆಯ ಮೂಲ ಮಟ್ಟದಲ್ಲಿ ಉತ್ಪತ್ತಿಯನ್ನು ಉತ್ಪಾದಿಸಿದಾಗ ಸಾಕಷ್ಟು ಬೇಡಿಕೆ ಇಲ್ಲದಿದ್ದರೆ, ಆಗ ಸಾಕಾರಗೊಳ್ಳುವ ಉಳಿತಾಯವು ಸಾಮರ್ಥ್ಯ ಬಳಕೆಯ ಮೂಲ ಮಟ್ಟದ ಉತ್ಪಾದನೆಯಿಂದ ಸೃಷ್ಟಿಯಾಗುವ ಉಳಿತಾಯಕ್ಕಿಂತಲೂ ಕಡಿಮೆ ಇರುತ್ತದೆ. ವರ್ಗಗಳ ನಡುವೆ ಅದರ ಹಂಚಿಕೆಯು, ಅಂದರೆ, ಸಣ್ಣ ಉತ್ಪಾದಕರು ಮತ್ತು ದೊಡ್ಡ ಬಂಡವಾಳಗಾರರ ನಡುವೆ, ಅಥವಾ ಸಣ್ಣ ಬಂಡವಾಳಗಾರರು ಮತ್ತು ದೊಡ್ಡ ಬಂಡವಾಳಗಾರರ ನಡುವೆ, ಇದೆಲ್ಲವೂ ಸಾಕಾರಗೊಂಡಿದೆ ಎಂಬಂತೆಯೇ ಇರುತ್ತದೆ. ಆದ್ದರಿಂದ ಸಂಪತ್ತಿನ ಕೇಂದ್ರೀಕರಣ ಪ್ರವೃತ್ತಿಯು ಉಳಿತಾಯ ಸಾಕಾರಗೊಳ್ಳುವ ಸಮಸ್ಯೆ ಇದೆಯೇ ಅಥವಾ ಇಲ್ಲವೇ ಎಂಬುದರಿಂದ ಅಬಾಧಿತವಾಗಿರುತ್ತದೆ.

ಕಿತ್ತುಕೊಳ್ಳುವ ಆದಿಮ ಪ್ರಕ್ರಿಯೆ

ನಾವು ಇಲ್ಲಿಯವರೆಗೆ ಉಲ್ಲೇಖಿಸಿದ ಎರಡು ಅಂಶಗಳ ಜೊತೆಗೆ, ಸಂಪತ್ತಿನ ಹಂಚಿಕೆಯನ್ನು ಹೆಚ್ಚು ಅಸಮಾನವಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಮೂರನೆಯ ಅಂಶ ಯಾವುದೆಂದರೆ, ಯಾವ ಪ್ರಕ್ರಿಯೆಯನ್ನು ಬಂಡವಾಳದ ಆದಿಮ ಸಂಚಯ ಎಂದು ಮಾರ್ಕ್ಸ್ ಕರೆದಿದ್ದರೊ ಅದೇ ಪ್ರಕ್ರಿಯೆಯೇ. ಈ ಪ್ರಕ್ರಿಯೆಯು ರೈತರಿಂದ ಭೂಮಿಯನ್ನು ದೊಡ್ಡ ಬಂಡವಾಳಗಾರರು ಪುಕ್ಕಟೆಯಾಗಿ ಅಥವಾ ದುಗ್ಗಾಣಿ ಬೆಲೆಗೆ ಸ್ವಾಧೀನಪಡಿಸಿಕೊಳ್ಳುವ ಸಂದರ್ಭಗಳನ್ನು ಒಳಗೊಳ್ಳುತ್ತದೆ ಮಾತ್ರವಲ್ಲ, ಹಿಂದೆ ಚಾಲ್ತಿಯಲ್ಲಿದ್ದ ಮಾರುಕಟ್ಟೆ ಬೆಲೆಯಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯ ಮೇಲೆ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿದ ನಂತರ ಅಥವಾ ವಾಸದ ಮನೆಗಳನ್ನು ನಿರ್ಮಿಸಿದ ನಂತರ ಆ ಭೂಮಿಯ ಮೌಲ್ಯವು ಹೆಚ್ಚುವ ಸಂದರ್ಭಗಳನ್ನು ಸಹ ಒಳಗೊಳ್ಳುತ್ತದೆ. ಭೂಮಿಯ ಬೆಲೆಯಲ್ಲಿನ ಈ ಹೆಚ್ಚಳದ ಪ್ರಕರಣವು ಷೇರುಮಾರುಕಟ್ಟೆಯಲ್ಲಿ ಆಸ್ತಿಗಳ (ಷೇರುಗಳ) ಮಾರಾಟದಿಂದ ಗಳಿಸಿದ ಬಂಡವಾಳ-ಗಳಿಕೆಯೊಂದಿಗೆ ಹೋಲುತ್ತದೆ ಎಂದು ಮೊದಲ ನೋಟದಲ್ಲಿ ಅನಿಸಬಹುದು. ಆದರೆ ಇಲ್ಲೊಂದು ಮೂಲಭೂತ ವ್ಯತ್ಯಾಸವಿದೆ. ಷೇರುಮಾರುಕಟ್ಟೆಯ ಏರಿಳಿತಗಳು ಬಂಡವಾಳ-ಗಳಿಕೆಗಳನ್ನು ಏರು ಪೇರು ಮಾಡಬಹುದಾದರೂ, ಭೂಮಿಯ ಬೆಲೆಗಳು ಸಾಮಾನ್ಯವಾಗಿ ಗಗನ ಮುಖಿಯಾಗಿರುತ್ತವೆ. ಆದ್ದರಿಂದ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಇಂತಹ ಸಂದರ್ಭಗಳನ್ನೂ ಸಹ ಬಂಡವಾಳದ ಆದಿಮ ಸಂಚಯವೆಂದೇ ನೋಡಬೇಕಾಗುತ್ತದೆ. ಏಕೆಂದರೆ, ರೈತರಿಗೆ ಚಾಲ್ತಿಯಲ್ಲಿರುವ ಭೂಮಿಯ ಮಾರುಕಟ್ಟೆ ಬೆಲೆಗಿಂತ ಅತಿಕಡಿಮೆ ಬೆಲೆಯನ್ನು ಕೊಡಲಾಗಿರುತ್ತದೆ (ಈ ಬೆಲೆಯು ಸಂಪತ್ತಿನ ಲೆಕ್ಕಾಚಾರದಲ್ಲಿ ಪರಿಗಣಿತವಾಗುತ್ತದೆ).

ಸಾರ್ವಜನಿಕ ಸಂಪನ್ಮೂಲಗಳನ್ನು ದೊಡ್ಡ ಬಂಡವಾಳಶಾಹಿಗಳ ಜೇಬಿಗೆ ಪುಕ್ಕಟೆಯಾಗಿ ವರ್ಗಾಯಿಸುವ ಹಲವಾರು ವಿಧಾನಗಳು ಈಗಿನ ದಿನಗಳಲ್ಲಿ ಬಂಡವಾಳದ ಆದಿಮ ಶೇಖರಣೆಯ ಒಂದು ಪ್ರಮುಖ ಮೂಲವಾಗಿವೆ. ಬೆಳವಣಿಗೆಯನ್ನು ಉತ್ತೇಜಿಸಲು ಪ್ರೋತ್ಸಾಹಕಗಳನ್ನು ಒದಗಿಸುವ ಹೆಸರಿನಲ್ಲಿ ಇದನ್ನು ಮಾಡಲಾಗುತ್ತದೆ ಮತ್ತು ಇದು ಎಲ್ಲರಿಗೂ ಪ್ರಯೋಜನಕಾರಿಯಾಗುತ್ತದೆ ಎಂದು ಭಾವಿಸಲಾಗಿದೆ. ಸಂಪತ್ತಿನ ಅಸಮತೆಗಳ ಹೆಚ್ಚಳದ ಮೇಲೆ ಪರಿಣಾಮ ಬೀರುವ ಅಂತಹ ಬಹಿರಂಗ ಮಾರ್ಗಗಳ ಹೊರತಾಗಿಯೂ, ದೊಡ್ಡ ಬಂಡವಾಳವು ಈ ಉದ್ದೇಶಕ್ಕಾಗಿ ಯಾವುದಕ್ಕೂ ಹೇಸದ ನಾನಾ ರೀತಿಯ ಕೃತ್ಯಗಳಲ್ಲಿ ತೊಡಗುತ್ತದೆ. ತಮ್ಮ ಭೂಮಿಯಿಂದ ಜನರನ್ನು ಒಕ್ಕಲೆಬ್ಬಿಸಲು ಕೋಮು ಗಲಭೆಗಳನ್ನು ರೂಪಿಸಿ ನಂತರ ಆ ಭೂಮಿಯನ್ನು ನೇರವಾಗಿ ಅಲ್ಲದಿದ್ದರೂ ಸುತ್ತಿ ಬಳಸಿ ದುಗ್ಗಾಣಿ ಬೆಲೆಗೆ ದೊಡ್ಡ ಬಂಡವಾಳವು ಸ್ವಾಧೀನಪಡಿಸಿಕೊಂಡಿರುವ ಉದಾಹರಣೆಗಳಿವೆ.

ಸಂಪತ್ತಿನ ಅಸಮತೆಯನ್ನು ಉದ್ದೇಶ ಪೂರ್ವಕವಾಗಿ ಹೆಚ್ಚಿಸುವ ಈ ಎಲ್ಲಾ ವಿಧಾನಗಳೂ ನವ-ಉದಾರವಾದದ ಆಳ್ವಿಕೆಯಲ್ಲಿ ಉತ್ತೇಜನ ಪಡೆಯುತ್ತವೆ. ಖಾಸಗಿ ಕಿತ್ತುಕೊಳ್ಳುವಿಕೆಯು ಪರಾಕಾಷ್ಠೆಗೇರುವ ನವ-ಉದಾರವಾದದಲ್ಲಿ ಈ ಕ್ರಮಗಳು ಎಲ್ಲರಿಗೂ ಪ್ರಯೋಜನ ತರುತ್ತವೆ ಎಂಬ ನೆಲೆಯಲ್ಲಿ ಅವುಗಳಿಗೆ ಎದುರಾಗುವ ಎಲ್ಲ ಆಕ್ಷೇಪಣೆಗಳನ್ನೂ ಅದು ತಳ್ಳಿಹಾಕುವಾಗಲೇ, ಇತ್ತ ಸಾರ್ವಜನಿಕ ಉದ್ದಿಮೆಗಳನ್ನು ಹೀನೈಸುವ ಕೆಲಸವೂ ನಡೆಯುತ್ತದೆ.

ಪಾರ್ಲಿಮೆಂಟರಿ ವಿಸರ್ಜನೆ ಮಾಡುವ ಅವಸರದ ಘೋಷಣೆ ಮಾಡಿದರು? ಈ ಘೋಷಣೆಯ ಪ್ರಮಾದವನ್ನು ಪೆದ್ರೊ ಮಾಡಿರದಿದ್ದರೆ ಅವರನ್ನು ಪದಚ್ಯುತಿ ಮಾಡುವುದು (ಮಿಲಿಟರಿ ಕ್ಷಿಪ್ರಕ್ರಾಂತಿ ಬಿಟ್ಟರೆ) ಅಷ್ಟು ಸುಲಭವಿರಲಿಲ್ಲವೆಂದು ಭಾವಿಸಲಾಗಿದೆ.

ಮೇಲೆ ಹೇಳಿದ ಹಿನ್ನೆಲೆಯಿಂದ (ಅವರಿಗೆ ತಮ್ಮ ವಿರುದ್ಧ ನಡೆಯುತ್ತಿದ್ದ ಪಿತೂರಿಗಳ ಕುರಿತು ಇನ್ನಷ್ಟು ಬೆಚ್ಚಿಬೀಳಿಸುವ ಭೀಕರ ಮಾಹಿತಿ ಇರಬೇಕು) ಪೆದ್ರೊ ಅವರ ಮೇಲೆ ಭಾರೀ ಒತ್ತಡವಿತ್ತು ಎಂಬುದು ಸ್ಪಷ್ಟ. ಅಲ್ಲದೆ, ತಾನು ಈ ದೇಶದ ಜನ-ವಿರೋಧೀ ಶ್ರೀಮಂತರ-ಪರ ರಾಜಕಾರಣವನ್ನು ಬದಲಾಯಿಸಬೇಕು. ತನ್ನ ಮೇಲೆ ಇಡೀ ದೇಶದ ಬಡವರು ದುಡಿಯುವವರು ಇಟ್ಟುಕೊಂಡಿರುವ ಅಪಾರ ನಿರೀಕ್ಷೆಯನ್ನು ಈಡೇರಿಸುವತ್ತ ಕೆಲಸ ಗಂಭೀರವಾಗಿ ಆರಂಭಿಸಬೇಕು. ಈ ಪಾರ್ಲಿಮೆಂಟ್ ತನ್ನನ್ನು ಅರ್ಥಹೀನ ಜಗ್ಗಾಟದಲ್ಲಿ ಕಟ್ಟಿಹಾಕುತ್ತದೆ. ಬಹುಶಃ ಇನ್ನೂ ಹಲವು ಒತ್ತಡಗಳಲ್ಲಿ ಸಿಕ್ಕು ಪೆದ್ರೊ ಒದ್ದಾಡುತ್ತಿದ್ದರು. ಇದಕ್ಕಾಗಿ ನಿರ್ಣಾಯಕವಾಗಿ ಏನಾದರೂ ಮಾಡಬೇಕು ಎಂದು ಅವರು ತಾಳ್ಮೆಗೆಟ್ಟು ವಿಸರ್ಜನೆಯ ಘೋಷಣೆ ಮಾಡಿರುವ ಸಾಧ್ಯಾತೆಯೆ ಹೆಚ್ಚು.

2021ರ ಪೆರು ಚುನಾವಣೆಯ ಸ್ವಲ್ಪ ಮೊದಲು ಲೀಸಾ ಕೆನ್ನಾ ಎಂಬ ಮಾಜಿ ಸಿಐಎ ಏಜೆಂಟ್‌ನ್ನು ಪೆರು ಗೆ ಯು.ಎಸ್ ಯು.ಎಸ್ ರಾಯಭಾರಿಯಾಗಿ ಕಳಿಸಲಾಯಿತು. ಸಾಮಾನ್ಯವಾಗಿ ಯಾವುದೇ ದೇಶದಲ್ಲಿ ಯು.ಎಸ್ ವಿರುದ್ಧ ಆತಂಕಕಾರಿ ಬೆಳವಣಿಗೆ ನಿರೀಕ್ಷಿತವಾಗಿದ್ದರೆ ಸಿಐಎ ಏಜೆಂಟರನ್ನೇ ರಾಯಭಾರಿಯಾಗಿ ಕಳಿಸಲಾಗುತ್ತದೆ. ಡಿ.6ರಂದು ಆಕೆ ರಕ್ಷಣಾ ಮಂತ್ರಿಯನ್ನು ಭೇಟಿಯಾಗಿದ್ದರು. ಡಿ.7ರಂದು ಪೆದ್ರೊ ಸ್ವೀಕರಿಸಿದ ಕೊನೆಯ ಕರೆ ಯು.ಎಸ್ ರಾಯಭಾರ ಕಚೇರಿಯಿಂದ ಬಂದಿತ್ತು ಎಂದು ಹೇಳಲಾಗಿದೆ. ಪೆದ್ರೊ ವಿರ್ಜನೆಯ ಘೋಷಣೆ ಮಾಡಲಿ ಬಿಡಲಿ ಮಿಲಿಟರಿ ಕ್ಷಿಪ್ರಕ್ರಾಂತಿಯ ತಯಾರಿ ನಡೆದಿತ್ತೇ ಎಂಬ ಅನುಮಾನ ಹುಟ್ಟಿಸುತ್ತದೆ.

ಮುಂದೇನು?

ಹೊಸ ಅಧ್ಯಕ್ಷ ದೀನಾ ಅವರ ಆಡಳಿತ ಈಗಾಗಲೇ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ಆಗಲೇ ಎರಡನೆಯ ಬಾರಿ ಸಂಪುಟ ರಚನೆಯಾಗಿದೆ. ಪ್ರತಿಭಟನೆಯನ್ನು ತಣ್ಣಗಾಗಿಸಲು ಮುಂದಿನ ಚುನಾವಣೆಯನ್ನು (ಏಪ್ರಿಲ್ 2026ರಲ್ಲಿ ನಡೆಯಬೇಕಾಗಿದ್ದನ್ನು ಏಪ್ರಿಲ್ 2024ಕ್ಕೆ) ಹಿಂದಕ್ಕೆ ತರಲಾಗಿದೆ. ಇದು ಸಂವಿಧಾನಿಕ ವಿಷಯವಾದ್ದರಿಂದ ಎರಡನೆಯ ಬಾರಿಯೂ ಮೂರನೆಯ ಎರಡು ಬಹುಮತದೊಂದಿಗೆ ಮಂಜೂರಾಗಬೇಕು ಬೇರೆ. ಕಳೆದ ವಾರ ಡಿಸೆಂಬರ್ 2023ಕ್ಕೆ ತರಬೇಕೆಂಬ ಪ್ರಸ್ತಾವವನ್ನು ಪಾರ್ಲಿಮೆಂಟ್ ತಿರಸ್ಕರಿಸಿತು. ಆದರೆ ಇದು ಪ್ರತಿಭಟನೆಯನ್ನು ತಣಿಸುವ ಸಾಧ್ಯತೆ ಕಡಿಮೆ. ಏಕೆಂದರೆ ಸಂವಿಧಾನ ಪುನರ್‌ರಚನೆ, ಸಂವಿಧಾನ ಸಭೆಗೆ ಚುನಾವಣೆ ಬಗ್ಗೆ ಏನೂ ಹೇಳಲಾಗಿಲ್ಲ. ಒಂದು ಸ್ವತಂತ್ರ ಸಮೀಕ್ಷೆಯ ಪ್ರಕಾರ ಚುನಾವಣೆಯನ್ನು ಬೇಗನೇ ಮಾಡುವುದಕ್ಕೆ ಶೇ.85 ಜನ ಪರವಾಗಿದ್ದರೆ, ಶೇ. 62 ಜನ ಚುನಾವಣೆಯ ಮೊದಲು ರಾಜಕೀಯ ಸುಧಾರಣೆ ಸಹ ಆಗಬೇಕೆಂದು (ಅಂದರೆ ಸಂವಿಧಾನ ಬದಲಾವಣೆ) ಬಯಸುತ್ತಾರೆ.

ಬ್ರೆಜಿಲ್ ನಲ್ಲಿ ಯು.ಎಸ್ ಪ್ರಯೋಗ ಮಾಡಿದ ಕಾನೂನು ಬಾಹಿರ 'ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ' ತಂತ್ರ ರಿವರ್ಸ್ ಹೊಡೆದಿದೆ. ಅದನ್ನೇ ಪೆರುವಿನಲ್ಲಿ ಪ್ರಯೋಗಿಸಲಾಗಿದೆ. ಇಲ್ಲಿ ಇನ್ನೂ ಬೇಗ ರಿವರ್ಸ್ ಹೊಡೆಯುವ ಸಾಧ್ಯಂತೆಗಳಿವೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE December 26, 2022-January 1, 2023 Price: Rs. 10/- Date of Publication: 23 December 2022 RNI No. KARKAN /2006/17926 Posted on 27-12-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ವಿಶ್ವ ಗೆದ್ದ ಮೆಸ್ಸಿ ಬಳಗ, ಹೃದಯ ಕದ್ದ ಎಂಬಾಪೆ ಬಳಗ

ರೋಚಕ ಪಣಾಹಣಿಯೊಂದಿಗೆ ತೆರೆಕಂಡ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ





28 ದಿನಗಳ ಕಾಲ ಇಡೀ ಜಗತ್ತನ್ನೇ ತನ್ನತ್ತ ಸೆಳೆದಿದ್ದ 22ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಡಿಸೆಂಬರ್ 18 ರಂದು ರೋಚಕ ಹಣಾಹಣಿ ಫೈನಲ್ ಪಂದ್ಯದೊಂದಿಗೆ ತೆರೆ ಕಂಡಿದೆ. ಎರಡು ಬಾರಿ ವಿಶ್ವ ಚಾಂಪಿಯನ್ ಅರ್ಜೆಂಟಿನಾ ಹಾಗೂ ಎರಡು ಬಾರಿ ವಿಶ್ವ ಚಾಂಪಿಯನ್ ಫ್ರಾನ್ಸ್ ಫೈನಲ್‌ನಲ್ಲಿ ಪ್ರಶಸ್ತಿಗಾಗಿ ಸೆಣಸಾಟ ನಡೆಸಿದ್ದವು. ಖ್ಯಾತ ಆಟಗಾರರಾದ ಲಿಯೋನೆಲ್ ಮೆಸ್ಸಿ ಹಾಗೂ ಕೈಲಿಯನ್ ಎಂಬಾಪೆ ಬಳಗದ ನಡುವೆ ನಡೆದ ಕುತೂಹಲಕಾರಿ ಪಂದ್ಯದಲ್ಲಿ ನಿಗದಿತ ಸಮಯದಲ್ಲಿ ಎರಡು ತಂಡಗಳು ಸಮಬಲ ಸಾಧಿಸಿದ್ದರಿಂದ ಪೆನಾಲ್ಟಿ ಕಿಕ್ ನಲ್ಲಿ 4–2 ಗೋಲುಗಳ ಅಂತರದಿಂದ ಅರ್ಜೆಂಟಿನಾ ಮೂರನೇ ಬಾರಿಗೆ ವಿಶ್ವಕಪ್ ಮುಡಿಗೇರಿಸಿಕೊಂಡಿತು. ಇದರೊಂದಿಗೆ ದಿಗ್ಗಜ ತಂಡಗಳ ಸೋಲು, ಪುಟ್ಟ ತಂಡಗಳ ಗೆಲುವು, ಹಲವು ದಾಖಲೆಗಳು, ವಿಶೇಷತೆಗಳೊಂದಿಗೆ ವಿಶ್ವಕಪ್ ಪಂದ್ಯಾವಳಿ ಅದ್ದೂರಿ ಹಾಗೂ ಯಶಸ್ವಿಯಾಗಿ ಮುಗಿದಿದೆ.

ಜಗದೀಶ್ ಸೂರ್ಯ, ಮೈಸೂರು

2022 ಡಿಸೆಂಬರ್ 9 ರಿಂದ ಆರಂಭವಾದ ಕ್ವಾರ್ಟರ್ ಪಂದ್ಯಗಳು ಜಿದ್ದಾಜಿದ್ದಿನಿಂದ ಕೂಡಿದ್ದವು. ಕ್ರೋವೇಶಿಯಾ ತಂಡ ಬಲಿಷ್ಠ ಬ್ರೆಜಿಲ್ ತಂಡವನ್ನು, ಅರ್ಜೆಂಟಿನಾ, ನೆದರ್‌ಲ್ಯಾಂಡ್ ತಂಡವನ್ನು, ಮೊರಾಕ್ಕೊ, ಪೋರ್ಚುಗಲ್ ತಂಡವನ್ನು, ಫ್ರಾನ್ಸ್, ಇಂಗ್ಲೆಂಡ್ ತಂಡವನ್ನು ಮಣಿಸಿ ಸೆಮಿಫೈನಲ್ ಹಂತವನ್ನು ಪ್ರವೇಶಿಸಿದವು. ಸೆಮಿಫೈನಲ್ ಪಂದ್ಯಗಳು ಅಕ್ಷರಶಃ ಕುತೂಹಲದಿಂದ ಕೂಡಿತ್ತು. ಈ ಪಂದ್ಯಗಳಲ್ಲಿ ಕಳೆದ ಬಾರಿಯ ರನ್ನರ್ ಅಪ್ ಕ್ರೋವೇಶಿಯಾವನ್ನು ಮಣಿಸಿ ಅರ್ಜೆಂಟಿನಾ ಫೈನಲ್‌ಗೇರಿದರೆ, ಮೊದಲ ಬಾರಿಗೆ ಸೆಮಿಫೈನಲ್‌ಗೆ ಬಂದಿದ್ದ ಆಫ್ರಿಕಾ ದೇಶದ ಮೊರಾಕ್ಕೊ ಪ್ರಬಲ ಸ್ಪರ್ಧೆಯೊಡ್ಡಿದರೂ ಫ್ರಾನ್ಸ್ ಎದುರು ಮಣಿಯಬೇಕಾಯಿತು. ಇದರೊಂದಿಗೆ ಅರ್ಜೆಂಟಿನಾ ಹಾಗೂ ಫ್ರಾನ್ಸ್ ತಂಡಗಳು ಫೈನಲ್ ಪಂದ್ಯದಲ್ಲಿ ಸೆಣಸಲು ವೇದಿಕೆ ಸಿದ್ಧವಾಯಿತು. ಅಂತಿಮವಾಗಿ ಡಿಸೆಂಬರ್ 18 ರಂದು ನಡೆದ ಫೈನಲ್‌ನಲ್ಲಿ ಕಳೆದ ಬಾರಿಯ ಚಾಂಪಿಯನ್ ಫ್ರಾನ್ಸ್ ತಂಡದ ಎದುರು ಅರ್ಜೆಂಟಿನಾ ಗೆದ್ದು ವಿಶ್ವಕಪ್ ಅನ್ನು ಎತ್ತಿಯಿಡಿಯಿತು.

ವಿಶ್ವಕಪ್ ಗೆದ್ದ ಮೆಸ್ಸಿ ಬಳಗ, ಹೃದಯ ಕದ್ದ ಎಂಬಾಪೆ ಬಳಗ

ಖ್ಯಾತ ಆಟಗಾರ ಲಿಯೊನಲ್ ಮೆಸ್ಸಿಗೆ ಈ ವಿಶ್ವಕಪ್ ಕೊನೆಯ ಮತ್ತು ಅತ್ಯಂತ ಮಹತ್ವದ ಪಂದ್ಯವಾಗಿತ್ತು. ತನ್ನ 18 ವರ್ಷಗಳ ಫುಟ್ ಬಾಲ್ ಪಯಣದಲ್ಲಿ 37 ಕ್ಲಬ್ ಟ್ರೋಫಿಗಳು, 7 ಬ್ಯಾಲನ್ ಡಿ' ಓರ್ ಪ್ರಶಸ್ತಿ, 6 ಯುರೋಪಿಯನ್ ಗೋಲ್ಡನ್ ಬೂಟ್, 1 ಕೋಪಾ ಅಮೇರಿಕಾ ಪಟ್ಟ, 1 ಒಲಂಪಿಕ್ ಚಿನ್ನದ ಪದಕ ಗೆದ್ದಿದ್ದ ಮೆಸ್ಸಿಗೆ ವಿಶ್ವಕಪ್ ಒಂದು ಬಾಕಿ ಇತ್ತು. 2014 ರಲ್ಲಿ ಫೈನಲ್ ಹಂತಕ್ಕೆ ಬಂದಿದ್ದರೂ ವಿಶ್ವಕಪ್ ಗೆಲ್ಲುವ ಕನಸು ಈಡೇರಿರಲಿಲ್ಲ. ಆದ್ದರಿಂದ ಮೆಸ್ಸಿ ಹಾಗೂ ಬಳಗಕ್ಕೆ ಈ ಪಂದ್ಯ ಮಹತ್ವದಾಗಿತ್ತು. ಕಪ್ ಗೆಲ್ಲುವ ಮಹತ್ವಾಕಾಂಕ್ಷೆಯಿಂದಲೇ ಬಂದಿದ್ದ ಮೆಸ್ಸಿ ಬಳಗ ಪಂದ್ಯದ ಆರಂಭದಿಂದ ಆಕ್ರಮಣಕಾರಿಯಾಗಿ ಆಡಿ 2 ಗೋಲ್ ಗಳಿಸಿ ಮುನ್ನಡೆ ಸಾಧಿಸಿತ್ತು. ಆದರೆ ದ್ವಿತಿಯಾರ್ಧದಲ್ಲಿ ಅರ್ಜೆಂಟಿನಾ ತಂಡದ ತಪ್ಪುಗಳ ಲಾಭ ಪಡೆದ ಫ್ರಾನ್ಸ್ ತಂಡದ ಕೈಲಿಯಾನ್ ಎಂಬಾಪೆ ಒಂದು ನಿಮಿಷದಲ್ಲಿ ಎರಡು ಗೋಲ್ ಗಳಿಸಿ ಫ್ರಾನ್ಸ್‌ಗೆ ಮುನ್ನಡೆ ತಂದುಕೊಟ್ಟು ಅರ್ಜೆಂಟಿನಾ ತಂಡಕ್ಕೆ ಆಘಾತ ನೀಡಿದರು. ನಂತರ ಹೆಚ್ಚುವರಿ ಸಮಯದಲ್ಲಿ ಮತ್ತೆ ಮೆಸ್ಸಿ ಹಾಗೂ ಎಂಬಾಪೆ ಚುರುಕಿನ ಆಟವಾಡಿ ತಲಾ ಒಂದೊಂದು ಗೋಲುಗಳಿಸಿ 1–1 ಗೋಲುಗಳ ಸಮಬಲ ಸಾಧಿಸಿತು. ಪೆನಾಲ್ಟಿ ಕಿಕ್‌ನಲ್ಲಿ ಅರ್ಜೆಂಟಿನಾದ ಗೋಲ್ ಕೀಪರ್ ಎಮಿಲಿಯಾನೋ ಮಾರ್ಟಿನೇಝ್ ತಡೆದ ಎರಡು ಗೋಲ್ ಗಳ ಸಹಾಯದಿಂದ ಅರ್ಜೇಂಟಿನಾ 4–2 ಗೋಲ್ ಗಳ ಅಂತರದಿಂದ ಗೆದ್ದು ವಿಶ್ವಕಪ್ ಅನ್ನು ತನ್ನದಾಗಿಸಿಕೊಂಡಿತು. ಆದರೆ ಫೈನಲ್ ಪಂದ್ಯದಲ್ಲಿ ಸೋತರೂ ಕೊನೆ ಕ್ಷಣದವರೆಗೂ ಅರ್ಜೆಂಟಿನಾವನ್ನು ಕಾಡಿ ಸುಲಭವಾಗಿ ಸೋಲೊಪ್ಪಿಕೊಳ್ಳದಂತೆ ಮಾಡಿದ ಹ್ಯಾಟ್ರಿಕ್ ಗೋಲುಗಳಿಸಿದ ಎಂಬಾಪೆ ವಿಶ್ವದ ಪುಟ್ಬಾಲ್ ಪ್ರೇಮಿಗಳ ಹೃದಯ ಕದ್ದು ಮೆಸ್ಸಿಯ ಉತ್ತಾರಾಧಿಕಾರಿಯಂತೆ ಮೆರೆದರು.

ಇನ್ನು ಈ ಟೂರ್ನಿಯಲ್ಲಿ ಅತಿ ಹೆಚ್ಚು ಗೋಲು ಗಳಿಸಿದ ಕೈಲಿಯಾನ್ ಎಂಬಾಪೆ (8 ಗೋಲು) ಚಿನ್ನದ ಬೂಟು, ಶ್ರೇಷ್ಠ ಪ್ರದರ್ಶನದೊಂದಿಗೆ ಅತ್ಯುತ್ತಮ ಆಟಗಾರನಾಗಿ ಮಿಂಚಿದ ಲಿಯೋನಿಯಲ್ ಮೆಸ್ಸಿಗೆ ಚಿನ್ನದ ಬಾಲ್, ಅತ್ಯುತ್ತಮ ಗೋಲ್ ಕೀಪರ್ ಆಗಿ ಅರ್ಜೆಂಟಿನಾದ ಎಮಿಲಿಯೊ ಮಾರ್ಟಿನೇಝ್ ಚಿನ್ನದ ಗ್ಲೌಸ್ ಪಡೆದರೆ, ಉತ್ತಮ ನಿರ್ವಹಣೆಗಾಗಿ ಯುವ ಆಟಗಾರನಾಗಿ ಅರ್ಜೆಂಟಿನಾದ ಎನ್‌ಝೋ ಫೆರ್ನಾಂಡಿಸ್ ಪ್ರಶಸ್ತಿ ಗೆದ್ದರು.

ಈ ಬಾರಿ ಗಮನ ಸೆಳೆದ ವಿಶ್ವಕಪ್‌ನ ಕೆಲವು ವಿಶೇಷತೆಗಳು

ಈ ವಿಶ್ವಕಪ್ ಆರಂಭದಿಂದಲೆ ಸಾಕಷ್ಟು ವಿಶೇಷ ಕ್ಷಣಗಳಿಗೆ ಸಾಕ್ಷಿಯಾಗಿತ್ತು. ಪ್ರಶಸ್ತಿ ಗೆಲ್ಲುವ ಕೆಲವು ಫೇವರಿಟ್ ತಂಡಗಳನ್ನು ಆಫ್ರಿಕಾ ಹಾಗೂ ಏಷ್ಯಾದ ತಂಡಗಳು ಸೋಲಿಸಿ ಹೊರ ಹಾಕುವ ಮೂಲಕ ಅಚ್ಚರಿ ಮೂಡಿಸಿದವು. ಜೊತೆಗೆ ಸೆಮಿಫೈನಲ್ ಪ್ರವೇಶಿಸುವ ಮೂಲಕ ಮೊರಾಕ್ಕೊ ಆಫ್ರಿಕಾ ಖಂಡದ ಮೊದಲ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಲ್ಲದೆ ಈ ವಿಶ್ವಕಪ್‌ನಲ್ಲಿ ಭಾರತ ತಂಡ ಭಾಗವಹಿಸದಿದ್ದರೂ ಭಾರತ ಸುದ್ದಿಯಲ್ಲಿತ್ತು. ಅದಕ್ಕೆ ಕಾರಣ ಕನ್ನಡತಿ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ. ತನ್ನ ನಟನೆಯ 'ಪಠಾಣ್' ಸಿನಿಮಾದ ಹಾಡೊಂದರಲ್ಲಿ ಕೇಸರಿ ಬಟ್ಟೆ ತೊಟ್ಟು ನೃತ್ಯ ಮಾಡಿದ್ದಾರೆಂದು ಕೋಮುವಾದಿ ಸಂಘಪರಿವಾರದವರು ಪಠಾಣ್ ಸಿನಿಮಾದ ಬಹಿಷ್ಕಾರಕ್ಕೆ ಕರೆ ನೀಡಿದ್ದರು. ಅಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡಿದ್ದರು. ಆದರೆ ಫಿಫಾ ಫೈನಲ್ ಪಂದ್ಯದಲ್ಲಿ ವಿಜೇತರಿಗೆ ನೀಡುವ ವಿಶ್ವಕಪ್ ಟ್ರೋಫಿಯನ್ನು ಸ್ಪ್ಯಾನಿಶ್‌ನ ಮಾಜಿ ಆಟಗಾರ ಐಕೇರ್ ಕಾಸಿಲಾಸ ಫೆರ್ನಾಂಡಿಸ್ ಜೊತೆ ಸೇರಿ ದೀಪಿಕಾ ಪಡುಕೋಣೆ ಅನಾವರಣ ಮಾಡುವ ಮೂಲಕ ಹೆಮ್ಮೆಯ ಕ್ಷಣದಲ್ಲಿ ಭಾಗಿಯಾದರು. ಇದು ಕೋಮುವಾದಿಗಳ ವ್ಯಾದಿಗೆ ಉತ್ತರ ಕೊಟ್ಟಂತ್ತಿತ್ತು.

ಹಾಗೆಯೇ ಸ್ವಿಡ್ಜರ್‌ಲ್ಯಾಂಡ್ ತಂಡದ ಆಟಗಾರ ಬ್ರೀಲ್ ಎಂಬೊಲೊ ಕ್ಯಾಮರೂನ್ ತಂಡದ ವಿರುದ್ಧ ಗೋಲು ಗಳಿಸಿದ್ದರೂ ಸಂಭ್ರಮಿಸಲಿಲ್ಲ. ಏಕೆಂದರೆ ಎಂಬಲೋ ಮೂಲತಃ ಕ್ಯಾಮರೂನ್ ದೇಶದವನು.



ಹಣ ಗಳಿಕೆಯ ಸದ್ದು

ಇನ್ನು ಹಣ ಗಳಿಕೆಯ ವಿಚಾರದಲ್ಲೂ ವಿಶ್ವಕಪ್ ಸಾಕಷ್ಟು ಸದ್ದು ಮಾಡಿದೆ. ಫಿಫಾ 2018ರಲ್ಲಿ ಒಟ್ಟು 6.4 ಬಿಲಿಯನ್ ಡಾಲರ್ ಲಾಭಗಳಿಸಿತ್ತು. 2022ರಲ್ಲಿ ಸುಮಾರು 7.5 ಬಿಲಿಯನ್ ಡಾಲರ್‌ನಷ್ಟು ಲಾಭಗಳಿಸಿದೆ ಎಂದು ಅಂದಾಜಿಸಲಾಗಿದೆ. 2018ರಲ್ಲಿ ಟಿವಿ ಪ್ರಸಾರದ ಹಕ್ಕು ನೀಡುವಿಕೆಯಲ್ಲಿ 4.6 ಬಿಲಿಯನ್ ಡಾಲರ್ ಗಳಿಸಿತ್ತು. 2022ರಲ್ಲಿ ಸುಮಾರು 400 ಮಿಲಿಯನ್‌ಗಿಂತಲೂ ಹೆಚ್ಚೆಂದು ಹೇಳಲಾಗಿದೆ (ಫಿಪಾ ಮುಂದಿನ ವಿಶ್ವಕಪ್ ಪಂದ್ಯಾವಳಿ ವೇಳೆಗೆ ಅಧಿಕೃತವಾಗಿ ಆದಾಯವನ್ನು ಘೋಷಿಸಲಿದೆ). ಜಾಹಿರಾತು, ಆನಿಮೇಷನ್ ಗೇಮ್‌ಗಳ ತಯಾರಿಕೆ ಜೊತೆಗೆ ಬಿಡ್ಡಿಂಗ್‌ನಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಹರಿದಾಡಿದೆ. ಇನ್ನು ಕತಾರ್ ದೇಶ ಈ ಪಂದ್ಯಾವಳಿ ಅಯೋಜಿಸುವ ಮೂಲಕ ಜಾಗತಿಕವಾಗಿ ಗುರುತಿಸಿಕೊಂಡಿದ್ದಲ್ಲದೆ ಹೂಡಿಕೆ ಹಾಗೂ ಪ್ರವಾಸೋದ್ಯಮಕ್ಕೆ ತೆರೆದುಕೊಂಡಿದೆ.

ದಾಖಲೆ ಬರೆದ ಪಂದ್ಯ ವೀಕ್ಷಣೆ

ಅರ್ಜೆಂಟಿನಾ ಮತ್ತು ಫ್ರಾನ್ಸ್ ನಡುವೆ ನಡೆದ ಫೈನಲ್ ಪಂದ್ಯವನ್ನು ಜಗತ್ತಿನಾದ್ಯಂತ ಸುಮಾರು 26 ಮಿಲಿಯನ್ ಜನ ದೂರದರ್ಶನದ ಮೂಲಕ ವೀಕ್ಷಿಸಿದ್ದಾರೆಂದು ತಿಳಿದು ಬಂದಿದೆ. ಅಲ್ಲದೆ ಭಾರತದಲ್ಲಿ ಸುಮಾರು 3.2 ಕೋಟಿ ಜನ ಜಿಯೋ ಸಿನಿಮಾ ಆ್ಯಪ್ ಮೂಲಕ ಮೊಬೈಲ್‌ನಲ್ಲಿ ಫೈನಲ್ ಪಂದ್ಯವನ್ನು ವೀಕ್ಷಣೆ ಮಾಡಿದ್ದು ಇದು ಭಾರತದಲ್ಲಿ ದಾಖಲೆ ಬರೆದಿದೆ.

ಮುಂದಿನ ವಿಶ್ವಕಪ್ ಪಂದ್ಯಾವಳಿ

2026ರಲ್ಲಿ ನಡೆಯುವ ವಿಶ್ವಕಪ್ ಪಂದ್ಯಾವಳಿಯ ಆತಿಥ್ಯವನ್ನು ಕೆನಡಾ, ಮೆಕ್ಸಿಕೊ ಹಾಗೂ ಅಮೇರಿಕಾ ದೇಶಗಳು ಜಂಟಿಯಾಗಿ ವಹಿಸಿಕೊಂಡಿವೆ. 2026ರಲ್ಲಿ ನಡೆಯಲಿರುವ ಪಂದ್ಯಾವಳಿಯಲ್ಲಿ 32 ತಂಡಗಳ ಬದಲಾಗಿ 48 ತಂಡಗಳಿಗೆ ಅವಕಾಶ ನೀಡುವುದಾಗಿ ಫಿಫಾ ಘೊಷಿಸಿದೆ. ಇದರಿಂದಾಗಿ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾಗವಹಿಸುವ ಭಾರತದ ಕನಸು ನನಸಾಗಬಹುದು. ಆದರೆ ಅದು ಫಿಪಾ ನಡೆಸುವ ಅರ್ಹತಾ ಪಂದ್ಯಾವಳಿಯಲ್ಲಿ ಮೊದಲ ಅಥವಾ ಎರಡನೇ ಸ್ಥಾನ ಪಡೆದಾಗ ಮಾತ್ರ. ಆ ನಿಟ್ಟಿನಲ್ಲಿ ಭಾರತದ ಫುಟ್ಬಾಲ್ ತಂಡ ಈಗಿನಿಂದಲೇ ಅಗತ್ಯ ತಯಾರಿ ಮಾಡಿಕೊಳ್ಳಲೇಬೇಕು.



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**